ಸಂಪುಟ: 04 ಸಂಚಿಕೆ: 284 ಪುಟಗಳು: 08 ಶುಕ್ರವಾರ 27 ಡಿಸೆಂಬರ್ 2024

www.udayavahini.in | epaper.udayavahini.in | Udaya vahini news | Udaya vahini news | Udayavahini news youtube | udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 | +91 8035841833 | ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಸಾಧನೆ ಮಾಡಲು ಹೊರಟವನಿಗೆ ದಾರಿಯಲ್ಲಿ ಬೆಕ್ಕುಗಳಿಗಿಂತ ಹೆಚ್ಚು ಜನಗಳೇ ಅಡ್ಡ ಬರುತ್ತಾರೆ

## ಸಿ.ಟಿ.ರವಿ, ಮುನಿರತ್ನ ಮೇಲಿನ ಹಲ್ಲೆ ನೋಡಿದರೆ ರಾಜ್ಯದಲ್ಲಿ ಗೂಂಡಾ ಆಡಳಿತವಿದೆ ಎಂದರ್ಥ



• ಉದಯವಾಹಿನಿ, ಬೆಂಗಳೂರು

ಶಾಸಕರಾದ ಸಿ.ಟಿ.ರವಿ, ಶಾಸಕ ಮುನಿರತ್ನ ಅವರ ಮೇಲಿನ ಹಲ್ಲೆ ನೋಡಿದರೆ, ರಾಜ್ಯದಲ್ಲಿ ಗೂಂಡಾ ಆಡಳಿತ ನಡೆಯುತ್ತಿದೆ ಎಂದರ್ಥ ಎಂದು ವಿರೋಧ ಪಕ್ಷದ ನಾಯಕ ಆರ್ ಅಶೋಕ್ ವಾಗ್ದಾಳಿ ನಡೆಸಿದ್ದಾರೆ. ಕೋರ್ಟ್ ನಲ್ಲಿ ತೀರ್ಮಾನವಾಗುವವರೆಗೆ ಯಾರೂ ಅಪರಾಧಿಯಲ್ಲ ಎಂದು ವ್ಯಾಖ್ಯಾನಿಸಿದರು.

ಬೆಂಗಳೂರಿನಲ್ಲಿ ಗುರುವಾರ ಮಾತನಾಡಿದ ಅವರು, ಸರ್ಕಾರದ ಹಣವನ್ನು ಬಳಸಿ ಬೆಳಗಾವಿಯಲ್ಲಿ ಕಾಂಗ್ರೆಸ್ ಸರ್ಕಾರ ತನ್ನ ಪಕ್ಷದ ಸಮಾವೇಶವನ್ನು ಮಾಡುತ್ತಿರುವುದು ಖಂಡನೀಯ. ಇದರ ವಿರುದ್ಧ ವಿಧಾನಸೌಧ ಮುಂಭಾಗ ಶುಕ್ರವಾರ ಪ್ರತಿಭಟಿಸಲಾಗುವುದು ಎಂದು ಹೇಳಿದರು.

ಸ್ವಾತಂತ್ರ್ಯ ದೊರೆತ ನಂತರ ಕಾಂಗ್ರೆಸ್ ಪಕ್ಷವನ್ನು ವಿಸರ್ಜಿಸಿ ಎಂದು ಮಹಾತ್ಮ ಗಾಂಧೀಜಿ ಹೇಳಿದ್ದರು. ನಕಲಿ ಗಾಂಧಿಗಳು ಕಾಂಗ್ರೆಸ್ ಪಕ್ಷವನ್ನು ಮುನ್ನಡೆಸಿ ಈಗ ಬೆಳಗಾವಿಯಲ್ಲಿ ಸಮಾವೇಶ ಮಾಡುತ್ತಿದ್ದಾರೆ. ಗಾಂಧೀಜಿ ಬಹಳ ಸರಳವಾಗಿದ್ದರು. ಆದರೆ ಕಾಂಗ್ರೆಸ್ ನಾಯಕರು ಆಡಂಬರದ ಬದುಕು ನಡೆಸುತ್ತಿದ್ದಾರೆ. ಪ್ರಧಾನಿ, ಗೃಹ ಸಚಿವರು, ಎಚ್.ಡಿ.ಕುಮಾರಸ್ವಾಮಿ, ಸಂಸದರು, ಯಾರನ್ನೂ ಆಹ್ವಾನಿಸದೆ ಕಾಂಗ್ರೆಸ್ ಪಕ್ಷದ ನಾಯಕರನ್ನು ಮಾತ್ರ ಸಮಾವೇಶಕ್ಕೆ ಆಹ್ವಾನಿಸಲಾಗಿದೆ. ಇದು ಸರ್ಕಾರಿ ಕಾರ್ಯಕ್ರಮವಲ್ಲ, ಕಾಂಗ್ರೆಸ್ ಪಕ್ಷದ ಕಾರ್ಯಕ್ರಮ ಎಂದು ದೂರಿದರು.

ಇದು ಕಾಂಗ್ರೆಸ್‌ನ ಕಾರ್ಯಕ್ರಮವಾಗಿರುವುದರಿಂದ ನಾವ್ಯಾರೂ ಹೋಗುವುದಿಲ್ಲ. ವಿಧಾನಸೌಧ ಮುಂಭಾಗದ ಗಾಂಧಿ ಪ್ರತಿಮೆಗೆ ನಾವೆಲ್ಲರೂ ಪುಷ್ಪ ನಮನ ಸಲ್ಲಿಸಲಿದ್ದೇವೆ ಎಂದು ತಿಳಿಸಿದರು. ಕಾಂಗ್ರೆಸ್‌ನವರು ಅಖಂಡ ಭಾರತವನ್ನು ಒಡೆದು ಹಾಕಿದ್ದರು. ನಾವು ಅಖಂಡ ಭಾರತದ ಚಿತ್ರ ತೋರಿಸಿದರೆ, ಕಾಂಗ್ರೆಸ್‌ನವರು ಜಮ್ಮು-ಕಾಶ್ಮೀರ ಇಲ್ಲದ ಭಾರತದ ಚಿತ್ರ ತೋರಿಸುತ್ತಿದ್ದಾರೆ.

ಭಾರತದ ಭೂಪಟವನ್ನೇ ಛಿದ್ರ ಮಾಡಿರುವುದು ಖಂಡನೀಯ. ಕಾಂಗ್ರೆಸ್ ಇಡೀ ದೇಶವನ್ನು ಒಡೆಯುವ ಮನಸ್ಥಿತಿ ಹೊಂದಿದೆ ಎಂದರು.

## ರಾಜಿ ಆದರೆ ಸಿಐಡಿ ತನಿಖೆ ನಿಲ್ಲಬಹುದು: ಹೊರಟ್ಟಿ

• ಉದಯವಾಹಿನಿ, ಹುಬ್ಬಳ್ಳಿ

'ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಹಾಗೂ ಸಚಿವ ಲಕ್ಷ್ಮಿ ಹೆಬ್ಬಾಳಕರ ಇಬ್ಬರೂ ರಾಜಿ ಮಾಡಿಕೊಳ್ಳುವ ವಾತಾವರಣ ಮೂಡಿದರೆ, ಇಬ್ಬರನ್ನು ಕರೆಸಿ ಪ್ರಕರಣ ಅಂತ್ಯಗೊಳಿಸಲು ಯತ್ನಿಸಲಾಗುವುದು' ಎಂದು ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಹೇಗಾದರೂ ಪ್ರಕರಣ ಇಲ್ಲಿಗೆ ಅಂತ್ಯಗೊಳಿಸಬೇಕು ಎಂದು ಕೊಂಡಿದ್ದೇನೆ. ಹೊಂದಾಣಿಕೆಗೆ ಒಪ್ಪಿಕೊಂಡರೆ ಸಿಐಡಿ ತನಿಖೆ ಅಲ್ಲಿಗೇ ನಿಲ್ಲಬಹುದು' ಎಂದು ಅಭಿಪ್ರಾಯಪಟ್ಟರು. 'ಸದನದಲ್ಲೇ ವಿಷಯ ಚರ್ಚೆಗೆ ಅವಕಾಶ ಕಲ್ಪಿಸಲು ಕೆಲವರು ಸಲಹೆ ನೀಡಿದ್ದರು. ಅವಕಾಶ ನೀಡಿದ್ದರೆ ಸದನ ರಣರಂಗವಾಗುವ ಸಾಧ್ಯತೆ ಇತ್ತು. ಮನೆಯಲ್ಲಿ ಮಕ್ಕಳು ಜಗಳವಾಡಿದರೆ ಹಿರಿಯರು ಸಮಾಧಾನಪಡಿಸಬೇಕು. ತುಪ್ಪ ಸುರಿಯುವ ಕೆಲಸ ಮಾಡಬಾರದು' ಎಂದರು.

## ದೇವರಿಗೆ ಹರಕೆ ಹೊತ್ತಿದ್ದೇನೆ, ತನಿಖೆ ಮುಗಿದ ಮೇಲೆ ತೀರಿಸ್ತೇನೆ

• ಉದಯವಾಹಿನಿ, ಚಿಕ್ಕಮಗಳೂರು

ಕಾನೂನಾತ್ಮಕ ಹೋರಾಟ ಮುಗಿದ ಬಳಿಕ ನಾನು ಧರ್ಮಸ್ಥಳಕ್ಕೆ ಹೋಗುತ್ತೇನೆ. ಸವದತ್ತಿ ಯಲ್ಲಮ್ಮನ ದೇವಸ್ಥಾನಕ್ಕೂ ಹೋಗಿ ಹರಕೆ ತೀರಿಸುತ್ತೇನೆ' ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಹೇಳಿದರು. 'ಆಣೆ ಮಾಡಲು ಲಕ್ಷ್ಮೀ ಹೆಬ್ಬಾಳಕರ ಅವರು ಧರ್ಮಸ್ಥಳಕ್ಕೆ ಕರೆದಿದ್ದಾರೆ. ಪ್ರಕರಣ ಈಗ ತನಿಖಾ ಹಂತದಲ್ಲಿ ಇದೆ. ಎಲ್ಲಾವೂ ಮುಗಿದ ಬಳಿಕ ಹೋಗುತ್ತೇನೆ' ಎಂದು ಅವರು ಸುದ್ದಿಗೋಷ್ಠಿಯಲ್ಲಿ ಬುಧವಾರ ಪ್ರತಿಕ್ರಿಯಿಸಿದರು. 'ನನ್ನನ್ನು ಬಂಧಿಸಿ ಇಡೀ ರಾತ್ರಿ ಸುತ್ತಾಡಿಸಿದಾಗ ವಾಹನ ಸವದತ್ತಿ ಯಲ್ಲಮ್ಮನ ದೇವಾಲಯದ ಎದುರೇ ಹಾದು ಹೋಯಿತು. ಆಗ ಹರಕೆ ಕಟ್ಟಿಕೊಂಡಿದ್ದ. ದೇವಿಯ ಬಳಿ ಏನು ಬೇಡಿ ಕೊಂಡಿದ್ದೇನೆ ಎಂಬುದನ್ನು ಹರಕೆ ತೀರಿಸುವ ದಿನವೇ ಹೇಳುತ್ತೇನೆ' ಎಂದರು. 'ಖಾನಾಪುರ ಠಾಣೆ ಸಬ್ ಇನ್‌ಸ್ಪೆಕ್ಟರ್ ಅಮಾನತು ಬಗ್ಗೆ ಗೊತ್ತಿಲ್ಲ. ಪಿಎಸ್‌ಐ ಅಮಾನತು ಕ್ರಮದಿಂದ ಪ್ರಯೋಜನ ಇಲ್ಲ. ಅನುಮತಿ ಇಲ್ಲದಿದ್ದರೂ ನಾಲ್ಕು ಜಿಲ್ಲೆ ಸುತ್ತಾಡಿಸಿದ್ದಾರೆ. ಎನ್‌ಕೌಂಟರ್ ಅಥವಾ ಹಲ್ಲೆ ಮಾಡುವ ಉದ್ದೇಶದಿಂದ ಕರೆದುಕೊಂಡು ಹೋಗಿದ್ದಾರೆ. ಈ ಬಗ್ಗೆ ತನಿಖೆ ಆಗಬೇಕು. ಅಲ್ಲಿನ ಎಸ್ಪಿ, ಪೊಲೀಸ್ ಕಮಿಷನರ್ ಮತ್ತು ಆಗಾಗ ನಿರ್ದೇಶನ ನೀಡುತ್ತಿದ್ದವರ ವಿರುದ್ಧ ಕ್ರಮ ಆಗಬೇಕು' ಎಂದು ಒತ್ತಾಯಿಸಿದರು.

### ಮಾಜಿ ಪ್ರಧಾನಿ
## ಡಾ. ಮನಮೋಹನ್ ಸಿಂಗ್ ನಿಧನ

• ಉದಯವಾಹಿನಿ, ನವದೆಹಲಿ

ನರೇಂದ್ರ ಮೋದಿಗೂ ಮುನ್ನ ಎರಡು ಅವಧಿಗಳ ಕಾಲಕ್ಕೆ ದೇಶದ ಪ್ರಧಾನಿ ಪಟ್ಟವನ್ನು ಅಲಂಕರಿಸಿದ್ದ ಮನಮೋಹನ್ ಸಿಂಗ್ ಅವರು ನಿಧನರಾಗಿದ್ದಾರೆ. ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ 92 ವರ್ಷದ ಮನಮೋಹನ್ ಸಿಂಗ್ ದೆಹಲಿಯ ಏಮ್ಸ್ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ. ಡಾ. ಸಿಂಗ್ ಅವರು ಪತ್ನಿ ಗುರುಶರಣ್ ಕೌರ್, ಮೂವರು ಪುತ್ರಿಯರನ್ನು



ಅಗಲಿದ್ದಾರೆ. 1991 ರಲ್ಲಿ ರಾಜ್ಯಸಭೆಗೆ ಪ್ರವೇಶ ಮಾಡುವ ತಮ್ಮ ರಾಜಕೀಯ ಇನ್ನಿಂಗ್ಸ್ ಆರಂಭಿಸಿದ್ದ ಸಿಂಗ್, 2024ರ ಏಪ್ರಿಲ್‌ನಲ್ಲಿ ಅವರ ರಾಜ್ಯಸಭೆ ಅಧಿಕಾರ ವಧಿ ಅಂತ್ಯವಾಗಿತ್ತು. ಈ ಮೂಲಕ ಅವರು ಸಂಸತ್ತಿನ ಮೇಲ್ಮನೆಯಲ್ಲಿ 33 ವರ್ಷಗಳ ಕಾಲ ಇದ್ದರು.

ದೇಶದ ಆರ್ಥಿಕ ಸುಧಾರಣೆಗಳ ದಿಟ್ಟ ಹೆಜ್ಜೆ ಕೈಗೊಂಡು, ಆಧುನಿಕ ಭಾರತದ ಆರ್ಥಿಕತೆಯ ರೂವಾರಿ ಎನಿಸಿದ್ದ ಸಿಂಗ್, 1991ರ ಅಕ್ಟೋಬರ್‌ನಲ್ಲಿ ಮೊದಲ ಬಾರಿಗೆ ರಾಜ್ಯಸಭೆ ಪ್ರವೇಶಿಸಿದ್ದರು. ಅವರು 1991ರಿಂದ 1996ರವರೆಗೆ ನರಸಿಂಹ ರಾವ್ ಸಂಪುಟದಲ್ಲಿ ಹಣಕಾಸು ಸಚಿವರಾಗಿದ್ದರು. ಬಳಿಕ 2004 ರಿಂದ 2014ರವರೆಗೆ ದೇಶದ ಪ್ರಧಾನಿಯಾಗಿದ್ದರು.ಡಾ. ಮನಮೋಹನಸಿಂಗ್ ಅವರ ಶೈಕ್ಷಣಿಕ ಜ್ಞಾನ ಅವರು ಪಂಜಾಬ್ ವಿಶ್ವವಿದ್ಯಾಲಯದಲ್ಲಿ ಹಾಗೂ ದೆಹಲಿಯ ಪ್ರತಿಷ್ಠಿತ ಆರ್ಥಿಕ ಶಾಲೆ ಯಲ್ಲಿ ಬೋಧಕರಾಗಿ ಸಾಕಾರಗೊಂಡವು. ಯು.ಎನ್.ಸಿ.ಟಿ.ಎ.ಡಿ. ಸಚಿವಾ ಲಯದಲ್ಲಿ ಅವರು ಕೆಲಕಾಲ ಸೇವೆ ಸಲ್ಲಿಸಿದ್ದರು. ಇದರ ಫಲವಾಗಿ 1987 ರಿಂದ 1990ರವರೆಗೆ ಅವರನ್ನು ಜೀನಿವಾದಲ್ಲಿನ ದಕ್ಷಿಣ ಆಯೋಗಕ್ಕೆ ಮಹಾಪ್ರಧಾನ ಕಾರ್ಯದರ್ಶಿಯಾಗಿ ನೇಮಿಸಲಾಗಿತ್ತು. ಸ್ವತಂತ್ರ ಭಾರತದ ಆರ್ಥಿಕ ಇತಿಹಾಸದಲ್ಲಿ ಒಂದು ಮಹತ್ವದ ತಿರುವು ಮೂಡಿತು. 1991ರಿಂದ 1996ರವರೆಗೆ ಡಾ. ಸಿಂಗ್ ಅವರು ಭಾರತದ ಹಣಕಾಸು ಸಚಿವರಾಗಿ ಸೇವೆ ಸಲ್ಲಿಸಿದ್ದರು. ಅವರು ಆಗ ಮಾಡಿದ ಆರ್ಥಿಕ ಸುಧಾರಣೆಗಳಿಗೆ ಈಗಲೂ ವಿಶ್ವದ ಮನ್ನಣೆ ಇದೆ. ಜನಪ್ರಿಯದೃಷ್ಟಿಕೋನದಿಂದ ನೋಡುವುದಾದರೆ ಭಾರತದ ಅಂದಿನ ದಿನಗಳು ಡಾ. ಸಿಂಗ್ ಅವರ ವ್ಯಕ್ತಿತ್ವವನ್ನು ಬಿಂಬಿಸುತ್ತವೆ. ಡಾ. ಸಿಂಗ್ ಅವರು ಸಾಮಾಜಿಕ ಕ್ಷೇತ್ರದ ತಮ್ಮ ಅದ್ವಿತೀಯ ಸಾಧನೆಗಾಗಿ ಹತ್ತು ಹಲವು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.



# ಕೈನಾಯಕರ ಸಂಗಮ ಶತಮಾನೋತ್ಸವ ಸಂಭ್ರಮ



**ಗಾಂಧಿ ತತ್ವಕ್ಕೆ ಕೈ ಅಂಕಿತ**




- ಕಾಂಗ್ರೆಸ್ ಅಧಿವೇಶನ: ಖಾದಿ ಉತ್ಸವ, ವಸ್ತು ಪ್ರದರ್ಶನ
- ಮಾರಾಟ ಮೇಳಕ್ಕೆ ಸಿದ್ದರಾಮಯ್ಯ ಚಾಲನೆ
- ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವ ಆಚರಣೆ;
- ಬೆಳಗಾವಿಯ ವೀರಸೌಧಕ್ಕೆ ಸಿಕ್ಕು ಹೊಸ ರೂಪ...!
- ಮಹಾತ್ಮ ಗಾಂಧೀಜಿ ಪುತ್ಥಳಿ ಅನಾವರಣ

### ನವನವೀನ ಉತ್ಪನ್ನಗಳು

ಬೆಳಗಾವಿಯ ಈ ಮೇಳದ ಮಳಿಗೆಗಳಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶದ ಸ್ವ-ಸಹಾಯ ಗುಂಪಿನ ಮಹಿಳೆಯರು ಉತ್ಪಾದಿಸಿರುವ ಉತ್ಪನ್ನಗಳಾದ ಚನ್ನಪಟ್ಟಣದ ಮರದ ಗೊಂಬೆಗಳು, ಕೊಪ್ಪಳದ ಕಿನ್ನಾಳ ಆಟದ ಸಾಮಾನುಗಳು, ಮೊಳಕಾಲ್ಮೂರು ಸೀರೆಗಳು, ಇಳಕಲ್ ಸೀರೆಗಳು, ರೇಷ್ಮೆ ಸೀರೆಗಳು, ವಿವಿಧ ನವಾಕರ್ಷಣೆಯ ಬಟ್ಟೆಗಳು, ನಾರಿನ ಉತ್ಪನ್ನದ ಬ್ಯಾಗ್‌ಗಳು, ಮಸಾಲಾ ಉತ್ಪನ್ನಗಳು, ಸಿರಿ ಧಾನ್ಯ



ಉತ್ಪನ್ನಗಳು, ಮೌಲ್ಯವರ್ಧಿತ ಕರಾವಳಿ ಉತ್ಪನ್ನಗಳು, ವಿವಿಧ ಬಗೆಯ ಖಾದಿ ಉತ್ಪನ್ನಗಳು, ಬಾಳೆ ನಾರಿನಿಂದ ಉತ್ಪಾದಿಸಿದ ಉತ್ಪನ್ನಗಳು, ಗೃಹಾಲಂಕಾರಿಕ ವಸ್ತುಗಳು, ಆಯುರ್ವೇದ ಔಷಧಿಯುತ ಉತ್ಪನ್ನಗಳು, ಪಾರಂಪರಿಕ ವಸ್ತುಗಳು, ಗೃಹೋಪಯೋಗಿ ವಸ್ತುಗಳು, ನವೀನ ವಿನ್ಯಾಸದ ಆಭರಣಗಳು, ಆಹಾರ ಉತ್ಪನ್ನಗಳು ಸೇರಿದಂತೆ ಅನೇಕ ಉತ್ಪನ್ನಗಳು ಸಾರ್ವಜನಿಕರಿಗೆ ಕೈಗೆಟುಕುವ ಬೆಲೆಯಲ್ಲಿ ಲಭ್ಯವಿವೆ.

• ಉದಯವಾಹಿನಿ, ಬೆಳಗಾವಿ

ಮಹಾತ್ಮ ಗಾಂಧೀಜಿ ಅಧ್ಯಕ್ಷತೆಯಲ್ಲಿ 1924ರಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವ ಹಿನ್ನೆಲೆ ಬೆಳಗಾವಿಗೆ ಕಾಂಗ್ರೆಸ್ ಪಕ್ಷದ ಘಟಾನುಘಟಿ ನಾಯಕರ ದಂಡೇ ಆಗಮಿಸಿದೆ.ಮಲ್ಲಿಕಾರ್ಜುನ ಖರ್ಗೆ ನೇತೃತ್ವದಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಕಾರ್ಯಕಾರಿಣಿ ಸಭೆ ಆರಂಭವಾಗಿದ್ದು, 200ಕ್ಕೂ ಅಧಿಕ ಕಾಂಗ್ರೆಸ್ ರಾಷ್ಟ್ರೀಯ ನಾಯಕರು ಭಾಗವಹಿಸಿದ್ದಾರೆ. ಸೋನಿಯಾ ಗಾಂಧಿ, ಸಂಸದೆ ಪ್ರಿಯಾಂಕಾ ಗಾಂಧಿ ಗೈರಾಗಿದ್ದಾರೆ.

ವೀರಸೌಧಕ್ಕೆ 100 ಮೀಟರ್ ನಡೆದುಕೊಂಡೆ ಆಗಮಿಸಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ಸೇರಿ ಇನ್ನಿತರ ನಾಯಕರನ್ನು ಸೇವಾ ದಳದ ಕಾರ್ಯಕರ್ತರು ಪಥಸಂಚಲನದ ಮೂಲಕ ಅದ್ದೂರಿಯಾಗಿ ಸ್ವಾಗತಿಸಿದರು. ಈ ವೇಳೆ ಭಾರತ್ ಮಾತಾಕೀ ಜೈ ಘೋಷಣೆ ಮೊಳಗಿತು. ಜೊತೆಗೆ ಕೈಯಲ್ಲಿ ಎಲ್ಲಾ ನಾಯಕರು ನವಸತ್ಯಾಗ್ರಹ ಎಂಬ ಬರಹದ ಗಾಂಧೀಜಿ ಭಾವಚಿತ್ರ ಹಿಡಿದು ನಡೆದುಕೊಂಡೇ ಸೌಧ ಪ್ರವೇಶಿಸಿದರು.

ಬಳಿಕ ವೀರಸೌಧ ಆವರಣದಲ್ಲಿ ಕಾಂಗ್ರೆಸ್ ಧ್ವಜಾರೋಹಣ ಮಲ್ಲಿಕಾರ್ಜುನ ಖರ್ಗೆ ನೆರವೇರಿಸಿದರು. ರಾಹುಲ್, ಸಿಎಂ ಸಿದ್ದರಾಮಯ್ಯ ಅವರು ಒಂದೊಂದು ಗಿಡ ನೆಟ್ಟು ಗಾಂಧೀಜಿ ಪ್ರತಿಮೆಗೆ ಎಲ್ಲಾ ನಾಯಕರು ನಮನ ಸಲ್ಲಿಸಿದರು. ಸಿಡಬ್ಲ್ಯುಸಿಯ ಎಲ್ಲಾ ಸದಸ್ಯರಿಗೆ ಮೈಸೂರು ರೇಷ್ಮೆ ಶಾಲು, ಬೆಳಗಾವಿ ಕುಂದಾ, ಗೋಕಾಕ್ ಕರದಂಟು, ಮೈಸೂರು ಸ್ಯಾಂಡಲ್ ಸೋಪ್, ಲೆದರ್ ಬ್ಯಾಗ್, ಗಾಂಧೀಜಿ ಅವರ 'ನನ್ನ ಕನಸಿನ ಭಾರತ' ಪುಸ್ತಕವನ್ನು ನೆನಪಿನ ಕಾಣಿಕೆಯಾಗಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿತರಿಸಿದರು. ನಗರದ ವೀರಸೌಧದಲ್ಲಿ ನಡೆಯುತ್ತಿರುವ ಸಭೆಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿಕೆಶಿವಕುಮಾರ್, ಎಐಸಿಸಿ ಉಸ್ತುವಾರಿಗಳಾದ ರಣದೀಪ್ ಸಿಂಗ್ ಸುರ್ಜೇವಾಲಾ, ಕೆ.ಸಿ.ವೇಣುಗೋಪಾಲ ಸೇರಿದಂತೆ ಹಲವು ಕಾಂಗ್ರೆಸ್ ನಾಯಕರು ಸಭೆಯಲ್ಲಿ ಪಾಲ್ಗೊಂಡಿದ್ದಾರೆ. ಕರ್ನಾಟಕದ ಕಾಂಗ್ರೆಸ್ ಪಾಕ್ ಆಕ್ರಮಿತ ಕಾಶ್ಮೀರವನ್ನು ಪಾಕಿಸ್ತಾನಕ್ಕೆ ಧಾರೆ ಎರೆದು ಕೊಟ್ಟಿದೆ 'ಗಾಂಧಿ ಭಾರತ' ಹೆಸರಿನಲ್ಲಿ ಭಾರತದ ನಕಾಶೆ ಕಾಂಗ್ರೆಸ್ಸಿಗರು ತಿರುಚಿರುವುದು ನಿಜಕ್ಕೂ ದೇಶದ್ರೋಹ. ವೈಯುಕ್ತಿಕ ಸ್ವಾರ್ಥ ಸಾಧನೆಗಾಗಿ, ಓಟ್ಬ್ಯಾಂಕ್ ರಾಜಕಾರಣಕ್ಕಾಗಿ ಕಾಂಗ್ರೆಸ್ ಎಂತಹ ಹೀನ ಕೆಲಸಕ್ಕಾದರೂ ಸಿದ್ಧ ಎಂಬುದಕ್ಕೆ ಬೆಳಗಾವಿಯಲ್ಲಿ ಹಾಕಿಸಿರುವ ಬ್ಯಾನರ್‌ಗಳೇ ಸಾಕ್ಷಿ ಎಂದು ಬಿಜೆಪಿ ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದೆ. ಮುಂದುವರೆದು, ಸಿದ್ದರಾಮಯ್ಯ ಅವರೇ, ಕೂಡಲೇ ಈ ವಿವಾದಿತ ಬ್ಯಾನರ್‌ಗಳನ್ನು ತೆರವುಗೊಳಿಸಿ, ಭಾರತದ ನಕಾಶೆ ತಿರುಚಿದ ದೇಶದ್ರೋಹಿಗಳ ವಿರುದ್ಧ ಕ್ರಮಕೈಗೊಳ್ಳಿ ಎಂದು ರಾಜ್ಯ ಬಿಜೆಪಿ ಘಟಕ ಒತ್ತಾಯಿಸಿದೆ.

### ಆಕರ್ಷಣೀಯ ಅಕ್ಕ ಕೆಫೆ

ಸರ್ಕಾರವು 2024-25ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವಂತೆ ರಾಜ್ಯದಲ್ಲಿ 50 'ಅಕ್ಕ ಕೆಫೆ'ಗಳನ್ನು ಒಂದೇ ಮಾದರಿ ವಿನ್ಯಾಸದಡಿ ಅನುಷ್ಠಾನಗೊಳಿಸಲಾಗುತ್ತಿದೆ. ಈ ಕಾರ್ಯಕ್ರಮದಡಿ ಅಂದಾಜು 1200 ಸ್ವ-ಸಹಾಯ ಗುಂಪಿನ ಮಹಿಳೆಯರಿಗೆ ಜೀವನೋಪಾಯಕ್ಕೆ ಅನುಕೂಲ ಕಲ್ಪಿಸಲಾಗುತ್ತಿದೆ. ಮುಂದುವರೆದು, 'ಅಕ್ಕ-ಕಫೆ' ಕಾರ್ಯಕ್ರಮದ ಭಾಗವಾಗಿ ಈ ಮೇಳದ ಮೈದಾನದಲ್ಲಿನ ಆಹಾರ ಕೋರ್ಟ್‌ನ್ನು ಅಕ್ಕ-ಕೆಫೆ ಶೀರ್ಷಿಕೆಯಡಿ ಆಕರ್ಷಣೀಯವಾಗಿ ಸಿದ್ದಪಡಿಸಲಾಗಿದೆ. ಸ್ಥಳದಲ್ಲೇ ಆಹಾರ ತಯಾರಿಕೆ: ಈ ಆಹಾರ ಮಳಿಗೆಗಳಲ್ಲಿ ಉತ್ತರ ಕರ್ನಾಟಕದಲ್ಲಿ ಹೆಸರುವಾಸಿಯಾದ ಗಿರಮಿಟ್/ಚುರುಮರಿ ಮಂಡಕ್ಕಿ, ಜೋಳದ ಖಡಕ್ ರೊಟ್ಟಿ ಸೇರಿದಂತೆ ಹೋಳಿಗೆ, ಮಂಗಳೂರು ನೀರ್‌ದೋಸೆ ಮತ್ತು ಮಾಂಸಹಾರಿ ಆಹಾರಗಳಾದ ಬ್ಯಾಂಬು ಬಿರಿಯಾನಿ ಮುಂತಾದವುಗಳನ್ನು ಸ್ಥಳದಲ್ಲೇ ತಯಾರಿಸಿ ಕೊಡಲಾಗುತ್ತಿದೆ.

**1** ಗಾಂಧಿ ಭಾರತ ಹೆಸರಿನಲ್ಲಿ ಬೆಳಗಾವಿ ಅಧಿವೇಶನ ಆಚರಿಸುತ್ತಿರುವುದು ವಿಪರ್ಯಾಸ

**2** ಸ್ವಾತಂತ್ರ್ಯ ಪೂರ್ವದ ಕಾಂಗ್ರೆಸ್ ಅಂದರೆ ಅದು ರಾಜಕೀಯ ಪಕ್ಷವಾಗಿರಲಿಲ್ಲ, ದೇಶವನ್ನ ದಾಸ್ಯದಿಂದ ಮುಕ್ತಿಗೊಳಿಸಲು ಹೋರಾಡುತ್ತಿದ್ದ ದೇಶಭಕ್ತರ ಒಕ್ಕೂರಲಿನ ವೇದಿಕೆ

**3** ಗಾಂಧೀಜಿ ಮಾತ್ರವಲ್ಲ , ಅಂಬೇಡ್ಕರ್ ಅವರೂ ಸಹ ಕಾಂಗ್ರೆಸ್ ಪಕ್ಷ ತಿರಸ್ಕಾರ

### ಉತ್ಪನ್ನಗಳಿಗೆ ಮಾರುಕಟ್ಟೆ

ರಾಜ್ಯದಲ್ಲಿ ಈ ಮಹಿಳೆಯರು ಉತ್ಪನ್ನಗಳ ಮಾರಾಟಕ್ಕೆ ಪ್ರತಿಯೊಂದು ಹಳ್ಳಿ, ಸಂತೆ, ತಾಲ್ಲೂಕು ಮಟ್ಟದಲ್ಲಿ ಮಾಸಿಕ ಸಂತೆ, ಜಿಲ್ಲಾ ವಸ್ತು ಪ್ರದರ್ಶನ ಮಾರಾಟ ಮೇಳ ಏರ್ಪಡಿಸುವುದಷ್ಟೆ ಅಲ್ಲದೆ ಇತರೆ ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ನಡೆಯುವ ಮೇಳಗಳಿಗೆ ರಾಜ್ಯದ ಮಹಿಳೆಯರನ್ನು ನಿಯೋಜನೆ ಮಾಡುವ ಮೂಲಕ ಅವರ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ಬೆಳಗಾವಿಯಲ್ಲಿ ಕಳೆದ 3 ವರ್ಷದಿಂದ ಬೃಹತ್ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳವನ್ನು ಆಯೋಜಿಸಿದಂತೆ ಈ ವರ್ಷವು ಸಹ ಮೇಳ ಆಯೋಜಿಸಲಾಗಿದೆ ಎಂದು ರಾಷ್ಟ್ರೀಯ ಜೀವನೋಪಾಯ ಅಭಿಯಾನದ ನಿರ್ದೇಶಕಿ ಪಿ.ಐ.ವಿದ್ಯಾ ಅವರು ತಿಳಿಸಿದರು.





# ಇದು ಗಾಂಧಿ ಕಾಂಗ್ರೆಸ್ ಅಲ್ಲ, ಅಲಿಬಾಬಾ ನಲವತ್ತು ಕಳ್ಳರ ಕಾಂಗ್ರೆಸ್

## ಕೋಟ್ಯಂತರ ರೂಪಾಯಿ ವೆಚ್ಚ ಮಾಡಿ ಗಾಂಧೀಜಿ ಶತಮಾನೋತ್ಸವ ಕಾರ್ಯಕ್ರಮ ಮಾಡುತ್ತಿದೆ ಸರಕಾರ

• ಉದಯವಾಹಿನಿ, ಮಂಡ್ಯ

ಬೆಳಗಾವಿಯಲ್ಲಿ ಜನರ ತೆರಿಗೆ ದುಡ್ಡಿನಲ್ಲಿ ನಕಲಿ ಗಾಂಧಿಗಳ ವಿಜೃಂಭಣೆ ನಡೆಯುತ್ತಿದೆ ಎಂದು ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ವಾಗ್ದಾಳಿ ನಡೆಸಿದರು. ಮಂಡ್ಯದಲ್ಲಿ ಗುರುವಾರ ಮಾಧ್ಯಮಗಳ ಜೊತೆಗೆ ಮಾತನಾಡಿದ ಅವರು, ಬೆಳಗಾವಿಯಲ್ಲಿ ಕಾಂಗ್ರೆಸ್‌ನಿಂದ ಗಾಂಧಿ ಶತಮಾನೋತ್ಸವ ಕಾರ್ಯಕ್ರಮ ನಡೆಯುತ್ತಿದೆ. ಮುಂದಿನ ವರ್ಷ ಗಾಂಧಿ ಹೆಸರಲ್ಲಿ ಕಾರ್ಯಕ್ರಮ ಮಾಡಲು ಸರಕಾರ ಹೊರಟಿದೆ. ಕೋಟ್ಯಂತರ ರೂಪಾಯಿ ವೆಚ್ಚ ಮಾಡಿ ಗಾಂಧೀಜಿ ಶತಮಾನೋತ್ಸವ ಕಾರ್ಯಕ್ರಮ ಮಾಡುತ್ತಿದೆ ಸರಕಾರ. ಆದರೆ ಅಲ್ಲಿ ನಡೆಯುತ್ತಿರುವ ಕಾರ್ಯಕ್ರಮದಲ್ಲಿ ಕಟೌಟ್‌ಗಳಲ್ಲಿ ಗಾಂಧೀಜಿ ಫೋಟೋ ನೋಡಲಿಲ್ಲ.

ನಕಲಿ ಗಾಂಧಿಗಳ ಫೋಟೋಗಳು ಇರುವ ಕಟೌಟ್‌ಗಳನ್ನು ಆಕಾಶದೆತ್ತರಕ್ಕೆ ಹಾಕಿದ್ದಾರೆ ಎಂದು ಹೆಚ್ ಡಿ ಕುಮಾರಸ್ವಾಮಿ ಅವರು ವಾಗ್ದಾಳಿ ನಡೆಸಿದರು. ಈಗ ಇರುವುದು ಅಸಲಿ ಕಾಂಗ್ರೆಸ್ ಅಲ್ಲ, ನಕಲಿ ಕಾಂಗ್ರೆಸ್. ಬೆಳಗಾವಿಯಲ್ಲಿ ಕಾರ್ಯಕ್ರಮ ಮಾಡುತ್ತಿರುವುದು ಅದೇ ನಕಲಿ ಕಾಂಗ್ರೆಸ್. ಸ್ವಾತಂತ್ರ್ಯ ಗಳಿಸಿದ ಮೇಲೆ ಕಾಂಗ್ರೆಸ್ ಅನ್ನು ವಿಸರ್ಜನೆ ಮಾಡಿ ಎಂದು ಸ್ವತಃ ಮಹಾತ್ಮ ಗಾಂಧೀಜಿ ಅವರು ಆಗಲೇ ಹೇಳಿದ್ದರು. ಅವರ ಕಾಂಗ್ರೆಸ್ ಈಗಿಲ್ಲ. ಈಗ ಇರುವುದು ಆಲಿಬಾಬ ಮತ್ತು 40 ಮಂದಿ ಕಳ್ಳರ ಕಾಂಗ್ರೆಸ್ ಎಂದು ಕುಮಾರಸ್ವಾಮಿ ಕಿಡಿಕಾರಿದರು.ಗಾಂಧೀಜಿ ಅವರ ಹೆಸರಲ್ಲಿ ಕಾರ್ಯಕ್ರಮ ಮಾಡಲು ನನ್ನ ತಕರಾರಿಲ್ಲ. ಸಂಘಟಿತ ಹೋರಾಟದ ಮೂಲಕ ಹೋರಾಟ ನಡೆಸಿ ಸ್ವಾತಂತ್ರ್ಯ ತಂದುಕೊಟ್ಟರು ಅವರು.



ಗಾಂಧೀಜಿ ಅವರ ರಾಮರಾಜ್ಯದ ಪರಿಕಲ್ಪನೆ ಇವತ್ತು ರಾಜ್ಯದಲ್ಲಿ ಸಾಕಾರ ಆಗಿದೆಯಾ ಅವರ ಗ್ರಾಮ ಸ್ವರಾಜ್ಯದ ಕನಸು ಈಡೇರಿದೆಯಾ 15ನೇ ಹಣಕಾಸು ಆಯೋಗದ ಅನುದಾನದ ಮೂಲಕ ಗ್ರಾಮಗಳ ಅಭಿವೃದ್ಧಿಗಾಗಿ ಪಂಚಾಯಿತಿಗಳಿಗೆ ಕೇಂದ್ರ ಸರಕಾರ ಬಿಡುಗಡೆ ಮಾಡಿರುವ 448.29 ಕೋಟಿ ಬಳಕೆ ಮಾಡಿಲ್ಲ. ಈ ಹಣ ಬಿಡುಗಡೆಯಾಗಿ ಹಲವಾರು ತಿಂಗಳೇ ಕಳೆದಿದ್ದರೂ ಇನ್ನೂ ಪಂಚಾಯತಿಗಳಿಗೆ ಆ ಹಣ ಹೋಗಿಲ್ಲ ಎಂದು ಕೇಂದ್ರ ಸಚಿವ ಹೆಚ್ ಡಿ ಕುಮಾರಸ್ವಾಮಿ ಬೇಸರ ವ್ಯಕ್ತಪಡಿಸಿದರು. ರಾಜ್ಯದಲ್ಲಿ ಸರಕಾರಿ ಆಸ್ಪತ್ರೆಗಳ ಪರಿಸ್ಥಿತಿ ದಯನೀಯವಾಗಿದೆ. ಗುಣಮಟ್ಟದ ಚಿಕಿತ್ಸೆ ದೊರೆಯದೆ ಬಾಣಂತಿಯರು, ಮಕ್ಕಳ ಸರಣಿ ಸಾವುಗಳು ಸಂಭವಿಸುತ್ತಿವೆ.

### ಆಸ್ಪತ್ರೆಗಳಲ್ಲಿ ವೈದ್ಯರು, ನರ್ಸ್‌ಗಳಿಲ್ಲ

2.756 ಲಕ್ಷ ಸರಕಾರಿ ಹುದ್ದೆಗಳು ಖಾಲಿ ಬಿದ್ದಿವೆ. ಹೀಗಿದ್ದ ಮೇಲೆ ಆಡಳಿತ ಹೇಗೆ ಉತ್ತಮವಾಗಿರಲು ಸಾಧ್ಯ ಎಂದು ಕೇಂದ್ರ ಸಚಿವ ಹೆಚ್ ಡಿ ಕುಮಾರಸ್ವಾಮಿ ಅವರು ಪ್ರಶ್ನಿಸಿದರು. ಸರಕಾರ ಪ್ರತಿದಿನವೂ ಗ್ಯಾರಂಟಿ ಗ್ಯಾರಂಟಿ ಎನ್ನುತ್ತಿದೆ. ಜನರಿಗೆ ಇನ್ನೂ ಎರಡು ಸಾವಿರ ರೂಪಾಯಿ ಕೊಡಲಿ, ನಮ್ಮ ಅಭ್ಯಂತವಿಲ್ಲ. ಆದರೆ, ಮಿತಿ ಮೀರಿದ ತೆರಿಗೆ ಹೇರಿಕೆ ಮಾಡುತ್ತಿದ್ದಾರೆ. ಎರಡು ಲಕ್ಷ ಕೋಟಿ ರೂಪಾಯಿ ಸಾಲ ಮಾಡಿ ಎರಡು ಸಾವಿರ ರೂಪಾಯಿ ಕೊಡಲಿಕ್ಕೆ ಇವರೇ ಬೇಕಾ ಬೇಕಾಬಿಟ್ಟಿಯಾಗಿ ಆ ಸಾಲ ತೀರಿಸುವವರು ಯಾರು ಜನಸಾಮಾನ್ಯರೇ ಆ ಸಾಲ ತೀರಿಸಬೇಕಲ್ವಾ ಎಂದು ಕಿಡಿಕಾರಿದರು.

ಅಪಘಾತದಲ್ಲಿ ಯೋಧರು ಸಾವನ್ನಪ್ಪಿದ ವಿಚಾರ ತಿಳಿದು ನನಗೆ ಬಹಳ ದುಃಖವಾಯಿತು. ಮೃತ ಯೋಧರಲ್ಲಿ ಮೂವರು ಕನ್ನಡಿಗರು ಇದ್ದಾರೆ. ಅವರ ಕುಟುಂಬಗಳಿಗೆ ದುಃಖ ಭರಿಸುವ ಶಕ್ತಿ ಭಗವಂತ ನೀಡಲಿ. ಕೇಂದ್ರ ಸರಕಾರ ಆ ಕುಟುಂಬಗಳ ನೆರವಿಗೆ ನಿಲ್ಲಲಿದೆ.

-ಕುಮಾರಸ್ವಾಮಿ, ಕೇಂದ್ರ ಸಚಿವ

**ಈ ದಿನದ ದರ** | ಪೆಟ್ರೋಲ್: 102.92 ₹/L | ಡೀಸೆಲ್ : 88.99 ₹/L | ಬಂಗಾರ: ₹7,773/Gram24ct ₹7,126/Gram22ct | ಬೆಳ್ಳಿ: ₹92.50/Gram



## ಸಿದ್ಧಸೂಕ್ತಿ

**ಡಾ ಆರೂಢಭಾರತೀ ಸ್ವಾಮೀಜಿ**
**ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ ರಾಮೋಹಳ್ಳಿ**

## ಭೂಮಿಗಳೇ ಇಲ್ಲ ಧರ್ಮಗಳೇಕೆ?

ಕೊಪ್ಪಳದ ಗವಿಮಠದ ಅಭಿನವ ಗವಿಸಿದ್ಧೇಶ್ವರ ಶ್ರೀಗಳ ಭೇಟಿಯ ವೇಳೆ ಚಿಂತನೆ ಮುಂದುವರಿದಿತ್ತು: ನಮ್ಮಲ್ಲಿ ಭೂಮಿಗಳಿಲ್ಲ ಆಕಾಶಗಳಿಲ್ಲ ವಾಯುಗಳಿಲ್ಲ ಜಲಗಳಿಲ್ಲ ಸೂರ್ಯಗಳಿಲ್ಲ. ನಡೆಯುವುದೊಂದೇ ಭೂಮಿ. ಇರುವುದೊಂದೇ ಆಕಾಶ. ಹರಿಯುವುದೊಂದೇ ಗಾಳಿ. ಕುಡಿಯುವುದೊಂದೇ ಜಲ. ಬೆಳಗುವ ಸೂರ್ಯನೊಬ್ಬನೇ, ಸುಡುವ ಅಗ್ನಿಯೂ ಒಂದೇ. ಇವಾವವೂ ನಮಗಿವರಿಗವರಿಗೆ ಬೇರೆ ಬೇರೆ ಇಲ್ಲವೇ ಇಲ್ಲ ಎಂದ ಬಳಿಕ ಹಲವು ಧರ್ಮಗಳೇಕೆ? ಇರುವುದೊಂದೇ ಧರ್ಮ, ಅದು ಮನುಷ್ಯ ಧರ್ಮ. ಒಬ್ಬರೊಬ್ಬರ ಬಾಂಧವ್ಯ ಬೆಸೆವುದು ಧರ್ಮ, ಒಡೆಯುವುದು ಧರ್ಮವಲ್ಲ. ಯಾವ ಇಸಂಗಳ ಒಲವಿಲ್ಲ ಎಂದರು. ಮುಂದುವರಿದು ಮದುವೆಗೆ ಕರೆಯುತ್ತಾರೆ. ಹೋದರೆ ಶ್ರಮ ಸಮಯಹರಣ ಅಗತ್ಯ ಕಾರ್ಯಲೋಪ. ಹೋಗದಿದ್ದರೆ ಬೇಸರ. ಸಂನ್ಯಾಸಿಗೆ ಮದುವೆಯಲ್ಲೇನು ಕೆಲಸ ಎಂದರು. ಬಹುತೇಕರಿಗೆ ಸಂನ್ಯಾಸಿಯ ನಿಜ ಅರಿವಿಲ್ಲ. ಸಂನ್ಯಾಸಿಯಿಂದ ಬದುಕಿಗೆ ಲೌಕಿಕ ಆಧ್ಯಾತ್ಮಿಕ ಮಾರ್ಗದರ್ಶನ ಪಡೆಯಬೇಕು ಸುಸಂಸ್ಕೃತರಾಗಬೇಕು, ಸಾಧನೆಯಲ್ಲಿ ತೊಡಗಬೇಕೆಂಬ ನಿಲುವು ಬಹುತೇಕರಿಗಿಲ್ಲ. ಸಂನ್ಯಾಸಿಯನ್ನು ಉತ್ಸವದ ಮೂರ್ತಿಯಂತೆ ಶೋಕೇಸ್‌ನ ಪದಾರ್ಥಗಳಂತೆ ತಮ್ಮ ಗೌರವವರ್ಧನೆಗೆ ಸೀಮಿತಗೊಳಿಸಿ ಬಳಸುವವರೇ ಹೆಚ್ಚೆಂಬ ಖೇದ ಅವರದು. ನಿಜಗುಣ ಶಿವಯೋಗಿಗಳ ಮಾತಿನಂತೆ ನಿರಾಭಾರಿ ಸದ್ಗುರುವಿರಲೆನ್ನ ಮಾನಸದಲ್ಲಿ ಎಂದರು.


# ನಮ್ಮಷ್ಟಕ್ಕೆ ನಾವೇ ಅವಮಾನ ಮಾಡಿಸಿಕೊಳ್ಳಲು ಸಾಧ್ಯವೇ?

## ಅಸಲಿ ಗಾಂಧಿ ಹೆಸರಲ್ಲಿ ನಕಲಿ ಕಾಂಗ್ರೆಸ್ ಅಧಿವೇಶನ ಮಾಡುತ್ತಿದ್ದಾರೆ ಎಂದು ಆರೋಪ

• **ಉದಯವಾಹಿನಿ, ಬೆಂಗಳೂರು**

ಮಹಾತ್ಮ ಗಾಂಧೀಜಿಯವರ ಕಾಂಗ್ರೆಸ್‌ಗೂ ಇಂದಿನ ಕಾಂಗ್ರೆಸ್‌ಗೂ ಬಹಳವೇ ವ್ಯತ್ಯಾಸ ಇದೆ. ಅದು ಅಸಲಿ ಕಾಂಗ್ರೆಸ್ ಇಂದಿನದ್ದು ನಕಲಿ ಕಾಂಗ್ರೆಸ್. ಹೀಗಾಗಿ ವ್ಯತ್ಯಾಸ ಇದೆ. ಮಹಾತ್ಮಾ ಗಾಂಧೀಜಿಯವರ ತದ್ವಿರುದ್ಧವಾಗಿ ಈಗಿನ ಕಾಂಗ್ರೆಸ್ ನವರು ನಡೆದುಕೊಳ್ಳುತ್ತಿದಾರೆ ಎಂದು ಮಾಜಿ ಮುಖ್ಯಮಂತ್ರಿ, ಸಂಸದ ಬಸವರಾಜ ಬೊಮ್ಮಾಯಿ ಅವರು ಲೇವಡಿ ಮಾಡಿದರು. ಗುರುವಾರ ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, ರಾಜ್ಯದಲ್ಲಿ ಕಾನೂನು ರೀತಿ ಆಡಳಿತವೇ ಇಲ್ಲ ಎಲ್ಲಾ ಇಲಾಖೆಗಳು, ನಿಗಮಗಳಲ್ಲಿ ಭ್ರಷ್ಟಾಚಾರ ನಡೆದಿದೆ. ದೀನ ದಲಿತರ ಅನುದಾನದಲ್ಲೇ ಭ್ರಷ್ಟಾಚಾರ ಮಾಡಿದ್ದಾರೆ.

ಗಾಂಧಿಯವರ ಸ್ವರಾಜ್ಯಕ್ಕೆ ತದ್ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದಾರೆ. ಕಾಂಗ್ರೆಸ್ ಅಧಿವೇಶನಕ್ಕೆ ಸರ್ಕಾರದ ಹಣ ಬಳಸುತ್ತಿರುವುದು ಎಷ್ಟು ಸರಿ ಇದು ಯಾವ ಕಾನೂನಿನಲ್ಲಿದೆ ರಾಜಕೀಯ ಸಮ್ಮೇಳನಗಳಿಗೆ ಸರ್ಕಾರದ ಹಣ ಬಳಸುವುದು ಎಷ್ಟರ ಮಟ್ಟಿಗೆ ಸರಿ ಗಾಂಧೀಜಿಯವರನ್ನು ಮುಂದಿಟ್ಟುಕೊಂಡು ತಮ್ಮ ಬ್ಯಾನರ್ ಹಾಕಿಕೊಂಡು ಅಧಿವೇಶನ ಮಾಡುತ್ತಿದ್ದಾರೆ. ಅಸಲಿ ಗಾಂಧಿ ಹೆಸರಲ್ಲಿ ನಕಲಿ ಕಾಂಗ್ರೆಸ್ ಅಧಿವೇಶನ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.


ಉದಯವಾಹಿನಿ ಚಿತ್ರ

**ಮುನಿರತ್ನ ಮೇಲೆ ಹಲ್ಲೆ**

**ಮುನಿರತ್ನ ಮೇಲೆ ಹಲ್ಲೆ:** ಠಾಣೆಗಳಲ್ಲಿ ಡೀಲ್ ವ್ಯವಸ್ಥೆ ಇದೆ ಬಿಜೆಪಿ ಶಾಸಕ ಮುನಿರತ್ನ ಮೇಲೆ ಮೊಟ್ಟೆ ಎಸೆತ ಪ್ರಕರಣದ ಕುರಿತು ಪ್ರತಿಕ್ರಿಯಿಸಿದ ಅವರು, ಅಧಿಕಾರದ ಮಧದಿಂದ ಅಧಿಕಾರದ ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ವಿರೋಧ ಪಕ್ಷಗಳನ್ನು ದಮನ ಮಾಡಲು ಪ್ರಜಾಪ್ರಭುತ್ವ ವಿರೋಧಿ ಕ್ರಮ ಅನುಸರಿಸುತ್ತಿದ್ದಾರೆ.

ಇಂಥ ಪ್ರಕರಣಗಳು ಸಾಕಷ್ಟು ನಡೆದಿದೆ. ಆದರೆ ಇನ್ನೂ ಕೆಲವು ಪ್ರಕರಣ ಬೆಳಕಿಗೆ ಬಂದಿಲ್ಲ. ಸರ್ಕಾರ ಪೊಲೀಸ್ ಠಾಣೆಗಳಲ್ಲಿ ಡೀಲ್ ವ್ಯವಸ್ಥೆ ಮಾಡಿದೆ ಎಂದು ಅವರು ಆರೋಪಿಸಿದರು. ಸರ್ಕಾರ ಯಾವ ಹಂತಕ್ಕೆ ಇಳಿದಿದೆ? ಗೃಹ ಸಚಿವರೇ ಏನೂ ನಡೆದಿಲ್ಲ, ಗೊತ್ತಿಲ್ಲ ಎಂದು ಹೇಳುತ್ತಾರೆ.

ನಮ್ಮಷ್ಟಕ್ಕೆ ನಾವೇ ಅವಮಾನ ಮಾಡಿಸಿಕೊಳ್ಳಲು ಹೇಗೆ ಸಾಧ್ಯ ಶಾಸಕ ಮುನಿರತ್ನ ನಾಟಕ ಮಾಡುತ್ತಿದ್ದಾರೆಂಬ ಕಾಂಗ್ರೆಸ್ ನಾಯಕರು ಮಾಡುತ್ತಿರುವ ಆರೋಪದ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಯಾರಾದರೂ ಉಂಟಾ ನಮ್ ಮೇಲೆ ನಾವೇ ಮೊಟ್ಟೆ ಹಾಕಿಸಿಕೊಂಡು ಅವಮಾನ ಮಾಡಿಸಿಕೊಳ್ಳೋಕೆ ಆಗುತ್ತಾ? ಎಂದು ಪ್ರಶ್ನಿಸಿದರು.

**ರಾಜ್ಯ ಸರ್ಕಾರದಿಂದ ಬೆಲೆ ಏರಿಕೆ ಪರ್ವ ರಾಜ್ಯ ಸರ್ಕಾರದ ಹಾಲಿನ ದರ ಹೆಚ್ಚಳ ವಿಚಾರದ ಬಗ್ಗೆ ಮಾತನಾಡಿದ ಅವರು, ರಾಜ್ಯ ಸರ್ಕಾರದಿಂದ ಬೆಲೆ ಏರಿಕೆ ಪರ್ವ ನಡೆದಿದೆ. ಸ್ಟ್ಯಾಂಪ್ ಡ್ಯೂಟಿ, ಅಬಕಾರಿ ತೆರಿಗೆ ಸೇರಿದಂತೆ ಎಲ್ಲದರ ತೆರಿಗೆ ಹೆಚ್ಚಿಸಿದ್ದಾರೆ. 15,000 ಕೋಟಿ ರೂಪಾಯಿ ಹೊಸ ತೆರಿಗೆ ಹಾಕಿದ್ದಾರೆ. ಹಾಲಿನ ದರ, ನೀರಿನ ದರ ಎಲ್ಲದರಲ್ಲೂ ತೆರಿಗೆ ಹೆಚ್ಚಿಗೆ ಮಾಡಿದ್ದಾರೆ. ಜನ ಸಾಮಾನ್ಯರು ಬಳಕೆ ಮಾಡುವಂತ ಎಲ್ಲಾ ವಸ್ತುಗಳ ದರ ಹೆಚ್ಚಳ ಮಾಡಿದ್ದಾರೆ. ಮುಂಬರುವ ದಿನಗಳಲ್ಲಿ ಮರಳು, ಜಲ್ಲಿ ಕೂಡ ಇನ್ನಷ್ಟು ತುಟ್ಟಿ ಆಗಲಿದೆ. ಪ್ರತಿ ಆರ್ಥಿಕ ಚಟುವಟಿಕೆ ಮೇಲೆ ತೆರಿಗೆ ಹಾಕುತ್ತಿದ್ದಾರೆ. ಮುಂದೆ ಇವರು ಗಾಳಿಗೂ ತೆರಿಗೆ ಹಾಕುವ ಕಾಲ ದೂರ ಇಲ್ಲ ಎಂದು ತಿಳಿಸಿದರು.**

**ಮುಖ್ಯಮಂತ್ರಿ ಸಿದ್ದರಾಮಯ್ಯನವರು ಉಡಾಫೆ ಉತ್ತರ ಕೊಡುತ್ತಾರೆ. ಈ ಘಟನೆಗಳು ತುರ್ತು ಪರಿಸ್ಥಿತಿ ನೆನಪಿಸುತ್ತಿದೆ. ಶಾಸಕ ಮುನಿರತ್ನ ಮೇಲೆ ಆರೋಪ ಇದೆ, ಅದನ್ನು ಕೋರ್ಟ್‌ನಲ್ಲಿ ಅವರು ಎದುರಿಸುತ್ತಾರೆ. ಅವರ ಮೇಲೆ ಮೊಟ್ಟೆ ಒಗೆಯುತ್ತಾರೆ ಅಂದರೆ ಯಾವ ಮಟ್ಟಕ್ಕೆ ಸರ್ಕಾರ ಇಳಿದಿದೆ ಜನ ಪ್ರತಿನಿಧಿಗಳು ನಿರ್ಭೀತಿ, ನಿರ್ಭಯದಿಂದ ಕೆಲಸ ಮಾಡಲು ಹೇಗೆ ಸಾಧ್ಯ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.**

**ಸಿಟಿ ರವಿ ಧರ್ಮಸ್ಥಳಕ್ಕೆ ಬರಲಿ:** ಇದು ಅವರವರಿಗೆ ಬಿಟ್ಟದ್ದು ವಿಧಾನ ಪರಿಷತ್ ಸದಸ್ಯ ಸಿ.ಟಿ ರವಿಗೆ ಧರ್ಮಸ್ಥಳಕ್ಕೆ ಬರಲಿ ಎಂಬ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಸವಾಲು ಹಾಕಿರುವ ವಿಚಾರ. ಇದು ಅವರವರಿಗೆ ಬಿಟ್ಟಿದ್ದು. ದೇವರು ನಂಬಿಕೆ ಅವರವರ ವಯಕ್ತಿಕ ವಿಚಾರ. ಸಿ.ಟಿ ರವಿ ಹಾಗೂ ಲಕ್ಷ್ಮೀ ಹೆಬ್ಬಾಳ್ಕರ್ ಇಬ್ಬರೂ ದೂರು ಕೊಟ್ಟಿದ್ದಾರೆ. ಒಂದು ಕಡೆ ಕಂಪ್ಲೋಂಟ್‌ಗೆ ಕೂಡಲೇ ಕ್ರಮ ಕೈಗೊಳ್ಳುತ್ತಾರೆ. ಆದರೆ, ಸಿ.ಟಿ ರವಿ ದೂರು ಕೊಟ್ಟಿರುವುದನ್ನು ಎಫ್‌ಐ ಆರ್ ಮಾಡೇ ಇಲ್ಲ. ಹೈಕೋರ್ಟ್ ಮಧ್ಯಪ್ರವೇಶ ಮಾಡದಿದ್ದರೆ ಸಿ.ಟಿ ರವಿ ಅವರ ಪರಿಸ್ಥಿತಿ ಏನು ಆಗ್ತಿತ್ತೋ ಗೊತ್ತಿಲ್ಲ ಎಂದು ಹೇಳಿದರು.

## ರಾಜ್ಯದ ಜನತೆಗೆ ಬಿಗ್ ಶಾಕ್ : ಸಂಕ್ರಾಂತಿ ಬಳಿಕ ನಂದಿನಿ ಹಾಲಿನ ದರ ರೂ. 5 ಏರಿಕೆ?

• **ಉದಯವಾಹಿನಿ, ಬೆಂಗಳೂರು**

ಸಂಕ್ರಾಂತಿ ಬಳಿಕ ನಂದಿನಿ ಹಾಲಿನ ದರ 5 ರೂ. ಏರಿಕೆಯಾಗುವ ಸಾಧ್ಯತೆ ಇದ್ದು ದರ ಏರಿಕೆಯ ಬಗ್ಗೆ ಕೆಎಂಎಫ್ ಅಧ್ಯಕ್ಷ ಭೀಮನಾಯ್ ಸುಳಿವು ನೀಡಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಂದಿನಿ ಹಾಲಿನ ದರವನ್ನು 5 ರೂ. ಹೆಚ್ಚಳ ಮಾಡಲು ಪ್ರಸ್ತಾವನೆ ಬಂದಿದೆ. ಸಿಎಂ ಸಿದ್ದರಾಮಯ್ಯ ಒಪ್ಪಿಗೆ ಕೊಟ್ಟ ತಕ್ಷಣ ನಂದಿನಿ ಹಾಲಿನ ದರ ಹೆಚ್ಚಳ ಮಾಡಲಾಗುವುದು ಎಂದು ತಿಳಿಸಿದ್ದಾರೆ. ಇನ್ನು ನಂದಿನಿ ಹಾಲಿನ ದರದಲ್ಲಿ 2 ರೂ.ಕಡಿತ ಮಾಡಲು ನಿರ್ಧರಿಸಲಾಗಿದ್ದು, ಇದೀಗ ನಂದಿನಿ ಹಾಲಿನ ದರ 44 ರೂ.42 ರೂ.ಗೆ ಇಳಿಕೆಯಾಗಲಿದೆ ಎಂದು ಕೆಂಎಫ್ ಅಧ್ಯಕ್ಷ ಭೀಮನಾಯ್ಕ್ ತಿಳಿಸಿದ್ದಾರೆ. ರಾಜ್ಯ ಸರ್ಕಾರವು ಕೆಲ ದಿನಗಳ ಹಿಂದೆ ಪ್ರತಿ ಲೀಟರ್‌ನಲ್ಲಿ ಹೆಚ್ಚುವರಿಯಾಗಿ 50 ಎಂಎಲ್ ನೀಡಿ 2 ರೂಪಾಯಿ ಏರಿಕೆ ಮಾಡಿತ್ತು. ಇದೀಗ ಕೆಎಂಎಫ್ ಹಾಲಿನ ದರ 2 ರೂ. ಕಡಿತ ಮಾಡಲು ನಿರ್ಧರಿಸಿದೆ.

## ಗುಂಡಿನ ಸದ್ದು : ರೌಡಿಶೀಟರ್ ಸುನೀಲ್ ಕಾಲಿಗೆ ಪೊಲೀಸರಿಂದ ಫೈರಿಂಗ್

• **ಉದಯವಾಹಿನಿ, ಬೆಂಗಳೂರು**

ಬೆಂಗಳೂರಿನಲ್ಲಿ ಬೆಳ್ಳಂಬೆಳಗ್ಗೆ ಗುಂಡಿನ ಸದ್ದು ಕೇಳಿದ್ದು ರೌಡಿಶೀಟರ್ ಕಾಲಿಗೆ ಪೊಲೀಸರು ಫೈರಿಂಗ್ ಮಾಡಿರುವ ಘಟನೆ ನಡೆದಿದೆ. ಬೆಂಗಳೂರು ನಗರ ಜಿಲ್ಲೆಯ ಅನೇಕಲ್‌ನಲ್ಲಿ ಪೊಲೀಸರು ರೌಡಿಶೀಟರ್ ಕಾಲಿಗೆ ಗುಂಡು ಹಾರಿಸಿದ್ದಾರೆ. ಪೊಲೀಸರಿಂದ ತಪ್ಪಿಸಿಕೊಂಡು ಹೋಗುತ್ತಿದ್ದ ವೇಳೆ ರೌಡಿಶೀಟರ್ ಸುನೀಲ್ ಅಲಿಯಾಸ್ ಹಾವೇರಿ ಕಾಲಿಗೆ ಪೊಲೀಸರು ಫೈರಿಂಗ್ ಮಾಡಿದ್ದಾರೆ. ಅತ್ತಿಬೆಲೆಯ ಬಂಡಾಪುರ ಬಳಿ ಪೊಲೀಸರು ರೌಡಿಶೀಟರ್ ಸುನೀಲ್ ಮೇಲೆ ಪೊಲೀಸರು ಗುಂಡು ಹಾರಿಸಿದ್ದು ಆತನನ್ನು ವಶಕ್ಕೆ ಪಡೆದುಕೊಂಡು ಆಸ್ಪತ್ರೆಗೆ ದಾಖಲಿಸಿದ್ದಾರೆ.

## ಮೊಟ್ಟೆ ಎಸೆತ ಕೇಸ್: ಕೆ.ಸಿ. ಜನರಲ್ ಆಸ್ಪತ್ರೆಯಿಂದ ಶಾಸಕ ಮುನಿರತ್ನ ಡಿಸ್ಚಾರ್ಜ್


• **ಉದಯವಾಹಿನಿ, ಬೆಂಗಳೂರು**

ಮೊಟ್ಟೆ ಎಸೆತ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಂಗಳೂರಿನ ಕೆ.ಸಿ. ಜನರಲ್ ಆಸ್ಪತ್ರೆಗೆ ದಾಖಲಾಗಿದ್ದ ಬಿಜೆಪಿ ಶಾಸಕ ಮುನಿರತ್ನ ಅವರು, ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿದ್ದಾರೆ. ನಿನ್ನೆ ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಜನ್ಮದಿನದ ಕಾರ್ಯಕ್ರಮಕ್ಕೆ ಹೋಗುವಾಗ ಶಾಸಕ ಮುನಿರತ್ನ ಮೇಲೆ ಮೊಟ್ಟೆ ಎಸೆಯಲಾಗಿತ್ತು. ಬಳಿಕ ಅವರನ್ನು ಕೆ.ಸಿ. ಜನರಲ್ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿದ್ದು, ಆಸ್ಪತ್ರೆಯಿಂದ ಡಿಸ್ಮಚಾರ್ಜ್ ಆಗಿದ್ದಾರೆ. ಮೊಟ್ಟೆ ಎಸೆತ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಜೆಪಿ ಶಾಸಕ ಮುನಿರತ್ನ ದೂರು ಆಧರಿಸಿ ನಂದಿನಿ ಲೇಔಟ್ ಠಾಣೆಯಲ್ಲಿ ಪೊಲೀಸರು ಎಫ್ ಐಆರ್ ದಾಖಲಿಸಿದ್ದಾರೆ. ಇನ್ನು ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಜೆಪಿ ಶಾಸಕ ಮುನಿರತ್ನ ಅವರ ಮೇಲೆ ಬೆಳಿಗ್ಗೆ 11.30ರ ಸುಮಾರಿಗೆ ಮೊಟ್ಟೆ ಎಸೆಯಲಾಗಿದೆ. ಶಾಸಕರು ಕಾರ್ಯಕ್ರಮ ಮುಗಿಸಿ ವಾಪಾಸಾಗುತ್ತಿದ್ದಾಗ ಈ ಘಟನೆ ನಡೆದಿದೆ.

## ಎಸಿ ಕಚೇರಿಗೆ ಸಚಿವ ಕೃಷ್ಣ ಬೈರೇಗೌಡ ದಿಢೀರ್ ಭೇಟಿ: ಅಧಿಕಾರಿಗಳಿಗೆ ತರಾಟೆ

• **ಉದಯವಾಹಿನಿ, ದೊಡ್ಡಬಳ್ಳಾಪುರ**

ತಾಲ್ಲೂಕು ಕಚೇರಿ, ಉಪವಿಭಾಗಧಿಕಾರಿ ಕಚೇರಿಗೆ ಗುರುವಾರ ಬೆಳಗ್ಗೆ ಕಂದಾಯ ಸಚಿವ ಕೃಷ್ಣಬೈರೇಗೌಡ ಖಾಸಗಿ ವಾಹನದಲ್ಲಿ ಬಂದು, ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಬೆಳಿಗ್ಗೆ 10.30 ಆಗಿದ್ದರೂ ಯಾರೊಬ್ಬ ಅಧಿಕಾರಿಗಳು ಕಚೇರಿಗೆ ಬಾರದೆ ಇರುವ ಬಗ್ಗೆ ಜಿಲ್ಲಾಧಿಕಾರಿಗೆ ಕರೆ ಮಾಡಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಸಚಿವರ ಭೇಟಿ ಅರ್ಧ ಗಂಟೆ ನಂತರ ವಿಷಯ ಕಾರ್ಯ ನಿರ್ವಾಹಕರು ಮಾತ್ರ ಬಂದರು. 10.30 ಆಗಿದ್ದರು ಸಹ ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡದೆ, ಅನ್ಯ ಕಾರ್ಯ ನಿಮಿತ್ತ ಹೊರಗೆ ಹೋಗಿರುವ ಬಗ್ಗೆ ಹಾಜರಾತಿ ಪುಸ್ತಕದಲ್ಲಿ ನನೂದಿಸದೆ ಇರುವ ಬಗ್ಗೆಯೂ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.



## ಡಿ.30ಕ್ಕೆ ರೈತ ಸಮಾವೇಶ

• **ಉದಯವಾಹಿನಿ, ದೇವನಹಳ್ಳಿ**

ತಾಲ್ಲೂಕಿನ ಚನ್ನರಾಯಪಟ್ಟಣ ಹೋಬಳಿಯ 13 ಹಳ್ಳಿಗಳ 1,777 ಎಕರೆ ಕೃಷಿ ಭೂಮಿಯನ್ನು ಕೈಗಾರಿಕಾ ಉದ್ದೇಶಕ್ಕೆ ಭೂ ಸ್ವಾಧೀನ ವಿರೋಧಿಸಿ ಇಲ್ಲಿನ ರೈತರು ನಡೆಸುತ್ತಿರುವ ಹೋರಾಟಕ್ಕೆ ಡಿ.30ಕ್ಕೆ ಸಾವಿರ ದಿನ ಪೂರೈಸುವ ಹಿನ್ನಲೆಯಲ್ಲಿ ಚನ್ನರಾಯಪಟ್ಟಣ ಧರಣಿ ಸ್ಥಳದಲ್ಲಿ ರೈತ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಹೋರಾಟನಿರತರು ತಿಳಿಸಿದ್ದಾರೆ. ಸ್ವಾಧೀನಕ್ಕೆ ಒಳಪಟ್ಟಿರುವ 1,777 ಎಕರೆ ಭೂಮಿಯನ್ನು ಭೂ ಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡುವಂತೆ ಒತ್ತಾಯಿ ಸಲಾಗಿದೆ. ಅಧಿಕಾರಿಗಳಿಂದ ಮಾಹಿತಿ ಪಡೆದ ಸಿಎಂ, ಈಗಾಗಲೇ 430 ಎಕರೆ ಭೂಮಿಯೂ ಅಂತಿಮ ಅಧಿಸೂಚನೆಗೆ ಒಳಪಟ್ಟಿರುವ ಕಾರಣ ಕಾನೂನು ಸಲಹೆ ಪಡೆದು ಮುಂದಿನ ತಿಂಗಳ ಮೊದಲ ವಾರದಲ್ಲಿ ರೈತ ಪರ ನಿರ್ಧಾರ ಪ್ರಕಟಣೆ ಮಾಡುತ್ತೇವೆ ಎಂದು ಆಶ್ವಾಸನೆ ನೀಡಿದ್ದು ಆದ ಕಾರಣ ಡಿ.30ರಂದು ಕಾಲ್ನಡಿಗೆ ಜಾಥದ ಬದಲು ರೈತ ಸಮಾವೇಶ ನಡೆಯಲಿದೆ ಹಿರಿಯ ರೈತ ಮುಖಂಡ ನಂಜಪ್ಪ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಚನ್ನರಾಯಪಟ್ಟಣ ಗ್ರಾಪಂ ಮಾಜಿ ಅಧ್ಯಕ್ಷ ಮಾರೇಗೌಡ, ಹೋರಾಟಗಾರ ಕಾರಹಳ್ಳಿ ಶ್ರೀನಿವಾಸ್, ಚನ್ನರಾಯಪಟ್ಟಣದ ಭೂ ಸ್ವಾಧೀನ ವಿರೋಧಿ ಹೋರಾಟವೂ ಈ ಭಾಗದಲ್ಲಿ ಸ್ವಾಧೀನಕ್ಕೆ ಒಳಪಟ್ಟಿರುವ ಕಟ್ಟಕಡೆಯ ಭೂಮಿಯನ್ನು ಸ್ವಾಧೀನದಿಂದ ಕೈಬಿಡಿಸುವವರೆಗೂ ನಿರಂತರವಾಗಿ ನಡೆಯುತ್ತಿರುತ್ತದೆ ಎಂದರು.

## ರೇಷನ್ ಕಾರ್ಡ್ ತಿದ್ದುಪಡಿಗೆ ಡಿ.31ರವರೆಗೆ ಅವಕಾಶ

• **ಉದಯವಾಹಿನಿ, ಬೆಂಗಳೂರು**

ಪಡಿತರ ಚೀಟಿದಾರರರು ರೇಷನ್ ಕಾರ್ಡ್‌ನಲ್ಲಿ ತಮ್ಮ ಹೆಸರು ಸೇರ್ಪಡೆ ಹಾಗೂ ತಿದ್ದುಪಡಿಗೆ ಅವಕಾಶ ನೀಡಲಾಗಿದೆ. ಡಿಸೆಂಬರ್ 31 ಕೊನೆಯ ದಿನವಾಗಿದ್ದು, ಪಡಿತರ ಚೀಟಿದಾರರು ಹೆಸರು ತಿದ್ದುಪಡಿ, ಹೊಸ ಸದಸ್ಯರ ಸೇರ್ಪಡೆ, ವಿಳಾಸ ಬದಲಾವಣೆ, ಹೆಸರು ತೆಗೆಯುವುದಕ್ಕೆ ಅವಕಾಶ ನೀಡಲಾಗಿದೆ. ಬೆಳಗ್ಗೆ 10 ರಿಂದ ಸಂಜೆ 5 ರವರೆಗೆ ತಿದ್ದುಪಡಿಗೆ ಅವಕಾಶವಿದೆ. ಬೆಂಗಳೂರು ಒನ್, ಸೈಬರ್ ಸೆಂಟರ್‌ಗಳಲ್ಲಿ ಹೊಸ ಕಾರ್ಡ್ ಅಥವಾ ಹೆಸರು ಸೇರ್ಪಡೆಗೆ ಅರ್ಜಿ ಸಲ್ಲಿಸಬಹುದು. ಎಪಿಎಲ್ ಕಾರ್ಡ್ ಪಡೆಯುವವರು ಕೂಡ ಆನ್‌ಲೈನಲ್ಲಿ ಅರ್ಜಿ ಸಲ್ಲಿಸಬೇಕಿದೆ.

ಈಗಾಗಲೇ ಪಡಿತರ ಚೀಟಿ ಹೊಂದಿದವರು ಹೊಸದಾಗಿ ಮಕ್ಕಳು ಅಥವಾ ತಮ್ಮ ಕುಟುಂಬದ ಇತರೆ ಸದಸ್ಯರ ಸೇರ್ಪಡೆಗೆ ಅವಕಾಶ ನೀಡಲಾಗುವುದು. https://ahara.kar.nic.in ವೆಬ್ ಗಮನಿಸಬಹುದಾಗಿದೆ.

ತಮ್ಮ ಗುರುತು ನೋಂದಣಿ ಅಥವಾ ಮರುನೋಂದಣಿ ಮಾಡಿಸದಿರುವ ಪಡಿತರ ಚೀಟಿದಾರರು ಇದೇ ಡಿ.31ರೊಳಗೆ ತಮ್ಮ ಹತ್ತಿರದ ನ್ಯಾಯಬೆಲೆ ಅಂಗಡಿಗೆ ಭೇಟಿ ನೀಡಿ ತಮ್ಮ ಬೆರಳಚ್ಚು ನೀಡಿ e- KYC ಮಾಡಿಸಿಕೊಳ್ಳಬೇಕು ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ತಿಳಿಸಿದೆ. e- KYC ಮಾಡಿಸಿಕೊಳ್ಳಲು ಯಾವುದೇ ಹಣ ನೀಡುವಂತಿಲ್ಲ. ಆಧಾರ್ ದೃಢೀಕರಣ ಮಾಡಿಸದಿರುವ ಫಲಾನುಭವಿಗಳಿಗೆ ಡಿಸೆಂಬರ್ ತಿಂಗಳಿನಲ್ಲಿ ಪಡಿತರ ನೀಡವುದನ್ನು ಸ್ಥಗಿತಗೊಳಿಸಲಾಗುತ್ತದೆ ಎಂದು ಇಲಾಖೆ ಎಚ್ಚರಿಕೆ ನೀಡಿದೆ. ಹೀಗಾಗಿ e- KYC ಮಾಡಿಸಿಕೊಳ್ಳದೇ ಇರುವ ಪಡಿತರ ಚೀಟಿಯಲ್ಲಿರುವ ಪ್ರತಿಯೊಬ್ಬ ಸದಸ್ಯರೂ ಸಹ ನ್ಯಾಯಬೆಲೆ ಅಂಗಡಿಗಳಿಗೆ ಭೇಟಿ ನೀಡಿ ತಮ್ಮ ಹೆಬ್ಬೆರಳು ನೀಡಿ ಹೆಸರು ಮರುನೋಂದಾವಣಿ ಮಾಡಿಸಿಕೊಳ್ಳಬೇಕು ಎಂದು ಇಲಾಖೆ ತನ್ನ ಪ್ರಕಟಣೆಯಲ್ಲಿ ತಿಳಿಸಿದೆ. ಹೆಸರು ಸೇರಿಸಲು ಯಾವ ದಾಖಲೆಗಳು ಕಡ್ಡಾಯ ಪಡಿತರ ಚೀಟಿಯ ಮೂಲ ದಾಖಲೆ ಮತ್ತು ಮಗುವಿನ ಜನನ ಪ್ರಮಾಣಪತ್ರ, ಜೊತೆಗೆ ಮಗುವಿನ ಪೋಷಕರ ಆಧಾರ್ ಕಾರ್ಡ್ ಅನ್ನು ಹೊಂದಿರಬೇಗುತ್ತದೆ. ಹೆಂಡತಿಯ ಹೆಸರನ್ನು ಸೇರ್ಪಡೆ ಮಾಡುವಾಗ ಆ ಮಹಿಳೆಯ ಆಧಾರ್ ಮತ್ತು ಗಂಡನ ಮನೆಯ ಪಡಿತರ ಚೀಟಿ ಪ್ರತಿಯನ್ನು ನೀಡಬೇಕಾಗುತ್ತದೆ.



ಉದಯವಾಹಿನಿ ಚಿತ್ರ

### ಪಡಿತರ ಚೀಟಿ e- KYC ಮಾಡಿಸಲು ಬೇಕಾಗುವ ದಾಖಲೆಗಳು

- ನಿಮ್ಮ ಪಡಿತರ ಚೀಟಿಯ ಅಸಲಿ ಪ್ರತಿ
- ಕುಟುಂಬದ ಸದಸ್ಯರ ಆಧಾರ್ ಕಾರ್ಡ್ ಪೋಟೋ ಕಾಪಿ 6
- ಕುಟುಂಬದ ಯಜಮಾನನ ಆಧಾರ್ ಕಾರ್ಡ್ ನಕಲು ಪ್ರತಿ
- ಬ್ಯಾಂಕ್ ಪಾಸ್‌ಬುಕ್‌ನ ಪೋಟೋ ಕಾಪಿ -
- ಕುಟುಂಬದ ಯಜಮಾನನ ಎರಡು ಪಾಸ್‌ಪೋರ್ಟ್ ಅಳತೆಯ ಪೋಟೋ

ಪಡಿತರ ಚೀಟಿಯಲ್ಲಿ ಹೊಸ ಸದಸ್ಯರ ಸೇರ್ಪಡೆ ಮಾಡಲು ನಿಮ್ಮ ಪಡಿತರ ಚೀಟಿಯ ಮೂಲ ದಾಖಲೆ ಮತ್ತು ಮಗುವಿನ ಜನನ ಪ್ರಮಾಣಪತ್ರ, ಜೊತೆಗೆ ಮಗುವಿನ ಪೋಷಕರ ಆಧಾರ್ ಕಾರ್ಡ್ ಬೇಕಾಗುತ್ತದೆ. ಹೆಂಡತಿಯ ಹೆಸರನ್ನು ಸೇರ್ಪಡೆ ಮಾಡುವಾಗ ಆ ಮಹಿಳೆಯ ಆಧಾರ್ ಮತ್ತು ಗಂಡನ ಮನೆಯ ಪಡಿ ತರ ಚೀಟಿ ಪ್ರತಿಯನ್ನು ನೀಡಬೇಕಾಗುತ್ತದೆ.


## ಮಹಿಳೆಗೆ ಗೌರವ ನೀಡದ ಜನಪ್ರತಿನಿಧಿಗಳು

• **ಉದಯವಾಹಿನಿ, ಬೆಂಗಳೂರು**

ಸಾಂವಿಧಾನಿಕ ಸಂಸ್ಥೆಯಲ್ಲಿಯೇ ಹೆಣ್ಣುಮಕ್ಕಳಿಗೆ ಗೌರವ- ರಕ್ಷಣೆ ಇಲ್ಲವಾಗಿದೆ ಎಂದು ಸುಪ್ರಿಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ. ಗೋಪಾಲಗೌಡ ಬೇಸರ ವ್ಯಕ್ತಪಡಿಸಿದ್ದಾರೆ.

ಅಖಿಲ ಕರ್ನಾಟಕ ಕುವೆಂಪು ಸಾಂಸ್ಕೃತಿಕ ವೇದಿಕೆಯು ನಗರದ ಕನ್ನಡ ಭವನದಲ್ಲಿ ಬುಧವಾರ ಹಮ್ಮಿಕೊಂಡಿದ್ದ 'ಕನ್ನಡ ನುಡಿ' ಸಮ್ಮೇಳನ ಉದ್ಘಾಟಿಸಿ ಮಾತನಾಡಿದರು. ಸಂಸತ್ ಅಥವಾ ಸದನ ಯಾವುದೇ ತಾಣವಾಗಿರಲಿ, ಎಲ್ಲಾ ರಂಗದಲ್ಲಿಯೂ ಸಾಂಸ್ಕೃತಿಕ ವೇದಿಕೆ ಇರುತ್ತದೆ. ಆದರೆ ಇತ್ತೀಚಿನ ದಿನಗಳಲ್ಲಿ ಅಂತಹ ಸ್ಥಳಗಳಲ್ಲಿಯೇ ಮಹಿಳೆಗೆ ಗೌರವ ಸಿಗುತ್ತಿಲ್ಲ.

ಇದಕ್ಕೆ ಇತ್ತೀಚೆಗೆ ಬೆಳಗಾವಿ ಅಧಿವೇಶನದಲ್ಲಿ ನಡೆದ ಘಟನೆಯೇ ಸಾಕ್ಷಿ ಎಂದರು. ಜನಪ್ರತಿನಿಧಿಗಳಿಗೆ ಸದನದಂತಹ ಪವಿತ್ರ ಸ್ಥಳದಲ್ಲಿ ಹೇಗೆ ಮಾತನಾಡಬೇಕು ಎಂಬುದೇ ತಿಳಿದಿಲ್ಲ. ಮಹಿಳೆಗೆ ಹೇಗೆ ಗೌರವ ನೀಡಬೇಕು ಎನ್ನುವುದೂ ಗೊತ್ತಿಲ್ಲ. ಒಬ್ಬ ಮಹಿಳೆಯನ್ನು ಅವಾಚ್ಯ ಶಬ್ದದಿಂದ ನಿಂದಿಸಿದರೂ 'ಹಾಗೆ ಹೇಳಿಲ್ಲ' ಎಂದು ಸಮರ್ಥಿಸಿಕೊಳ್ಳಲಾಗುತ್ತಿದೆ. ಯಾವ ಮಹಿಳೆಯೂ ತನಗೆ ಬಂದಿರುವ ಇಂತಹ ಆರೋಪದ ಬಗ್ಗೆ ಸುಳ್ಳು ಹೇಳುವುದಿಲ್ಲ ಎಂದು ಹೇಳಿದರು. ಬೆಳಗಾವಿ ಅಧಿವೇಶನದಲ್ಲಿ ನಡೆದ ಘಟನೆಗೆ ಆಡಿಯೋ, ವಿಡಿಯೋ ಸಾಕ್ಷಿ ಇಲ್ಲ ಎಂದು ಹೇಳುತ್ತಿರುವ ಸಭಾಪತಿಯವರು, ಮಹಿಳೆ ಕುರಿತು ಅವಾಚ್ಯ ಶಬ್ದಗಳನ್ನು ಹೇಳಿರುವುದಕ್ಕೆ ಸಾಕ್ಷಿ ಇದ್ದರೂ ಅವರ ಮಾತು ನಂಬಲು ಸಿದ್ಧರಿಲ್ಲ. ಇಂತಹ ಸಂದರ್ಭದಲ್ಲಿ ನಾವಿದ್ದೇವೆ. ಹೆಣ್ಣಿಗೆ ಅವಮಾನ ಮಾಡಿದಾಗ ಕ್ಷಮೆ ಕೇಳುವುದು ದೊಡ್ಡತನ ಎಂದು ಹೇಳಿದರು.


ಉದಯವಾಹಿನಿ ಚಿತ್ರ

**ಗಡಿ ಪ್ರದೇಶಗಳೂ ಸೇರಿ ಎಲ್ಲೆಡೆ ಮುಚ್ಚುತ್ತಿರುವ ಕನ್ನಡ ಶಾಲೆಗಳನ್ನು ಉಳಿಸುವ ಅನಿವಾರ್ಯ ಸ್ಥಿತಿ ಇದೆ. ಹಾಗಾದಾಗ ಮಾತ್ರ ಕನ್ನಡದ ಉಳಿವು ಸಾಧ್ಯ. ಶಿಕ್ಷಣ ಕ್ಷೇತ್ರದಲ್ಲಿ ಮಾತ್ರವಲ್ಲದೆ, ಆಡಳಿತ ಸೇರಿ ಎಲ್ಲಾ ರಂಗದಲ್ಲೂ ಕನ್ನಡಕ್ಕೆ ಆದ್ಯತೆ ನೀಡಬೇಕಿದೆ. ಆದರೆ ಗಡಿ ಪ್ರದೇಶಗಳಲ್ಲಿ ನೆರೆ ರಾಜ್ಯಗಳ ಭಾಷೆ ಬಳಕೆ ವ್ಯಾಪಕವಾಗಿದ್ದು, ಇವರ ನಡುವೆ ಕನ್ನಡ ಕಲಿತು ಉಳಿಸಬೇಕಿದೆ. ಹಾಗಾಗಿ ಅವರಂತೆ ನಮ್ಮಲ್ಲಿಯೂ ಭಾಷಾಭಿಮಾನ ಬೆಳೆಸಿಕೊಳ್ಳುವ ಅಗತ್ಯವಿದೆ ಎಂದು ಹೇಳಿದರು. ಕದಂಬ ರತ್ನ ಪ್ರಶಸ್ತಿ 'ಕನ್ನಡ ನುಡಿ ಸಮ್ಮೇಳನದಲ್ಲಿ ವಿವಿಧ ಕ್ಷೇತ್ರದ ಸಾಧಕರಿಗೆ ಕದಂಬ ರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು.**


**ಪ್ರೊ.ಕೆಆರ್. ಅಂಜಿನ ರೆಡ್ಡಿ**

## ಬಿಡದಿ ಸ್ಥಾವರದಲ್ಲಿ ವಿದ್ಯುತ್ ಉತ್ಪಾದನೆ ಹೆಚ್ಚಿಸಲು ಇಂಧನ ಇಲಾಖೆ ಉತ್ಸುಕ

• **ಉದಯವಾಹಿನಿ, ಬೆಂಗಳೂರು**

ಇಂಧನ ಇಲಾಖೆಯು ಬಿಡದಿಯ ತ್ಯಾಜ್ಯದಿಂದ ಇಂಧನ ಉತ್ಪಾದನೆ ಘಟಕ ದಿನಕ್ಕೆ 11.5 ಮೆಗಾವ್ಯಾಟ್ (ಮೆಗಾವ್ಯಾಟ್) ವಿದ್ಯುತ್ ಉತ್ಪಾದಿಸುತ್ತಿದೆ.

ಬೆಂಗಳೂರಿನಲ್ಲಿ ಪ್ರತಿದಿನ ಉತ್ಪತ್ತಿಯಾಗುವ 600 ಟನ್ ಒಣ ತ್ಯಾಜ್ಯವನ್ನು ಇದಕ್ಕೆ ಬಳಸಲಾಗುತ್ತದೆ. ಸರ್ಕಾರಿ ಸಂಸ್ಥೆಯು ಅಸಾಂಪ್ರದಾಯಿಕ ವಿದ್ಯುತ್ ಉತ್ಪಾದನೆಯ ಮೂಲವಾಗಿ ಸ್ಥಾಪಿಸಲಾದ ಈ ಘಟಕದ ವಿದ್ಯುತ್ ಉತ್ಪಾದನೆಯ ಸಾಮರ್ಥ್ಯವನ್ನು ಹೆಚ್ಚಿಸಲು ಇಂಧನ ಇಲಾಖೆ ಉತ್ಸುಕವಾಗಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಕೂಡ ಈ ಕಲ್ಪನೆಯಿಂದ ಸಂತಸಗೊಂಡಿದ್ದು, ಹೆಚ್ಚುತ್ತಿರುವ ತ್ಯಾಜ್ಯ ನಿರ್ವಹಣೆಯ ಸಮಸ್ಯೆಯನ್ನು ಪರಿಹರಿಸಲು ಇದನ್ನು ಪರಿಹಾರವಾಗಿ ನೋಡುತ್ತಿದೆ.ಸ್ಥಾವರದ ಸ್ಥಾಪಿತ ಸಾಮರ್ಥ್ಯವನ್ನು ವಿಸ್ತರಿಸಲು ಸರ್ಕಾರ ಉತ್ಸುಕವಾಗಿದೆ, ಆದರೆ ಬಿಬಿಎಂಪಿ ಉತ್ತಮ ಗುಣಮಟ್ಟದ ಕಸದ ಸ್ಥಿರ ಗುಣಮಟ್ಟವನ್ನು ಖಚಿತಪಡಿಸಿದಾಗ ವಿದ್ಯುತ್ ಉತ್ಪಾದನೆ ಹೆಚ್ಚಿಸಲು ಸಾಧ್ಯ'' ಎಂದು ಇಂಧನ ಇಲಾಖೆ ಅಧಿಕಾರಿಗಳು ಹೇಳಿದ್ದಾರೆ. 370 ಕೋಟಿ ರೂಪಾಯಿ ವೆಚ್ಚದಲ್ಲಿ ಸ್ಥಾವರವನ್ನು ಸ್ಥಾಪಿಸಲಾಗಿದೆ ಮತ್ತು ಡಿಸೆಂಬರ್ 19, 2024 ರಿಂದ ವಾಣಿಜ್ಯ ಕಾರ್ಯಾಚರಣೆ ಪ್ರಾರಂಭಿಸಲಾಗಿದೆ. ಇಲ್ಲಿಯವರೆಗೆ ಈ ಕೇಂದ್ರದಲ್ಲಿ 49,131 ಮಿಲಿಯನ್ ಟನ್ ಒಣ ತ್ಯಾಜ್ಯವನ್ನು ಸ್ವೀಕರಿಸಲಾಗಿದೆ. ಅದರಲ್ಲಿ 44,006 ಮಿಲಿಯನ್ ಟನ್‌ಗಳನ್ನು ವಿದ್ಯುತ್ ಉತ್ಪಾದನೆಗೆ ಬಳಸಲಾಗಿದೆ. ಕೆಪಿಸಿಎಲ್ 14.6058 ಮಿಲಿಯನ್ ಯೂನಿಟ್ ವಿದ್ಯುತ್ ಉತ್ಪಾದಿಸಿದೆ. ಈ ಘಟಕವು 1.9035 ಮಿಲಿಯನ್ ಯೂನಿಟ್ ವಿದ್ಯುತ್ ಅನ್ನು ಸಹ ಬಳಸಿದ ಮತ್ತು 12.7023 ಮಿಲಿಯನ್ ಯೂನಿಟ್ ವಿದ್ಯುತ್ ಅನ್ನು ಗ್ರಿಡ್‌ಗೆ ಪೂರೈಸಿದೆ. ಸ್ಥಾವರದ ಅಧಿಕೃತ ಉದ್ಘಾಟನೆಯಲ್ಲಿ ವಿಳಂಬವಾಗಿದೆ ಎಂದು ಕೆಪಿಸಿಎಲ್ ಮೂಲಗಳು ತಿಳಿಸಿವೆ. ಆದಾಗ್ಯೂ, ಈಗಾಗಲೇ ವಿದ್ಯುತ್ ಉತ್ಪಾದನೆ ಪ್ರಾರಂಭವಾಗಿದೆ, ಪ್ರತಿದಿನ 11.5ಒಫ ವಿದ್ಯುತ್ ಅನ್ನು ಗ್ರಿಡ್‌ಗೆ ಸೇರಿಸಲಾಗುತ್ತಿದೆ. ಈ ಸ್ಥಾವರದ ಮೂಲಕ, ಬೆಂಗಳೂರಿನ ತ್ಯಾಜ್ಯವನ್ನು ಕನಿಷ್ಠ ಶೇ. 25 ರಷ್ಟು ಸಂಸ್ಕರಿಸಿ ವಿದ್ಯುತ್ ಉತ್ಪಾದಿಸುವ ಗುರಿ ಇದೆ. ಪ್ರಸ್ತುತ ನಗರವು ಸುಮಾರು 5,800 ಟನ್ ತ್ಯಾಜ್ಯವನ್ನು ಉತ್ಪಾದಿಸುತ್ತದೆ. ಅದರಲ್ಲಿ 2,000 ಟನ್ ಒಣ ತ್ಯಾಜ್ಯ, ಬಿಬಿಎಂಪಿ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುತ್ತಿದೆ.



## ಪ್ರಿಯಾಂಕ್ ಖರ್ಗೆ ಆಪ್ತನ ಕಿರುಕುಳಕ್ಕೆ ಬೇಸತ್ತು ಗುತ್ತಿಗೆದಾರ ಆತ್ಮಹತ್ಯೆ

• **ಉದಯವಾಹಿನಿ, ಬೆಂಗಳೂರು**

2022ರಲ್ಲಿ ರಾಜ್ಯದಲ್ಲಿ ಸದ್ದು ಮಾಡಿದ್ದ ಹಾಗೂ ಅಂದು ಸಚಿವ ಕೆ.ಎಸ್. ಈಶ್ವರಪ್ಪನವರ ರಾಜೀನಾಮೆಗೆ ಕಾರಣವಾಗಿದ್ದ ಗುತ್ತಿಗೆದಾರ ಸಂತೋಷ್ ಪಾಟೀಲ್ ರವರ ಆತ್ಮಹತ್ಯೆ ಪ್ರಕರಣವನ್ನು ಹೋಲುವಂಥ ಮತ್ತೊಂದು ಪ್ರಕರಣವೀಗ ರಾಜ್ಯದಲ್ಲಿ ಬೆಳಕಿಗೆ ಬಂದಿದೆ.

ಕಲಬುರಗಿಯಲ್ಲಿ ಸಚಿನ್ (26) ಎಂಬ ಗುತ್ತಿಗೆದಾರನ ಶವವೊಂದು ರೈಲ್ವೆ ಹಳಿ ಮೇಲೆ ಸಿಕ್ಕಿದೆ.

ಇವರು ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ಕಟ್ಟಿತೂಂಗಾವ್ ಎಂಬ ಗ್ರಾಮದವರಾಗಿದ್ದು, ರೈಲ್ವೆ ಹಳಿಗೆ ತಲೆಕೊಟ್ಟು ಆತ್ಮಹತ್ಯೆ ಮಾಡಿಕೊಂಡಿರಬಹುದೆಂದು ಪೊಲೀಸರು ಶಂಕಿಸಿದ್ದಾರೆ.

ಶವದ ಜೊತೆಗೆ ಡೆತ್ ನೋಟ್ ಕೂಡ ಸಿಕ್ಕಿದ್ದು, ಅದರಲ್ಲಿ ಪ್ರಿಯಾಂಕ್ ಖರ್ಗೆಯವರ ಆಪ್ತರಾದ ರಾಜು ಕಪನೂರು ಅವರು ತಮಗೆ ಹಣಕ್ಕಾಗಿ ಕಿರುಕುಳ ನೀಡುತ್ತಿದ್ದು ಅದನ್ನು ಸಹಿಸಲಾಗದೇ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಬರೆಯಲಾಗಿದೆ.


ಉದಯವಾಹಿನಿ ಚಿತ್ರ

## ಶೇ.70ರಷ್ಟು ರಸ್ತೆ ಅಪಘಾತಗಳು ರಾತ್ರಿ ವೇಳೆ ಸಂಭವಿಸುತ್ತವೆ

• **ಉದಯವಾಹಿನಿ, ಬೆಂಗಳೂರು**

ಐಟಿ ಸಿಟಿ ಬೆಂಗಳೂರು ನಗರದಲ್ಲಿ ನವೆಂಬರ್ ತಿಂಗಳವರೆಗೆ ಪ್ರತಿದಿನವೆಂಬಂತೆ ಸರಾಸರಿ ರಸ್ತೆ ಅಪಘಾತದಲ್ಲಿ ಇಬ್ಬರು ಮೃತಪಟ್ಟಿದ್ದಾರೆ, 11 ಜನರು ಗಾಯಗೊಂಡಿದ್ದಾರೆ.

ಈ ಅಪಘಾತಗಳಲ್ಲಿ ಸುಮಾರು ಶೇಕಡಾ 70ರಷ್ಟು ಅಪಘಾತಗಳು ರಾತ್ರಿ ಹೊತ್ತಿನಲ್ಲಿ ಸಂಭವಿಸಿದೆ, ಅತಿಯಾದ ವೇಗ, ರಸ್ತೆ ಸ್ಪಷ್ಟವಾಗಿ ಗೋಚರವಾಗದಿರುವುದು, ಚಾಲನಾ ಕೌಶಲ್ಯದ ಕೊರತೆ ಮತ್ತು ಅಸಮರ್ಪಕ ಮೂಲಸೌಕರ್ಯ ಅಪಘಾತ ಹೆಚ್ಚುತ್ತಿರುವುದಕ್ಕೆ ಕಾರಣ ಎಂದು ತಜ್ಞರು ಹೇಳುತ್ತಾರೆ. ನವೆಂಬರ್ ಅಂತ್ಯದವರೆಗಿನ ಅಂಕಿಅಂಶಗಳ ಪ್ರಕಾರ, 780 ಮಾರಣಾಂತಿಕ ಅಪಘಾತಗಳು ವರದಿಯಾಗಿದ್ದು, 802 ಜನರು ಪ್ರಾಣ ಕಳೆದುಕೊಂಡಿದ್ದಾರೆ. ಅಲ್ಲದೆ, 3,571 ಮಾರಣಾಂತಿಕವಲ್ಲದ ಅಪಘಾತಗಳಲ್ಲಿ 3,685 ಜನರು ಗಾಯಗೊಂಡಿದ್ದಾರೆ.

2023 ರಲ್ಲಿ, 882 ಮಾರಣಾಂತಿಕ ಅಪಘಾತಗಳು ಮತ್ತು 4,092 ಮಾರಣಾಂತಿಕವಲ್ಲದ ಅಪಘಾತಗಳು ವರದಿಯಾಗಿವೆ. ವರ್ಷ, ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಸಂಚಾರ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಹೆಚ್ಚಿನ ಸಂಖ್ಯೆಯ ಅಪಘಾತಗಳು ನಡೆದಿವೆ, ಇಲ್ಲಿ 224 ಅಪಘಾತಗಳು ದಾಖಲಾಗಿವೆ. ಇದರ ಪರಿಣಾಮವಾಗಿ 53 ಸಾವುಗಳು, 230 ಗಾಯಗಳು ಸಂಭವಿಸಿವೆ.ಇದಾದ ನಂತರ ಕೆಆರ್ ಪುರಂ ಸಂಚಾರಿ ಪೊಲೀಸ್ ಠಾಣೆಯಲ್ಲಿ ಅತಿ ಹೆಚ್ಚು 222 ಪ್ರಕರಣಗಳು ವರದಿಯಾಗಿವೆ.

ಉಪ ಪೊಲೀಸ್ ಆಯುಕ್ತ (ಸಂಚಾರ-ದಕ್ಷಿಣ ವಿಭಾಗ) ಶಿವಪ್ರಕಾಶ ದೇವರಾಜು ನ್ಯೂ ಇಂಡಿಯನ್ ಎಕ್ಸ್ ಪ್ರೆಸ್ ಪ್ರತಿನಿಧಿ ಜೊತೆಗೆ ಮಾತನಾಡಿ, ನಗರದಲ್ಲಿ ರಾತ್ರಿ ವೇಳೆ ಅಪಘಾತಗಳು ಹೆಚ್ಚುತ್ತಿರುವುದು ಆತಂಕಕಾರಿ ವಿಷಯವಾಗಿದೆ. ಶೇಕಡಾ 75 ರಿಂದ 80 ರಷ್ಟು ಮಾರಣಾಂತಿಕ, ಮಾರಣಾಂತಿಕವಲ್ಲದ ಅಪಘಾತಗಳು ಸಂಜೆ 6 ರಿಂದ ಬೆಳಗ್ಗೆ 6 ರವರೆಗೆ ಸಂಭವಿಸುತ್ತವೆ.ಪಾದಚಾರಿಗಳು, ದ್ವಿಚಕ್ರ ವಾಹನ ಸವಾರರು ಹೆಚ್ಚು ತೊಂದರೆ ಅನುಭವಿಸುವಂತಾಗಿದೆ.

# ಆನ್‌ಲೈನ್‌ನಲ್ಲಿ ಡೌನ್‌ಲೋಡ್ ಮಾಡಲು ರಾಜ್ಯ ಸರ್ಕಾರ ಅವಕಾಶ

## ಮೊಬೈಲ್ ಮೂಲಕ ಜಮೀನಿನ ಪೋಡಿ ನಕ್ಷೆ ಪಡೆಯುವ ಕುರಿತು ಇಲ್ಲಿದೆ ಮಾಹಿತಿ

• **ಉದಯವಾಹಿನಿ, ಬೆಂಗಳೂರು**

ರೈತರ ಅನುಕೂಲಕ್ಕಾಗಿ ಆಯಾ ಊರಿನ ವ್ಯಾಪ್ತಿಯ ಪೋಡಿ ನಕ್ಷೆಯನ್ನು ಆನ್‌ಲೈನ್‌ನಲ್ಲಿ ಡೌನ್‌ಲೋಡ್ ಮಾಡಲು ರಾಜ್ಯ ಸರ್ಕಾರವು ಅವಕಾಶ ನೀಡಲಾಗುತ್ತಿದೆ.

ನೀವು ಪೋಡಿ ನಕ್ಷೆಯನ್ನು ಕುಳಿತಲ್ಲೇ ಡೌನ್ ಲೋಡ್ ಮಾಡಿಕೊಳ್ಳಲು ಮುಂದಿನ ಹಂತಗಳನ್ನು ಅನುಸರಿಸಿ. ಡಿಜಿಟಲ್ ಆಯಪ್ ಮುಖಾಂತರ ಮಾಡುವುದರಿಂದ ಸರಳ, ವೇಗವಾಗಿ ಕಡತಗಳನ್ನು ತಯಾರಿಸಬಹುದು. ಯಾರ ಬಳಿ ವಿಳಂಬವಾಗಿದೆ ಎಂಬುದು ಪಾರದರ್ಶಕವಿರುವುದರಿಂದ, ವೇಗವಾಗಿ ಕೆಲಸವಾಗಬಹುದು.

ಮೂಲ ಮಂಜೂರಿ ದಾಖಲೆಗಳನ್ನು ಸುರಕ್ಷಿತ ವಾಗಿಡಬಹುದು. ಮುಂದೆ ತಿದ್ದಲು, ನಕಲು ಮಾಡಲು ಸಾಧ್ಯವಿಲ್ಲ. ಒಬ್ಬ ರೈತನಿಗೆ ತಯಾರು ಮಾಡಿದ 1-5 (ನಮೂನೆ)ಕಡತ, ಆ ಸರ್ವೆ ನಂಬರಿನ ಎಲ್ಲಾ ರೈತರಿಗೂ ಅದೇ ಕಡತ ಅನುಕೂಲವಾಗುತ್ತದೆ. 1- 5(ನಮೂನೆ)ಕಡತ ಕಾಣೆಯಾಗಲು ಅಥವಾ ಕಳೆದು ಹೋಗಲು ಸಾಧ್ಯವಿಲ್ಲ.ಕುಟುಂಬದ ಸದಸ್ಯರ ಪಾಲುಗಾರಿಕೆ, ಭೂ ಆಸ್ತಿಯ ಕೆಲವು ಭಾಗ ಮಾರಾಟ, ದಾನಪತ್ರ, ನಿವೇಶನಕ್ಕೆ ಬಳಕೆ, ಭೂ ಪರಿವರ್ತನೆ ಸೇರಿ ಹಲವು ಚಟುವಟಿಕೆಗಳಿಗೆ ಪೋಡಿ ನಕ್ಷೆ ಅವಶ್ಯಕವಾಗಿದೆ. ಒಂದು ಸರ್ವೇ ನಂಬರಿನಲ್ಲಿ ಹಲವರ ಹೆಸರಿದ್ದರೆ ಮುಂದೆ ಸರ್ಕಾರದಿಂದ ಸೌಲಭ್ಯ ಪಡೆಯುವುದಕ್ಕೆ ತೊಂದರೆಯಾಗುತ್ತದೆ. ಜೊತೆಗೆ ಜಮೀನು ಮಾರಾಟ ಸಂದರ್ಭದಲ್ಲಿಯೂ ತೊಡಕಾಗುವ ಸಾಧ್ಯತೆ ಇರುತ್ತದೆ. ಹೀಗಾಗಿ ರಾಜ್ಯ ಸರ್ಕಾರವು ಮೊಬೈಲ್‌ನಲ್ಲೇ ಪೋಡಿ ನಕ್ಷೆ ಪಡೆಯುವ ಹೊಸ ತಂತ್ರಾಂಶವನ್ನು ಬಿಡುಗಡೆಮಾಡಿದೆ. ಪೋಡಿ ನಕ್ಷೆ ಮಾಡಿಸುವುದಕ್ಕಾಗಿ ಸರ್ಕಾರಿ ಕಚೇರಿಗಳಿಗೆ ಅಲೆಯುವುದನ್ನು ತಪ್ಪಿಸುವುದಕ್ಕಾಗಿ ಸರ್ಕಾರವು ಈಗ ಆನ್ಲೈನ್ ವ್ಯವಸ್ಥೆಯನ್ನು ಮಾಡಿದೆ. ರೈತರು ಸ್ವತಃ ಅವರೆ ಮೊಬೈಲ್‌ನಲ್ಲಿ ಜಮೀನಿನ ಪೋಡಿ ನಕ್ಷೆ ತಯಾರಿಸಿಕೊಳ್ಳಬಹುದು. ಸಹೋದರರು, ಸಂಬಂಧಿಕರು ಮನೆಯಲ್ಲಿಯೇ ಕುಳಿತು ತಮ್ಮ ಜಮೀನಿನ ಭಾಗ ಮಾಡಿಕೊಳ್ಳಲು ಇದು ಅವಕಾಶ ಕಲ್ಪಿಸಿದೆ. ಈ ರೀತಿಯಾಗಿ ಮೊಬೈಲ್‌ನಲ್ಲಿ ಪೋಡಿ ನಕ್ಷೆ ಪಡೆಯಬಹುದು.



ಉದಯವಾಹಿನಿ ಚಿತ್ರ

**ಮೊದಲು ಅಧಿಕೃತ ವೆಬ್ ಸೈಟ್ https://bhoomojini.karnataka.gov.in/Service27 ಕ್ಲಿಕ್ ಮಾಡಬೇಕು. ಆಗ ಭೂ ಕಂದಾಯ ಇಲಾಖೆಯ ಸ್ವಾವಲಂಬಿ ಆಯಪ್ ಪೇಜ್ ಓಪನ್ ಆಗುತ್ತದೆ. ರೈತರು ಮೊಬೈಲ್ ನಂಬರ್ ಹಾಕಿ ಕ್ಯಾಪ್ಚಾ ಕೋಡ್ ನಮೂದಿಸಬೇಕು. ನಂತರ ಮೊಬೈಲ್‌ಗೆ ಓಟಿಪಿ ಬರುತ್ತದೆ. ಓಟಿಪಿ ನಮೂದಿಸಿದ ನಂತರ ಇನ್ನೊಂದು ಪೇಜ್ ತೆರೆದುಕೊಳ್ಳುತ್ತದೆ. ಅಲ್ಲಿ ಹೊಸ ಅರ್ಜಿ ಮೇಲೆ ಕ್ಲಿಕ್ ಮಾಡಿ ವೈಯಕ್ತಿಕ ವಿವರಗಳನ್ನು ಭರ್ತಿ ಮಾಡಬೇಕು. ಆಧಾರ್ ಕಾರ್ಡ್‌ನಲ್ಲಿರುವ ಹೆಸರನ್ನು ನಮೂದಿಸಿ ಮುಂದಿನ ಪ್ರಕ್ರಿಯೆ ಪೂರ್ಣಗೊಳಿಸಿದರೆ ಪೋಡಿ ನಕ್ಷೆ ಸಿಗುತ್ತದೆ.**

ಇನ್ನು ಕಂದಾಯ ಇಲಾಖೆಯು ಕರ್ನಾಟಕದ ಜನರಿಗೆ ಪ್ರತಿ ಹಳ್ಳಿಯ ಕಂದಾಯ ನಕ್ಷೆಯನ್ನು ಆನ್‌ಲೈನ್ ಮೂಲಕವೇ ಡೌನ್‌ಲೋಡ್ ಮಾಡಿಕೊಳ್ಳೋದಕ್ಕೆ ಅವಕಾಶ ನೀಡಲಾಗಿದೆ. ಇದಕ್ಕಾಗಿ ನೀವು https://landrecords.karnataka.gov.in/service3/ ಕ್ಲಿಕ್ ಮಾಡಿ. ಈ ಹಂತ ಅನುಸರಿಸಿ, ಕುಳಿತಲ್ಲೇ ಕಂದಾಯ ನಕ್ಷೆ ಡೌನ್‌ಲೋಡ್ ಮಾಡಿ https://landrecords.karnataka.gov.in/service3/ ಕಂದಾಯ ಇಲಾಖೆಯ ಅಧಿಕೃತ ಜಾಲತಾಣಕ್ಕೆ ಭೇಟಿ ನೀಡಿ. ಈ ಮೇಲ್ಕಂಡ ಲಿಂಕ್ ಕ್ಲಿಕ್ ಮಾಡಿದ ನಂತ್ರ ನಿಮಗೆ ನಿಮ್ಮ ಜಿಲ್ಲೆ. ತಾಲ್ಲೂಕು, ಹೋಬಳಿ ಹಾಗೂ ಗ್ರಾಮದ ಆಯ್ಕೆಯನ್ನು ತೋರಿಸುತ್ತದೆ ಅದನ್ನು ಆಯ್ಕೆ ಮಾಡಿಕೊಳ್ಳಿ. ಇದಾದ ಬಳಿಕ ನಿಮ್ಮ ಹೋಬಳಿಯ ಸಂಪೂರ್ಣ ಹಳ್ಳಿಗಳ ಕಂದಾಯ ನಕ್ಷೆಯನ್ನು ಪಿಡಿಎಫ್ ಫಾರ್ಮೆಟ್‌ನಲ್ಲಿ ತೋರಿಸಲಿದೆ. ನೀವು ನಿಮಗೆ ಬೇಕಾದ ಹಳ್ಳಿಯ ಕಂದಾಯ ನಕ್ಷೆಯನ್ನು ಪಕ್ಕದಲ್ಲಿ ಕಾಣುವಂತ ಪಿಡಿಎಫ್ ಮೇಲೆ ಕ್ಲಿಕ್ ಮಾಡಿ ಡೌನ್ ಲೋಡ್ ಮಾಡಿಕೊಳ್ಳಬಹುದಾಗಿದೆ.

# ಐತಿಹಾಸಿಕ ಮಹತ್ವ ತೆರೆದಿಟ್ಟ ಸಂಸದ ಯದುವೀರ್ ಒಡೆಯರ್

## ಪ್ರಿನ್ಸೆಸ್ ರಸ್ತೆಗೆ ರಾಜ್ಯ ಸರ್ಕಾರದಿಂದ ಸಿದ್ದರಾಮಯ್ಯ ಆರೋಗ್ಯ ಮಾರ್ಗ ಎಂದು ಮರುನಾಮಕರಣ ಮಾಡುವ ವಿಚಾರ

• ಉದಯವಾಹಿನಿ ಮೈಸೂರು

ಮೈಸೂರು ನಗರದದಿಂದ ಕೆಆರ್‌ಎಸ್‌ಗೆ ತೆರಳುವ ಮಾರ್ಗವಾದ ಪ್ರಿನ್ಸೆಸ್ ರಸ್ತೆಗೆ ರಾಜ್ಯ ಸರ್ಕಾರದಿಂದ ಸಿದ್ದರಾಮಯ್ಯ ಆರೋಗ್ಯ ಮಾರ್ಗ ಎಂದು ಮರುನಾಮಕರಣ ಮಾಡುವ ವಿಚಾರ ಸದ್ಯ ಚರ್ಚೆಯಲ್ಲಿದೆ. ಈ ಬಗ್ಗೆ ಮೈಸೂರು ರಾಜವಂಶಸ್ಥ ಹಾಗೂ ಮೈಸೂರು ಕೊಡಗು ಸಂಸದ ಯದುವೀರ್ ಒಡೆಯರ್ ಪ್ರತಿಕ್ರಿಯಿಸಿದ್ದು, ಸುದೀರ್ಘ ಪೋಸ್ಟ್ ಮೂಲಕ ಪ್ರಿನ್ಸೆಸ್ ರಸ್ತೆಯ ಐತಿಹಾಸಿಕ ಮಹತ್ವವನ್ನು ವಿವರಿಸಿದ್ದಾರೆ. ಮೈಸೂರು ಪರಂಪರೆ ಉಳಿಸೋಣ. ಕೆಆರ್‌ಎಸ್‌ಗೆ ತೆರಳುವ ಮಾರ್ಗದ ಪ್ರಿನ್ಸೆಸ್ ರಸ್ತೆಯನ್ನು ಸಿದ್ದರಾಮಯ್ಯ ಆರೋಗ್ಯ ಮಾರ್ಗ ಎಂದು ಮರುನಾಮಕರಣ ಮಾಡದೇ ಪರಂಪರೆಯನ್ನು ಉಳಿಸಿ ಎಂದು ಸಂಸದ ಯದುವೀರ್ ಒಡೆಯರ್ ಮನವಿ ಮಾಡಿದ್ದಾರೆ. ಪ್ರಿನ್ಸೆಸ್ ರಸ್ತೆಯ ಐತಿಹಾಸಿಕ ಮಹತ್ವ ಕೆಆರ್‌ಎಸ್ ರಸ್ತೆ ಎಂದು ಜನಪ್ರಿಯವಾಗಿರುವ ರಾಜಕುಮಾರಿ ರಸ್ತೆ ಕೇವಲ ರಸ್ತೆಯ ಹೆಸರಲ್ಲದೆ ಐತಿಹಾಸಿಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ಹೊಂದಿದೆ.

ಮಹಾರಾಜಕುಮಾರಿ ಕೃಷ್ಣಾಜಮ್ಮಣ್ಣಿ ಅವರ ಹೆಸರಿನಲ್ಲಿ ಸ್ಥಾಪಿಸಲಾದ ಪಿಕೆ ಸ್ಯಾನಿಟೋರಿಯಂ ಮೂಲಕ ಅವರ ಸ್ಮರಣೆಯು ಜೀವಂತವಾಗಿದೆ.

### ಐತಿಹಾಸಿಕ ಪ್ರಾಮುಖ್ಯತೆ

**ಇದು ಜಯದೇವ ಹೃದ್ರೋಗ ಆಸ್ಪತ್ರೆ, ಟ್ರಾಮಾ ಕೇರ್ ಸೆಂಟರ್, ಮತ್ತು ಸೂಪರ್-ಸ್ಪೆಷಾಲಿಟಿ ಆಸ್ಪತ್ರೆ ಸೇರಿದಂತೆ ಅನೇಕ ಸೌಲಭ್ಯಗಳಿಗೆ ಮುಂದುವರಿದಂತೆ ಈ ಜಾಗವು ವಿಸ್ತರಿಸಿಕೊಂಡಿದೆ. ಸಾಂಸ್ಕೃತಿಕ ಮತ್ತು ಐತಿಹಾಸಿಕ ಪ್ರಾಮುಖ್ಯತೆ ಪ್ರಿನ್ಸೆಸ್ ರೋಡ್ ಮೈಸೂರಿನ ಇತಿಹಾಸ ಮತ್ತು ಒಡೆಯರ್ ಕುಟುಂಬದ ಪರಂಪರೆಯನ್ನು ಒಳಗೊಂಡಿದೆ. ಇದನ್ನು ಸಿದ್ದರಾಮಯ್ಯ ಆರೋಗ್ಯ ಮಾರ್ಗ ಎಂದು ಮರುನಾಮಕರಣ ಮಾಡುವುದರಿಂದ ನಗರದ ಪರಂಪರೆಯ ಪ್ರಮುಖ ಸಂಬಂಧವನ್ನು ಅಳಿಸಿಹಾಕಿದಂತಾಗುತ್ತದೆ.**

ಮಹಾರಾಜಕುಮಾರಿ ಚೆಲುವಾಜಮ್ಮಣ್ಣಿ ಅವರ ನಿವಾಸ, ಚೆಲುವಾಂಬ ಮ್ಯಾನ್ಸನ್, ಈಗಿನ ಸಿಎಫ್ಟಿಆರ್‌ಐ ಬಂಗಲೆಯು ಸಹ ಇದೆ ರಸ್ತೆಯಲ್ಲಿದೆ. ಮಹಾರಾಜಕುಮಾರಿ ಕೃಷ್ಣಾಜಮ್ಮಣ್ಣಿ ಅವರ ಇತಿಹಾಸ ಮಹಾರಾಜಕುಮಾರಿ ಕೃಷ್ಣಾಜಮ್ಮಣ್ಣಿ ಅವರ ಜೀವನವು ದುರಂತದ ಸಾವು ಮತ್ತು ಮೈಸೂರಿನ ಇತಿಹಾಸಕ್ಕೆ ಮಹತ್ವದ ಕೊಡುಗೆಗಳಿಂದ ಗುರುತಿಸಲ್ಪಟ್ಟಿದೆ.

ಕರ್ನಲ್, ಜಾಗೀರ್ದಾರ್ ಶ್ರೀ ದೇಸ ರಾಜೇ ಅರಸ್ ಧರ್ಮಪತ್ನಿಯಾದ ಇವರು ಮತ್ತು ಇವರ ಮೂವರು ಹೆಣ್ಣುಮಕ್ಕಳು 1904 ಮತ್ತು 1913ರ ನಡುವೆ ಕ್ಷಯರೋಗಕ್ಕೆ ಬಲಿಯಾದರು. ಅವರ ಸ್ಮರಣೆಯನ್ನು ಗೌರವಿಸಲು ರಾಜಕುಮಾರಿ ಕೃಷ್ಣಜಮ್ಮಣ್ಣಿ ಸ್ಯಾನಿಟೋರಿಯಂ (PKTB ಆಸ್ಪತ್ರೆ) ಸ್ಥಾಪಿಸಲು ಅವರ ಕುಟುಂಬ 100 ಎಕರೆ ಭೂಮಿಯನ್ನು ದಾನ ಮಾಡಿದೆ. ಆರೋಗ್ಯ ರಕ್ಷಣೆಗಾಗಿ ರಾಜಮನೆತನದ ದೃಷ್ಟಿಕೋನವು ಪಿಕೆ ಸ್ಯಾನಿಟೋರಿಯಂ ಸ್ಥಾಪನೆಗೆ ಕಾರಣವಾಯಿತು.1918 ರಲ್ಲಿ, ಮಹಾರಾಣಿ ಕೆಂಪನಂಜಮ್ಮಣ್ಣಿ ಮೈಸೂರಿನ ಹೊರವಲಯದಲ್ಲಿ ಸ್ಯಾನಿಟೋರಿಯಂಗೆ ಅಡಿಗಲ್ಲು ಹಾಕಿದರು.

ಕರ್ನಲ್ ದೇಸ ರಾಜೇ ಅರಸ್ 75,000, ಅದರ ನಿರ್ಮಾಣ ಮತ್ತು ಸೌಲಭ್ಯಗಳಿಗಾಗಿ ಆ ಸಮಯದಲ್ಲೇ ಗಮನಾರ್ಹ ಮೊತ್ತವನ್ನು ನೀಡಿದರು. 1921 ರಲ್ಲಿ ತೆರೆಯಲಾದ ಆಸ್ಪತ್ರೆಯು ಕ್ಷಯರೋಗ ಚಿಕಿತ್ಸಾ ಕೇಂದ್ರವಾಗಿ ಕಾರ್ಯನಿರ್ವಹಿಸುತ್ತಿದೆ.

**ಐತಿಹಾಸಿಕ ಪರಂಪರೆಯನ್ನು ಉಳಿಸಿ**




ರಸ್ತೆಯು ರಾಜಕುಮಾರಿಯರು ಮತ್ತು ರಾಜಮನೆತನದ ಕೊಡುಗೆಗಳನ್ನು ಸ್ಮರಿಸುವ ಪ್ರಮುಖ ಮಾರ್ಗವಾಗಿದೆ. ಇದು ಭವಿಷ್ಯದ ಪೀಳಿಗೆಗೆ ಮೈಸೂರಿನ ಸಾಂಸ್ಕೃತಿಕ ಗುರುತಿಗೆ ಸಂಬಂಧಿಸಿದ ಐತಿಹಾಸಿಕ ಹೆಗ್ಗುರುತುಗಳನ್ನು ಸಂರಕ್ಷಿಸುವ ಮಹತ್ವವನ್ನು ನೆನಪಿಸುತ್ತದೆ. ಮರುನಾಮಕರಣ ಏಕೆ ಸೂಕ್ತವಲ್ಲ ಆಧುನಿಕ ನಾಯಕರು ಮತ್ತು ಅವರ ಕೊಡುಗೆಗಳನ್ನು ಗೌರವಿಸುವಾಗ, ಪ್ರಿನ್ಸೆಸ್ ರಸ್ತೆಯ ಮರುನಾಮಕರಣವು ಮೈಸೂರಿನ ಐತಿಹಾಸಿಕ ಮಹತ್ವ ಮತ್ತು ಪರಂಪರೆಯನ್ನು ಕೆಡವಿದಂತಾಗುತ್ತದೆ.ಪಿಕೆ ಸ್ಯಾನಿಟೋರಿಯಂ ಮತ್ತು ಚೆಲುವಾಂಬ ಮ್ಯಾನ್ಸನ್ನ ಇತಿಹಾಸದಿಂದಾಗಿ ರಸ್ತೆಯು ಈಗಾಗಲೇ ಆಳವಾದ ಸಾಂಸ್ಕೃತಿಕ ಮಹತ್ವವನ್ನು ಹೊಂದಿದೆ. ಈ ಹೆಸರುಗಳನ್ನು ಅಳಿಸುವುದರಿಂದ ಆರೋಗ್ಯ ಮತ್ತು ಸಮುದಾಯ ಸೇವೆಯಲ್ಲಿ ರಾಜಮನತನದ ಕೊಡುಗೆಯನ್ನು ಕಡೆಗಣಿಸಿದಂತಾಗುತ್ತದೆ. ಪ್ರಿನ್ಸೆಸ್ ರಸ್ತೆಯ ಶ್ರೀಮಂತ ಇತಿಹಾಸವನ್ನು ಸಂರಕ್ಷಿಸಬೇಕು. ಮೈಸೂರಿನ ಸಾಂಸ್ಕೃತಿಕ ಮತ್ತು ಐತಿಹಾಸಿಕ ಪರಂಪರೆಯನ್ನು ಪ್ರತಿಬಿಂಬಿಸುವ ಹೆಸರನ್ನು ಉಳಿಸಿಕೊಳ್ಳುವ ಮೂಲಕ ರಾಜಕುಮಾರಿ ಕೃಷ್ಣಜಮ್ಮಣ್ಣಿ ಅವರು ಮತ್ತು ಅವರ ಕುಟುಂಬದ ಕೊಡುಗೆಗಳ ಸ್ಮರಣೆಯನ್ನು ನಾವು ಗೌರವಿಸೋಣ.

**ಸಾರ್ವಜನಿಕ ಹೆಗ್ಗುರುತುಗಳಿಗೆ ಸಂಬಂಧಿಸಿದ ನಿರ್ಧಾರಗಳನ್ನು ಮಾಡುವಾಗ ಮೈಸೂರು ಜನತೆಯ ಭಾವನೆಗಳನ್ನು ಮತ್ತು ಅವರ ಪರಂಪರೆಯನ್ನು ಗೌರವಿಸಬೇಕಾಗಿದೆ. ಒಟ್ಟಾಗಿ, ಮೈಸೂರಿನ ಪಾರಂಪರಿಕ ಇತಿಹಾಸವನ್ನು ಹಾಗೂ ಅದರ ಹೆಗ್ಗುರುತುಗಳನ್ನು ಅಳಿಸಿ ಹಾಕುವ ಯಾವುದೇ ನಿರ್ಣಯವೂ ಸಹ ನಮ್ಮ ಮುಂದಿನ ಪೀಳಿಗೆಗೆ ಮಾರಕವಾಗುತ್ತದೆ ಮತ್ತು ಮೈಸೂರಿನ ಸಾಂಸ್ಕೃತಿಕ ಪರಂಪರೆಯನ್ನು ಕೊಂದಂತಾಗುತ್ತದೆ -ಯದುವೀರ್**

---

## ಮಾದರಿಯಾದ ಯರ‍್ರನಾಗೇನಹಳ್ಳಿ ಸರ್ಕಾರಿ ಶಾಲೆ

• ಉದಯವಾಹಿನಿ ಸಾದಲಿ

ಸರ್ಕಾರಿ ಶಾಲೆಯೆಂದರೆ ಮೂಗು ಮುರಿಯುವ ದಿನಮಾನಗಳಲ್ಲಿ ಇಲ್ಲೊಂದು ಸರ್ಕಾರಿ ಶಾಲೆ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಸವಾಲೊಡ್ಡುವಂತಿದೆ. ಪೋಷಕರು ಹಾಗೂ ವಿದ್ಯಾರ್ಥಿಗಳು ಇಲ್ಲಿನ ಶೈಕ್ಷಣಿಕ ವಾತಾವರಣಕ್ಕೆ ಮಾರು ಹೋಗಿದ್ದಾರೆ. ಒಂದು ಕಾಲದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗಿ ಮೂಲಸೌಕರ್ಯಗಳಿಂದ ವಂಚಿತವಾಗಿದ್ದ ಸಾದಲಿ ಹೋಬಳಿಯ ಯರ‍್ರನಾಗೇನಹಳ್ಳಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಇದೀಗ ಖಾಸಗಿ ಶಾಲೆಯನ್ನು ಮೀರಿಸುತ್ತಿದೆ. ಖಾಸಗಿ ಶಾಲೆಗಳ ಮೊರೆಹೋಗುತ್ತಿರುವ ಮಕ್ಕಳು, ಪಾಲಕರು ಮೂಗಿನ ಮೇಲೆ ಬೆರಳು ಇಟ್ಟುಕೊಳ್ಳುವಂತೆ ಬದಲಾಗಿದೆ. ಸುತ್ತಲೂ ಇರುವ ಪ್ರಕೃತಿಯ ಮಡಿಲು ಶಾಲೆಯ ಅಂದವನ್ನು ಹೆಚ್ಚಿಸಿದೆ.

ಶಾಲೆ ಆವರಣಕ್ಕೆ ತಂತಿ ಬೇಲಿ, ನಡುವೆ ಸುಸಜ್ಜಿತ ಕ್ರೀಡಾಂಗಣ, 50 ಜಾತಿಯ 500ಕ್ಕೂ ಹೆಚ್ಚು ಹೂ-ಹಣ್ಣಿನ ಗಿಡಗಳನ್ನು ನೆಡಲಾಗಿದೆ.

ನಿರಂತರ ನೀರಿನ ವ್ಯವಸ್ಥೆ, ಹಸಿರು ಹುಲ್ಲು, ಕೈತೋಟ, ಶಾಲೆ ಕಟ್ಟಡಕ್ಕೆ ಸುಣ್ಣ ಬಣ್ಣ. ಸುಸಜ್ಜಿತ ಗ್ರಂಥಾಲಯ, ಊಟದ ಕೊಠಡಿ, ಕಂಪ್ಯೂಟರ್ ಮೇಜು, ಅಲ್ಲಲ್ಲಿ ನಿಸರ್ಗದ ಪೇಂಟಿಂಗ್ ಹೀಗೆ ಹತ್ತು ಹಲವು ರೀತಿಯ ಬದಲಾವಣೆಗಳು ಶಾಲೆಯ ಅಂದವನ್ನು ಹೆಚ್ಚಿಸಿವೆ. ಶಾಲೆಯಲ್ಲಿ ಉಂಟಾಗಿರುವ ಬದಲಾವಣೆಗಳು ಸಾದಲಿ ಹೋಬಳಿಯಲ್ಲಿ ಸಂಚಲನ ಮೂಡಿಸಿದೆ. ಇಷ್ಟೆಲ್ಲಾ ಬದಲಾವಣೆಗೆ ಕಾರಣವಾಗಿದ್ದು ಶಿಕ್ಷಕ ಮಂಜುನಾಥ್, ತನ್ನ ಸ್ವಂತ ಖರ್ಚಿನಿಂದ ಹಿಂದುಳಿದಿದ್ದ ಶಾಲೆಯನ್ನು ಅಭಿವೃದ್ಧಿಪಡಿಸಲು ಸಾಕಷ್ಟು ಶ್ರಮಿಸಿದ್ದಾರೆ. ಪ್ರಚಾರದ ಹಂಗಿಲ್ಲದೇ ತೆರೆಮರೆಯಲ್ಲಿ ಸ್ವಂತ ಹಣದಿಂದ ಶಾಲೆಯ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಶಾಲೆಯ ಬದಲಾವಣೆ ಗಮನಿಸಿದ ಗ್ರಾಮದ ಹಳೆ ವಿದ್ಯಾರ್ಥಿಗಳು ಅವರೊಂದಿಗೆ ಸಾಥ್ ನೀಡುತ್ತಿದ್ದಾರೆ.



ಉದಯವಾಹಿನಿ ಚಿತ್ರ

ಎಸ್‌ಡಿಎಂಸಿ ಮತ್ತು ಅತಿಥಿ ಶಿಕ್ಷಕರ ಹೆಚ್ಚಿನ ಸಹಕಾರದಿಂದ ಶಾಲೆ ಅಭಿವೃದ್ಧಿ ಕಾಣುವಂತಾಗಿದೆ. ಕನ್ನಡ ಶಾಲೆಗಳು ಆಕರ್ಷಣೆಯಾಗಬೇಕು. ಶಾಲೆಯ ಮಕ್ಕಳನ್ನು ಮನೆಯ ಮಕ್ಕಳಂತೆ ಪ್ರೀತಿಸಬೇಕು. ನಮ್ಮ ಶಾಲೆ, ಯಾವ ಖಾಸಗಿ ಶಾಲೆಗೂ ಕಡಿಮೆಯಿಲ್ಲ ಎನ್ನುವ ಭಾವನೆ ಮಕ್ಕಳಲ್ಲಿ ಮೂಡಿದಾಗ ಶಿಕ್ಷಕರ ಶ್ರಮ ಸಾರ್ಥಕವಾಗುತ್ತದೆ ಎಂದು ಶಿಕ್ಷಕ ಮಂಜುನಾಥ ಅಭಿಪ್ರಾಯಪಟ್ಟರು. ಗಣಿತ ಕಲಿಕಾ ಆಂದೋಲನದಲ್ಲಿ ಜಿಲ್ಲೆಗೆ ಪ್ರಥಮ ಸ್ಥಾನಗಳಿಸುತ್ತಾ ಬಂದ ಈ ಶಾಲೆ ಹಲವು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉತ್ತೇಜನ ನೀಡುತ್ತಿದೆ. ಐದು ಮಕ್ಕಳಿಗೆ ಹೆಚ್ಚು ನವೋದಯ ಹಾಗೂ ವಸತಿ ಶಾಲೆಗಳಿಗೆ ಆಯ್ಕೆಯಾಗಿರುವುದು ಹೆಮ್ಮೆ ವಿಷಯವಾಗಿದೆ. ಯರ‍್ರನಾಗೇನಹಳ್ಳಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ 2 ಕೊಠಡಿಯನ್ನು ಹೊಂದಿದ್ದು, ಶಾಲೆಯಲ್ಲಿ ಒಟ್ಟು 30ಮಕ್ಕಳು ಓದುತ್ತಿದ್ದಾರೆ. 1ರಿಂದ 5ನೇ ತರಗತಿವರೆಗಿನ ಈ ಶಾಲೆಯ ಆವರಣದಲ್ಲಿ ಚಿಕ್ಕು, ಬಾಳೆ, ಪಪ್ಪಾಯಿ, ತೆಂಗು, ನುಗ್ಗೆ, ಕರಿಬೇವು ಸೇರಿದಂತೆ ವಿವಿಧ ಜಾತಿಯ ಗಿಡಗಳು ಮತ್ತು ಹೂದೋಟ ಹಸಿರಿನ ಅಂದ ಕಟ್ಟುವ ಮೂಲಕ ಮನಸ್ಸಿಗೆ ಮುದ ನೀಡುತ್ತದೆ.

**ಯರ‍್ರನಾಗೇನಹಳ್ಳಿ ಸರ್ಕಾರಿ ಶಾಲೆ ಶೈಕ್ಷಣಿಕ ಕ್ಷೇತ್ರದಲ್ಲಿ ಅಭಿವೃದ್ಧಿ ಕಾಣುತ್ತಿದೆ. ಎಸ್.ದೇವಗಾನಹಳ್ಳಿ ಗ್ರಾಮ ಪಂಚಾಯಿತಿಯಿಂದ ನರೇಗಾ ಯೋಜನೆಯಲ್ಲಿ ಮತ್ತನ್ನು ಕಾಮಗಾರಿ ನಡೆಸಿ ಶಾಲೆಯನ್ನು ಅಭಿವೃದ್ಧಿಪಡಿಸುತ್ತೇನೆ**
**-ಗಂಗಾಧರಪ್ಪ, ಗ್ರಾ.ಪಂ. ಸದಸ್ಯ**

---

## ಮಹಿಳೆಯರು ಸಮಾಜದ ಮುಖ್ಯವಾಹಿನಿಯಲ್ಲಿರಬೇಕು

• ಉದಯವಾಹಿನಿ ಚಾಮರಾಜನಗರ

ಮಹಿಳೆಯರು ಎಲ್ಲಾ ರಂಗದಲ್ಲಿಯೂ ಮುನ್ನುಗ್ಗಬೇಕು. ಅವಕಾಶಗಳನ್ನು ಸದ್ಬಳಕೆ ಮಾಡಿಕೊಂಡು ಸಮಾಜದ ಮುಖ್ಯವಾಹಿನಿ ಬರಲು ಶ್ರಮ ವಹಿಸಬೇಕು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಕವಿತಾ ತಿಳಿಸಿದರು.ನಗರದ ಜೆ.ಎಚ್. ಪಟೇಲ್ ಸಭಾಂಗಣದಲ್ಲಿ ಶ್ರೀ ಕ್ಷೇತ್ರದ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ವತಿಯಿಂದ ನಡೆದ ತಾಲೂಕು ಮಟ್ಟದ ಮಹಿಳಾ ವಿಚಾರಗೋಷ್ಠಿ ಹಾಗೂ ಮಹಿಳಾ ಸಬಲೀಕರಣ ಕಾರ್ಯಕ್ರಮದಡಿಯಲ್ಲಿ ದ್ವಿಚಕ್ರ ವಾಹನ ವಿತರಣಾ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಹಿಳೆ ಎಂಬ ಹಿಂಜರಿಕೆ, ಕೀಳುರಿಮೆಯನ್ನು ಬಿಟ್ಟು ಬಂದ ಅವಕಾಶಗಳನ್ನು ಉಪಯೋಗಿಸಿಕೊಳ್ಳಿ. ಮಹಿಳೆಯರು ಸಮಾಜದಲ್ಲಿ ಎಲ್ಲಾ ಕ್ಷೇತ್ರಗಳಲ್ಲೂ ಮುಂದೆ ಇದ್ದಾರೆ. ಅನೇಕ ಸಂದರ್ಭದಲ್ಲಿ ಇದನ್ನು ತೋರ್ಪಡಿಸಿದ್ದಾರೆ. ಯಾವುದೇ ಸಮಸ್ಯೆಗಳನ್ನು ಬಂದರೂ ಅದನ್ನು ಧೈರ್ಯವಾಗಿ ಎದುರಿಸಿ ಅತ್ಮಸ್ಥೈರ್ಯವನ್ನು ಬೆಳೆಸಿಕೊಳ್ಳಬೇಕು ಎಂದರು.

ಮೈಸೂರು ಪ್ರಾದೇಶಿಕ ವಿಭಾಗದ ಪ್ರಾದೇಶಿಕ ನಿರ್ದೇಶಕ ಜಯರಾಮ ನೆಲ್ಲಿತಾಯ ಮಹಿಳಾ ವಿಚಾರಗೋಷ್ಠಿ ಕಾರ್ಯಕ್ರಮದಲ್ಲಿ ಮಾತನಾಡಿ, ಮಹಿಳೆಯರು ಜ್ಞಾನ ವಿಕಾಸ ಕಾರ್ಯಕ್ರಮದ ಅನುಕೂಲಗಳನ್ನು ಪಡೆದುಕೊಳ್ಳಬೇಕು. ಜ್ಞಾನ ವಿಕಾಸ ಮಾತೃಶ್ರೀ ಹೇಮಾವತಿ ಅಮ್ಮನವರ ಅಚ್ಚುಮೆಚ್ಚಿನ ಕಾರ್ಯಕ್ರಮವಾಗಿದ್ದು ಮಹಿಳೆಯರು ಆರೋಗ್ಯದ ಬಗ್ಗೆ ಹೆಚ್ಚಿನ ಗಮನಹರಿಸಬೇಕು.

ಪೌಷ್ಟಿಕ ಆಹಾರಗಳನ್ನು ಸೇವಿಸಿ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ತಿಳಿಸಿದರು. ಜಿ.ಪಂ. ಉಪ ಕಾರ್ಯದರ್ಶಿ ಲಕ್ಷ್ಮಿ, ಮಾತನಾಡಿ, ಜಿಲ್ಲಾ ಪಂಚಾಯತಿಯಿಂದ ಮಹಿಳೆಯರ ಸಬಲೀಕರಕ್ಕಾಗಿ ಅನೇಕ ಯೋಜನೆಗಳನ್ನು ರೂಪಿಸಿದ್ದು, ಮಹಿಳೆಯರು ಸರ್ಕಾರದಿಂದ ಸಿಗುವ ಸೌಲಭ್ಯಗಳನ್ನು ಒಳ್ಳೆಯ ರೀತಿಯಲ್ಲಿ ಬಳಸಿಕೊಳ್ಳಬೇಕು ಎಂದು ತಿಳಿಸಿದರು.

---

## ಅಮಿತ್ ಶಾ ಹೇಳಿಕೆಗೆ ಖಂಡನೆ: ಬಂದ್‌ಗೆ ನಿರ್ಧಾರ

• ಉದಯವಾಹಿನಿ ಚಾಮರಾಜನಗರ

ಸಂಸತ್ತಿನಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ವಿರುದ್ಧ ಕೇಂದ್ರ ಗೃಹ ಸಚಿವ ಅಮಿತ್ ಶಾ ನೀಡಿರುವ ಅವಹೇಳನಕಾರಿ ಹೇಳಿಕೆ ಖಂಡಿಸಿ ಚಾಮರಾಜನಗರ ಬಂದ್ ಮಾಡಲು ದಲಿತ, ಕನ್ನಡ ಮತ್ತು ಪ್ರಗತಿಪರ ಸಂಘಟನೆಗಳ ಮುಖಂಡರು ನಿರ್ಧರಿಸಿದ್ದಾರೆ. ನಗರದ ಪ್ರವಾಸಿಮಂದಿರದಲ್ಲಿ ದಲಿತ ಮುಖಂಡ ವೆಂಕಟರಮಣಸ್ವಾಮಿ ನೇತೃತ್ವದಲ್ಲಿ ದಲಿತ, ಕನ್ನಡ ಹಾಗೂ ಪ್ರಗತಿಪರ ಸಂಘಟನೆಗಳ ಮುಖಂಡರ ಸಭೆಯಲ್ಲಿ ತೀರ್ಮಾನಿಸಲಾಯಿತು.


ಉದಯವಾಹಿನಿ ಚಿತ್ರ

**ಪ್ರಗತಿಪರ ಸಂಘಟನೆಗಳ ಮುಖಂಡರ ಸಭೆ**

ಜಿಲ್ಲೆಯ ದಲಿತಪರ ಸಂಘಟನೆಗಳು, ವರ್ತಕರ ಸಂಘ, ಬಸ್ ಮಾಲೀಕರ ಸಂಘ, ಹೋಟೆಲ್ ಮಾಲೀಕರ ಸಂಘ, ಆಟೋ ಮಾಲೀಕರ ಸಂಘ, ತಮಿಳು ಸಂಘ ರೈತಪರ ಸಂಘಟನೆಗಳು, ವಕೀಲರ ಸಂಘ, ಕನ್ನಡಪರ ಸಂಘಟನೆಗಳು, ಮುಸ್ಲಿಂ ಸಂಘಟನೆಗಳು, ಸೇರಿದಂತೆ ಎಲ್ಲಾ ಸಂಘಟನೆಗಳ ಬೆಂಬಲ ಪಡೆದು ಬಂದ್ ಆಚರಿಸಲು ಸಭೆಯಲ್ಲಿ ಚರ್ಚಿಸಲಾಯಿತು.

ಈ ಸಂಬಂಧ ಡಿ.27ರಂದು ಮಧ್ಯಾಹ್ನ 2 ಗಂಟೆಗೆ ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಸಭೆ ನಡೆಸಿ ಬಂದ್ ದಿನ ನಿಗದಿಪಡಿಸಿ ಅಂದು ಹೋರಾಟ ರೂಪುರೇಷೆಗಳ ಕುರಿತು ಚರ್ಚಿಸಲು ತೀರ್ಮಾನಿಸಲಾಯಿತು. ಸಭೆಯಲ್ಲಿ ಮಾತನಾಡಿದ ವೆಂಕಟರಮಣಸ್ವಾಮಿ 'ಡಾ.ಬಿ.ಆರ್. ಅಂಬೇಡ್ಕರ್ ದೇಶದ ಆಸ್ತಿಯಾಗಿದ್ದು, ವಿಶ್ವವೇ ಮೆಚ್ಚುವಂತಹ ಸಂವಿಧಾನ ನೀಡಿರುವ ಮಹಾನ್ ಜ್ಞಾನಿ. ಇಂಥ ಮಹಾನ್ ಪುರುಷರ ಹೆಸರು ಹೇಳುವ ಯೋಗ್ಯತೆ ಅಮಿತ್ ಶಾಗೆ ಇಲ್ಲ. ಅಂಬೇಡ್ಕರ್ ವಿರುದ್ಧದ ಹೇಳಿಕೆ ದಲಿತ ಸಮುದಾಯಕ್ಕೆ ಮಾತ್ರವಲ್ಲ ಸರ್ವ ಜನಾಂಗಕ್ಕೂ ಅಪಮಾನವಾಗಿದೆ. ಕೂಡಲೇ ಅಮಿತ್ ಶಾ ದೇಶದ ಜನರ ಕ್ಷಮೆ ಕೋರಬೇಕು. ಸಂಪುಟದಿಂದ ಅವರನ್ನು ವಜಾಗೊಳಿಸಬೇಕು. ಹೇಳಿಕೆ ವಿರುದ್ಧ ಜಿಲ್ಲೆಯಲ್ಲಿ ಬಂದ್ ನಡೆಸಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಎಚ್ಚರಿಕೆ ನೀಡಲಾಗುವುದು ಎಂದರು.

---

## 31ರಿಂದ ಸಾರಿಗೆ ಮುಷ್ಕರ: ಬೆಂಬಲಕ್ಕೆ ಮನವಿ

• ಉದಯವಾಹಿನಿ ಕೋಲಾರ

ಶಕ್ತಿ ಯೋಜನೆಯ ಬಾಕಿ ಹಣ ಬಿಡುಗಡೆ ಸೇರಿದಂತೆ ವಿವಿಧ ಬೇಡಿಕೆಗಳಿಗೆ ಆಗ್ರಹಿಸಿ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕರು ಡಿ.31 ರಿಂದ ಮುಷ್ಕರಕ್ಕೆ ಕರೆ ನೀಡಿದ್ದು ಬೆಂಬಲ ನೀಡುವಂತೆ ಬುಧವಾರ ಮನವಿ ಮಾಡಿದರು.

ನಗರದ ಕೆಎಸ್‌ಆರ್‌ಟಿಸಿ ಕೋಲಾರ ವಿಭಾಗದ ಡಿಪೋ ಬಳಿ ಸಾರಿಗೆ ಸಂಘಟನೆಗಳ ಮುಖಂಡರು ಚಾಲಕರು, ನಿರ್ವಾಹಕರು, ನೌಕರರು ಹಾಗೂ ಪ್ರಯಾಣಿಕರಿಗೆ ಕರಪತ್ರ ವಿತರಿಸಿದರು ಜಿಲ್ಲೆಯ ವಿವಿಧ ಪ್ರಗತಿಪರ ಸಂಘಟನೆಗಳ ಮುಖಂಡರು ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿಗೆ ಬೆಂಬಲ ಸೂಚಿಸಿ ಮುಷ್ಕರಕ್ಕೆ ಸಾರಿಗೆ ನೌಕರರು ಒಗ್ಗಟ್ಟಾಗಬೇಕೆಂದು ಕೋರಿದರು.

ಸಾರಿಗೆ ನಿಗಮ ಕೋಲಾರ ವಿಭಾಗ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿಯ ಪದಾಧಿಕಾರಿ ಬಾಲಕೃಷ್ಣ, ಸಾರಿಗೆ ನಿಗಮಗಳ ನೌಕರರ ವೇತನ ಪರಿಷ್ಕರಣೆ, ನಿಗಮಗಳಿಗೆ ಬಾಕಿ ಹಣ ಬಿಡುಗಡೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಸರ್ಕಾರ ಸ್ಪಂದಿಸದಿದ್ದರೆ ಸಾರಿಗೆ ನೌಕರರ ಅನಿರ್ದಿಷ್ಟಾವಧಿ ಮುಷ್ಕರ ಅನಿವಾರ್ಯವಾಗಲಿದೆ' ಎಂದು ಎಚ್ಚರಿಕೆ ನೀಡಿದರು.ಸಾರಿಗೆ ನಿಗಮಗಳಿಗೆ ಅಂದಾಜು 4,927 ಕೋಟಿ ಬಾಕಿ ಬರಬೇಕಾಗಿದೆ.


ಉದಯವಾಹಿನಿ ಚಿತ್ರ

ಶಕ್ತಿ ಯೋಜನೆಯಡಿ 1,500 ಕೋಟಿ ಹಾಗೂ ಇಂಧನ ಬಾಕಿಯನ್ನು ಬಿಡುಗಡೆ ಮಾಡಬೇಕು. ಸರ್ಕಾರ ಸ್ಪಂದಿಸದಿದ್ದರೆ ಬಸ್‌ಗಳ ಸಂಚಾರ ಸ್ಥಗಿತಗೊಳಿಸಿ ಮುಷ್ಕರಕ್ಕಿಳಿಯುತ್ತೇವೆ' ಎಂದು ಹೇಳಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಸಾಮಾಜಿಕ ನ್ಯಾಯದ ಬಗ್ಗೆ ಮಾತನಾಡುತ್ತಲೇ ಸಾರಿಗೆ ನೌಕರರನ್ನು ಸಂಪೂರ್ಣವಾಗಿ ಕಡೆಗಣಿಸಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಿಪಿಎಂ ಮುಖಂಡ ಗಾಂಧಿನಗರ ನಾರಾಯಣಸ್ವಾಮಿ ಮಾತನಾಡಿ, 'ಮುಷ್ಕರ ನಡೆಸುವ ಬಗ್ಗೆ ಸಾರಿಗೆ ನೌಕರರ ಜಂಟಿ ಕ್ರಿಯಾ ಸಮಿತಿ ಡಿ.9 ರಂದು ಬೆಳಗಾವಿ ಅಧಿವೇಶನದಲ್ಲಿ ಸರ್ಕಾರದ ಗಮನಕ್ಕೆ ತಂದಿದೆ. ಕಾರ್ಮಿಕ ಇಲಾಖೆಯ ನಿಯಮಗಳ ಪ್ರಕಾರ, ಮುಷ್ಕರ ಮಾಡುವ ಮನ್ನ 21 ದಿನ ಮುಂಚಿತವಾಗಿ ನೋಟಿಸ್ ನೀಡಬೇಕು. ನೋಟಿಸ್ ನೀಡಿ ಗಮನಕ್ಕೆ ತಂದರೂ ಸರ್ಕಾರ ತಲೆಕೆಡಿಸಿಕೊಳ್ಳುತ್ತಿಲ್ಲ' ಎಂದು ಆಕ್ಷೇಪಿಸಿದರು.

### ಬೇಡಿಕೆ ಇತ್ಯರ್ಥಪಡಿಸಬೇಕು

**ಸಾರಿಗೆ ನಿಗಮ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿಯ ಪದಾಧಿಕಾರಿ ನಾ.ನಾರಾಯಣಸ್ವಾಮಿ ಮಾತನಾಡಿ, 2020 ರ ಜ. 1 ರಿಂದ 38 ತಿಂಗಳ ವೇತನ ಹಿಂಬಾಕಿ ಪಾವತಿಸಬೇಕು. ಜ.2024 ರಿಂದ ಹೊಸ ವೇತನ ಪರಿಷ್ಕರಣೆ ಹಾಗೂ ಇತರ ಬೇಡಿಕೆ ಇತ್ಯರ್ಥಪಡಿಸಬೇಕು. ನಿವೃತ್ತರಾದ ನೌಕರರಿಗೆ 2024ರ ಜೂನ್ 27ರ ಸುತ್ತೋಲೆ ಹಣವನ್ನು ಕೂಡಲೇ ಬಿಡುಗಡೆ ಮಾಡಬೇಕು' ಎಂದು ಒತ್ತಾಯಿಸಿದರು.**

---

## ಚಾ.ನಗರದಲ್ಲಿ ಮುಂದಿನ ಸಚಿವ ಸಂಪುಟ ಸಭೆಗೆ ಸರ್ಕಾರ ನಿರ್ಧಾರ

• ಉದಯವಾಹಿನಿ ಮೈಸೂರು

ಜನವರಿ ಎರಡನೇ ವಾರದಲ್ಲಿ ಚಾಮರಾಜನಗರದ ಮಲೆ ಮಹದೇಶ್ವರ ಬೆಟ್ಟದಲ್ಲಿ ಮುಂದಿನ ಸಂಪುಟ ಸಭೆ ನಡೆಸಲು ರಾಜ್ಯ ಸರ್ಕಾರ ನಿರ್ಧರಿಸಿದ ಎಂದು ತಿಳಿದುಬಂದಿದೆ.

ಈ ಸಂಬಂಧ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು, ಚಾಮರಾಜನಗರ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರೊಂದಿಗೆ ಮಾತುಕತೆ ನಡೆಸಿದ್ದಾರೆಂದು ವರದಿಗಳು ತಿಳಿಸಿವೆ. ಚಾಮರಾಜನಗರ ಜಿಲ್ಲೆಯ ಆದಿವಾಸಿಗಳು ಸೇರಿದಂತೆ ಪ್ರಮುಖ ಸಮಸ್ಯೆಗಳನ್ನು ಪರಿಹರಿಸಲು 2002 ರಲ್ಲಿ ಬಿಳಿಗಿರಿರಂಗ ಬೆಟ್ಟದಲ್ಲಿ ಅಂದಿನ ಮುಖ್ಯಮಂತ್ರಿ ಎಸ್ ಎಂ ಕೃಷ್ಣ ಅವರು, ಸಂಪುಟ ಸಭೆ ನಡೆಸಿದ್ದರು.

ಸರ್ಕಾರದ ನಿರ್ಧಾರ ಹಿನ್ನೆಲೆಯಲ್ಲಿ ಶಿಲ್ಪಾ ನಾಗ್ ಅವರು ಹನೂರಿನಲ್ಲಿ ಸಭೆ ನಡೆಸಿ, ಸ್ಥಳೀಯ ಅಧಿಕಾರಿಗಳ ಪ್ರತಿಕ್ರಿಯೆ ಪ್ರದೇಶದ ಸಮಸ್ಯೆಗಳನ್ನು ಪಟ್ಟಿ ಮಾಡಲಿದ್ದಾರೆಂದು ತಿಳಿದು ಬಂದಿದೆ. 50 ರಷ್ಟು ಅರಣ್ಯ ಹೊಂದಿರುವ ಜಿಲ್ಲೆಯಲ್ಲಿರುವ ಜನರು ಮಾನವ-ಪ್ರಾಣಿ ಸಂಘರ್ಷದಿಂದ ತತ್ತರಿಸಿದ್ದು. ಅರಣ್ಯಕ್ಕೆ ಬೇಲಿ ಹಾಕುವ ಅಗತ್ಯವಿದೆ. ಜಿಲ್ಲೆಯು ಕನಿಷ್ಠ ನೀರಾವರಿಯನ್ನು ಹೊಂದಿರುವುದರಿಂದ ಮತ್ತು ಒಣ ಭೂಮಿಯಿಂದ ಆವೃತವಾಗಿರುವುದರಿಂದ ಏತ ನೀರಾವರಿ ಯೋಜನೆಗಳಿಗೆ ಒತ್ತು ನೀಡುವ ಅವಶ್ಯಕತೆಯಿದೆ.


ಉದಯವಾಹಿನಿ ಚಿತ್ರ

**ಏತ ನೀರಾವರಿ ಯೋಜನೆಗಳಿಗೆ ಒತ್ತು**

ಜಿಲ್ಲೆಯ ಪ್ರಮುಖ ಪ್ರವಾಸಿ ಆಕರ್ಷಣೆಯಾಗಿರುವ ಗಗನಚುಕ್ಕಿ ಮತ್ತು ಭರಚುಕ್ಕಿ ಜಲಪಾತಗಳನ್ನು ಅಭಿವೃದ್ಧಿಪಡಿಸುವುದರ ಜೊತೆಗೆ ಎಸ್‌ಸಿ ಮತ್ತು ಎಸ್‌ಟಿಗಳಿಗೆ ಆರೋಗ್ಯ ಸೇವೆಯನ್ನು ಒದಗಿಸಲು ಜಿಲ್ಲಾಡಳಿತ ಒತ್ತಾಯಿಸುವ ಸಾಧ್ಯತೆಗಳಿವೆ. ಜಿಲ್ಲಾಧಿಕಾರಿ ಸಭೆ ನಡೆಸಿದ ಬಳಿಕ ಸಂಪುಟ ಸಭೆಯ ಸಿದ್ಧತೆಗಳು ಆರಂಭವಾಗಲಿವೆ.

ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಮುಖ್ಯ ಕಾರ್ಯದರ್ಶಿ ಹಾಗೂ ಇತರೆ ಅಧಿಕಾರಿಗಳಿಗೆ ಕಚೇರಿಗಳ ಸ್ಥಾಪಿಸವ ಕಾರ್ಯಗಳು ಆರಂಭವಾಗಲಿದೆ ಎನ್ನಲಾಗಿದೆ.

### ಸ್ಥಳೀಯ ಆರ್ಥಿಕತೆಗೆ ಒತ್ತಾಯ

**ಸ್ಥಳೀಯ ಆರ್ಥಿಕತೆಗೆ ಕೊಡುಗೆ ನೀಡುವ ಮತ್ತು ಉದ್ಯೋಗವನ್ನು ಸೃಷ್ಟಿಸುವ ಪ್ರವಾಸೋದ್ಯಮವನ್ನು ಉತ್ತೇಜಿಸಲು ಜಿಲ್ಲಾಡಳಿತ ಮಂಡಳಿಯರು ಸರ್ಕಾರವನ್ನು ಒತ್ತಾಯಿಸುವ ಸಾಧ್ಯತೆಗಳಿವೆ ಜಿಲ್ಲೆಯು ಮಲೆ ಮಹದೇಶ್ವರ ಬೆಟ್ಟ, ಬಿಳಿಗಿರಿ ರಂಗನಸ್ವಾಮಿ ದೇವಸ್ಥಾನ ಮತ್ತು ಗೋಪಾಲಸ್ವಾಮಿ ದೇವಸ್ಥಾನಗಳಂತಹ ಪ್ರಮುಖ ದೇವಾಲಯಗಳನ್ನು ಹೊಂದಿದ್ದು ಈ ಮೂರೂ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಬರುವುದರಿಂದ, ಪ್ರವಾಸಿಗರ ಸೆಳೆಯುತ್ತಿದೆ.**

---

# ಪಿಎಲ್‌ಡಿ ಬ್ಯಾಂಕ್ ಚುಕ್ಕಾಣಿಗೆ ಹಣಾಹಣಿ: ಜ. 5ರಂದು ಚುನಾವಣೆ

• ಬ್ಯಾಂಕ್ ಆಡಳಿತ ಮಂಡಳಿಯನ್ನು ಪುನಃ ವಶಕ್ಕೆ ಪಡೆಯಲು ಕಾಂಗ್ರೆಸ್ ಪಕ್ಷದಲ್ಲಿ ರಾಜಕೀಯ ಚಟುವಟಿಕೆಗಳು ಗರಿಗೆದರಿವೆ

• ಉದಯವಾಹಿನಿ ಬಂಗಾರಪೇಟೆ

ತಾಲ್ಲೂಕು ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಆಡಳಿತ ಮಂಡಳಿಗೆ ಜನವರಿ 5ರಂದು ಚುನಾವಣೆ ನಿಗದಿಯಾಗಿದೆ. ಬ್ಯಾಂಕ್ ಆಡಳಿತ ಮಂಡಳಿಯನ್ನು ಪುನಃ ವಶಕ್ಕೆ ಪಡೆಯಲು ಕಾಂಗ್ರೆಸ್ ಪಕ್ಷದಲ್ಲಿ ರಾಜಕೀಯ ಚಟುವಟಿಕೆಗಳು ಗರಿಗೆದರಿವೆ.

ಮತ್ತೊಂದೆಡೆ ಏನಾದರೂ ಸರಿಯೇ ಈ ಬಾರಿಯ ಬ್ಯಾಂಕ್ ಆಡಳಿತ ಮಂಡಳಿಯ ಚುಕ್ಕಾಣಿಯನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳಲು ಬಿಜೆಪಿ- ಜೆಡಿಎಸ್ ಮೈತ್ರಿ ಪಕ್ಷಗಳು ತೀವ್ರ ಹಣಾಹಣಿ ನಡೆಸುತ್ತಿವೆ.

ಕಳೆದ ಎರಡು ದಶಕಗಳಿಂದಲೂ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಆಡಳಿತ ಮಂಡಳಿಯಲ್ಲಿ ಕಾಂಗ್ರೆಸ್ ಪಾರಮ್ಯ ಸಾಧಿಸಿಕೊಂಡು ಬಂದಿದೆ.

ಈ ಹಿಂದಿನ ಚುನಾವಣೆಗಳಲ್ಲಿ ರೈತರ ಬ್ಯಾಂಕ್ ಅಧಿಕಾರದ ಗದ್ದುಗೆಗೇರಲು ಕಾಂಗ್ರೆಸ್, ಜೆಡಿಎಸ್ ಮತ್ತು ಬಿಜೆಪಿ ಮಧ್ಯೆ ತೀವ್ರ ಜಿದ್ದಾಜಿದ್ದಿನ ಪೈಪೋಟಿ ನಡೆಯುತ್ತಿತ್ತು. ಆದರೆ, ಈ ಬಾರಿಯ ಪಿಎಲ್‌ಡಿ ಚುನಾವಣೆಯಲ್ಲಿ ರಾಜ್ಯದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ಅನ್ನು ಎದುರಿಸಲು ಜೆಡಿಎಸ್ ಮತ್ತು ಬಿಜೆಪಿ ಮೈತ್ರಿಗೆ ಮುಂದಾಗಿವೆ. ಮತ್ತೊಂದೆಡೆ ಈ ಮೈತ್ರಿಕೂಟವನ್ನು ಸೋಲಿಸಲು ಕಾಂಗ್ರೆಸ್ ತನ್ನದೇ ಆದ ಕಾರ್ಯತಂತ್ರದ ಮೊರೆ ಹೋಗಿದ್ದರೆ, ಕಾಂಗ್ರೆಸ್ ಅನ್ನು ಮಣಿಸಲು ಜೆಡಿಎಸ್-ಬಿಜೆಪಿಯು ಪ್ರತಿತಂತ್ರ ರೂಪಿಸುತ್ತಿವೆ. ಈ ಮೂಲಕ ಪಿಎಲ್‌ಡಿ ಚುನಾವಣೆಯನ್ನು ತಮ್ಮ ಶಕ್ತಿ ಪ್ರದರ್ಶದ ವೇದಿಕೆಯನ್ನಾಗಿ ಮಾಡಿಕೊಂಡಿದ್ದಾರೆ ಎನ್ನಲಾಗಿದೆ. ತಮ್ಮ ಪಕ್ಷದ ಶಾಸಕ ಕ್ಷೇತ್ರದಲ್ಲಿ ಮಾಡಿರುವ ಅಭಿವೃದ್ಧಿ ಕೆಲಸಗಳು, ಬ್ಯಾಂಕ್ ಮೂಲಕ ರೈತರಿಗೆ ನೀಡಲಾದ ಸಾಲ ಮತ್ತು ಅಭಿವೃದ್ಧಿ ಹೆಸರಿನಲ್ಲಿ ಗೆಲುವು ಸಾಧಿಸುತ್ತೇವೆ ಎಂಬ ನಿರೀಕ್ಷೆಯಲ್ಲಿದ್ದಾರೆ ಕಾಂಗ್ರೆಸ್ ನಾಯಕರು. ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಆಡಳಿತ ಮಂಡಳಿಯಲ್ಲಿ ಒಟ್ಟು 17 ಸ್ಥಾನಗಳಿದ್ದು, 16 ಸ್ಥಾನಗಳಿಗೆ ಚುನಾವಣೆ ನಡೆಯಲಿದೆ.



ಉದಯವಾಹಿನಿ ಚಿತ್ರ

ಕಮ್ಮಸಂದ್ರ, ಎಸ್ ಸಿ,ಕಾಮಸಮುದ್ರ, ಎಸ್‌ಟಿಗೆ ಮೀಸಲಾಗಿದ್ದರೆ, ಒಂದು ಸಾಲಗಾರರಲ್ಲದ ಕ್ಷೇತ್ರ ಸಾಮಾನ್ಯವಾಗಿದೆ. ಎಲ್ಲಾ 16 ಕ್ಷೇತ್ರಗಳಲ್ಲಿ ಒಟ್ಟು 1,281 ಮತದಾರರಿದ್ದು, ಸಾಲಗಾರರಲ್ಲದ ಕ್ಷೇತ್ರದಲ್ಲಿ ಹೆಚ್ಚಿನ 505 ಮತದಾರರಿದ್ದಾರೆ.

ಕೆಜಿಎಫ್ ಕ್ಷೇತ್ರದಲ್ಲಿ ಕೇವಲ 18 ಮತದಾರರಿದ್ದಾರೆ. ಸುಸ್ತಿದಾರರು 46 ಮಂದಿ, ಷೇರು ಸುಸ್ತಿದಾರರು 66 ಮಂದಿಯಿದ್ದು, 2,178 ಅನರ್ಹ ಮತದಾರರಿದ್ದಾರೆ. 59 ಮಂದಿ ಮತದಾರರು ಮರಣ ಹೊಂದಿದ್ದಾರೆ.

ಎಸ್. ಮುನಿಸ್ವಾಮಿ, ಮಾಜಿ ಸಂಸದ ಆಡಳಿತ ದುರುಪಯೋಗ ಮಾಡಿಕೊಂಡು ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳ ಷೇರುದಾರರನ್ನು ಮತದಾರರ ಪಟ್ಟಿಯಿಂದ ಉದ್ದೇಶ ಪೂರಕವಾಗಿ ಕೈ ಬಿಡಲಾಗಿದೆ.

**ತೀವ್ರ ಜಿದ್ದಾಜಿದ್ದಿನ ಪೈಪೋಟಿ**

ಎಚ್.ಕೆ. ನಾರಾಯಣಸ್ವಾಮಿ, ಹಂಗಾಮಿ ಅಧ್ಯಕ್ಷಸಹಕಾರ ಸಂಘಗಳ ಕಾಯ್ದೆ ಪ್ರಕಾರ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ನಲ್ಲಿ ಯಾವುದೇ ವ್ಯವಹಾರ ಮಾಡದ ಷೇರುದಾರರು ಮತದಾನಕ್ಕೆ ಅರ್ಹರಲ್ಲ ಪುರುಷೋತ್ತಮ ಜಿ, ವ್ಯವಸ್ಥಾಪಕ ಪಿಎಲ್‌ಡಿ ಬ್ಯಾಂಕ್ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ನಲ್ಲಿ ವ್ಯವಹಾರ ಮಾಡಿದ ಮತ್ತು ಎರಡು ಸಾಮಾನ್ಯ ಸಭೆಗೆ ಹಾಜರಾಗಿರುವ ಎಲ್ಲಾ ಷೇರುದಾರರಿಗೆ ಮತದಾರರ ಪಟ್ಟಿಯಲ್ಲಿ ಅವಕಾಶ ನೀಡಲಾಗಿದೆ.

### ಒಂದು ಸ್ಥಾನಕ್ಕೆ ಸರ್ಕಾರದಿಂದ ನಾಮನಿರ್ದೇಶನ

**ಒಂದು ಸ್ಥಾನಕ್ಕೆ ಸರ್ಕಾರದಿಂದ ನಾಮನಿರ್ದೇಶನಗೊಳ್ಳುತ್ತಾರೆ. ಬಂಗಾರಪೇಟೆ, ಚಿಕ್ಕಅಂಕಂಡಹಳ್ಳಿ, ಮಾಗೊಂದಿ, ತೊಪ್ಪನಹಳ್ಳಿ, ಸೂಲಿಕುಂಟೆ, ಸುಂದರಪಾಳ್ಯ ಕೆಜಿಎಫ್, ಕ್ಯಾಸಂಬಳ್ಳಿ, ಬೇತಮಂಗಲ ಕ್ಷೇತ್ರಗಳು ಸಾಮಾನ್ಯ ಸ್ಥಾನಗಳಾಗಿವೆ. ಹುಕ್ಕುಂದ ಹಿಂದುಳಿದ ವರ್ಗದ ಎ. ಹುಲಿಬೆಲೆ ಹಿಂದುಳಿದ ವರ್ಗ ಬಿ, ಬೂದಿಕೋಟೆ ಮತ್ತು ಎನ್.ಜಿ. ಹುಲ್ಕೂರು ಮಹಿಳಾ ಮೀಸಲು ಕ್ಷೇತ್ರಗಳಾಗಿವೆ.**

**ಕ್ಷೇತ್ರದಲ್ಲಿ ಬಿಜೆಪಿ ಮತ್ತು ಜೆಡಿಎಸ್ ಪ್ರಬಲವಾಗಿದ್ದು ಕೋಲಾರದ ಸಂಸದ ಜೆಡಿಎಸ್ ಪಕ್ಷದವರೇ ಆಗಿದ್ದಾರೆ. ಮೈತ್ರಿ ಅಭ್ಯರ್ಥಿಯನ್ನು ಕಣಕ್ಕಿಳಿಸಿ, ಕಾಂಗ್ರೆಸ್‌ಗೆ ಸೋಲಿನ ರುಚಿ ತೋರಿಸಲು ಮಾಜಿ ಸಂಸದ ಎಸ್. ಮುನಿಸ್ವಾಮಿ, ಸಂಸದ ಮಲ್ಲೇಶಬಾಬು ಮತ್ತು ಮಾಜಿ ಶಾಸಕ ಎಂ. ನಾರಾಯಣಸ್ವಾಮಿ ಹಾಗೂ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ವಿ. ಮಹೇಶ ಅವರು ಒಟ್ಟಾಗಿ ಕಾರ್ಯತಂತ್ರ ರೂಪಿಸಿದ್ದಾರೆ.**

---

## ಮಿನಿ ನ್ಯೂಸ್

### ವನ್ಯಜೀವಿ ದಾಳಿ: ವ್ಯಕ್ತಿಗೆ ಗಾಯ

• ಉದಯವಾಹಿನಿ ಗೋಣಿಕೊಪ್ಪಲು

ಬಾಳೆಲೆ ನಿಟ್ಟೂರು ಸಮೀಪದ ತಟ್ಟೆಕೆರೆಯ ರಾಜನ್ ಎಂಬುವವರ ಮೇಲೆ ವನ್ಯಜೀವಿಯೊಂದು ದಾಳಿ ನಡೆಸಿ ಗಾಯಗೊಳಿಸಿದೆ. ಇವರಿಗೆ ಕಿವಿ ಹಾಗೂ ಕಾಲಿನ ಭಾಗಕ್ಕೆ ಗಾಯವಾಗಿದ್ದು, ವಿರಾಜಪೇಟೆ ತಾಲ್ಲೂಕು ಆಸ್ಪತ್ರೆಗೆ ದಾಖಲಿಸಲಾಗಿದೆ. ತಮ್ಮ ಕಾಫಿ ತೋಟದಲ್ಲಿ ಗೋಣಿಕೊಪ್ಪಲಿನ ಕಾಲ್ಸ್ ಶಾಲೆ ಬಸ್ ಚಾಲಕರಾಗಿರುವ ರಾಜನ್ ಅವರು ಪತ್ನಿಯೊಂದಿಗೆ ಕಾಫಿ ಕೊಯ್ಯುವಾಗ ಮಧ್ಯಾಹ್ನ 2 ಗಂಟೆ ವೇಳೆಯಲ್ಲಿ ವನ್ಯಜೀವಿಯೊಂದು ದಿಢೀರ್ ದಾಳಿ ನಡೆಸಿದೆ. ಹತ್ತಿರದಲ್ಲೇ ಇದ್ದ ಪತ್ನಿ ಕೂಗಿಕೊಂಡಾಗ ಅದು ಕಾಫಿ ತೋಟದಲ್ಲಿ ಮರೆಯಾಗಿದೆ.

ಹುಲಿಯೇ ದಾಳಿ ನಡೆಸಿದೆ ಎಂಬ ಸುದ್ದಿ ವ್ಯಾಪಕವಾಗಿ ಹರಡಿ, ಸ್ಥಳೀಯರಲ್ಲಿ ಭೀತಿ ಸೃಷ್ಟಿಯಾಗಿತ್ತು. ಆದರೆ, ಅರಣ್ಯಾಧಿಕಾರಿಗಳು ಸ್ಥಳಕ್ಕೆ ಬಂದು ಪರಿಶೀಲನೆ ನಡೆಸಿದಾಗ ಕಾಡುಬೆಕ್ಕುಗಳು ಪತ್ತೆಯಾಗಿವೆ. ಬಹುಶಃ ಕಾಡುಬೆಕ್ಕಿನ ದಾಳಿಯಿಂದ ಗಾಯಗೊಂಡಿರಬಹುದು.

ಹುಲಿ ದಾಳಿಗೆ ನಿಖರ ಕುರುಹುಗಳು ಪತ್ತೆಯಾಗಿಲ್ಲ ಎಂದು ಮೂಲಗಳು ತಿಳಿಸಿವೆ. ಸ್ಥಳಕ್ಕೆ ರಾಜ್ಯ ವನ್ಯಜೀವಿ ಸಂರಕ್ಷಣಾ ಮಂಡಳಿ ಸದಸ್ಯ ಮೇರಿಯಂಡ ಸಂಕೇತ್ ಪೂವಯ್ಯ ಭೇಟಿ ನೀಡಿ ಗಾಯಾಳುವಿನ ಆರೋಗ್ಯ ವಿಚಾರಿಸಿದರು. ಗಾಯಾಳು ರಾಜು ಅವರನ್ನು ಆಸ್ಪತ್ರೆಗೆ ಕರೆತಂದ ನಿಟ್ಟೂರು ಗ್ರಾಮ ಪಂಚಾಯಿತಿ ಸದಸ್ಯೆ ಪಡಿಂರಂಡ ಕವಿತಾ ಪ್ರಭು ಹಾಗೂ ಬಾಳೆಲೆ ಗ್ರಾಮ ಪಂಚಾಯಿತಿ ಸದಸ್ಯ ಪೋಡಮಾಡ ಸುಕೇಶ್ ಭೀಮಯ್ಯ ಹುಲಿ ದಾಳಿಯಿಂದ ಕಾಫಿ ಕೆಲಸಕ್ಕೆ ಹಿನ್ನಡೆಯಾಗಿದೆ. ಗಾಯಾಳುವಿಗೆ ತುರ್ತು ಚಿಕಿತ್ಸೆ ನೀಡಲು ಬಾಳೆಲೆ ಆಸ್ಪತ್ರೆಯಲ್ಲಿ ಸೌಲಭ್ಯ ಇಲ್ಲದಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

### ಇಬ್ಬರು ಶ್ರೀಗಂಧಚೋರರ ಬಂಧನ

• ಉದಯವಾಹಿನಿ ಸೋಮವಾರಪೇಟೆ

ಶ್ರೀಗಂಧ ಮರಗಳನ್ನು ಕಳ್ಳತನ ಮಾಡುತ್ತಿದ್ದ ಆರೋಪದ ಮೇರೆಗೆ ಹಾಸನದ ಅರಕಲಗೂಡು ತಾಲ್ಲೂಕಿನ ಬೀರನಹಳ್ಳಿ ಕಾವಲು ಗ್ರಾಮದ ಚಂದ್ರು ಹಾಗೂ ಸುರೇಶ್ ಎಂಬುವವರನ್ನು ಅರಣ್ಯ ಇಲಾಖೆಯ ಅಧಿಕಾರಿಗಳು ಬಂಧಿಸಿದ್ದಾರೆ.

ಆರೋಪಿಗಳು ನಿತ್ಯ ಸಣ್ಣ ಗಾತ್ರದ ಮರಗಳನ್ನು ಕಡಿದು ಮೂಟೆಗಳಲ್ಲಿ ಸಾಗಿಸಿ, ಬೆಮ್ಮತ್ತಿಯ ವ್ಯಕ್ತಿಯೊಬ್ಬನಿಗೆ ಮಾರಾಟ ಮಾಡುತ್ತಿದ್ದರು ಎಂಬ ಮಾಹಿತಿ ಪಡೆದು ಆರೋಪಿಗಳ ಚಲನವಲನವನ್ನು ಹಿಂಬಾಲಿಸಿ ಬಂಧಿಸಲಾಯಿತು ಎಂದು ಅರಣ್ಯಾಧಿಕಾರಿಗಳು ತಿಳಿಸಿದ್ದಾರೆ. ಎಸಿಎಫ್ ಎ.ಎ.ಗೋಪಾಲ್ ಅವರ ಮಾರ್ಗದರ್ಶನದಲ್ಲಿ ಆರ್‌ಎಫ್‌ಒಗಳಾದ ಶೈಲೇಂದ್ರ ಕುಮಾರ್, ಪೂಜಶ್ರೀ, ಡಿಆರ್‌ಎಫ್‌ಗಳಾದ ಶ್ರವಣಕುಮಾರ್, ಸೂರ್ಯ, ಲೋಹಿತ್, ರೇಣುಕುಮಾರ್, ಸಿಬ್ಬಂದಿಗಳಾದ ಪ್ರವೀಣ್ ಕುಮಾರ್, ರಂಜಿತ್, ಸತೀಶ್, ದರ್ಶನ್, ರಾಕೇಶ್, ಪ್ರವೀಣ್, ಹರೀಶ್, ನಂದೀಶ್, ಸಂತೋಷ್ ಕಾರ್ಯಾಚರಣೆ ತಂಡದಲ್ಲಿದ್ದರು.

### ಜಮೀನಿಗೆ ರಸ್ತೆ ಬಿಡಿಸುವ ವಿಚಾರಕ್ಕೆ ಜಗಳ: ಮೂವರಿಗೆ ಚಾಕುವಿನಿಂದ ಇರಿತ

• ಉದಯವಾಹಿನಿ ಮೈಸೂರು

ಜಮೀನಿಗೆ ರಸ್ತೆ ಬಿಡಿಸುವ ವಿಚಾರಕ್ಕೆ ಜಗಳ, ಮೂವರಿಗೆ ಚಾಕುವಿನಿಂದ ಇರಿದು ರಾಡ್ ನಿಂದಲೂ ಭೀಕರ ಹಲ್ಲೆ ಮಾಡಿ ಪರಾರಿಯಾದ ಕಿಡಿಗೇಡಿಗಳು ಜಿಲ್ಲೆ ಹೆಚ್.ಡಿ.ಕೋಟೆ ತಾಲ್ಲೂಕಿನ ಕಟ್ಟೆಮನುಗನ ಹಳ್ಳಿಯಲ್ಲಿ ಘಟನೆ. ಜಮೀನು ಮಾಲೀಕ ಬಸವರಾಜು, ಪ್ರದೀಪ್‌ಗೆ ಗಂಭೀರ ಗಾಯ. ಕೋರ್ಟ್ ವ್ಯಾಜ್ಯವಿದ್ದರೂ ಜಮೀನಿಗೆ ನುಗ್ಗಿ ದಾಂಧಲೆ. ಸಣ್ಣಕುಮಾರ, ಬುದ್ದ, ಸೋಮೇಶ್, ಸಂಜು, ರವಿ,ಕುಮಾರ್, ಮುನಿಯಮ್ಮ, ದೊಡ್ಡಸಿದ್ದು, ರಾಜಶೇಖರ್, ಕವಿತಾ ವಿರುದ್ಧ ಪ್ರಕರಣ.

### ಬೈಕ್ ರಸ್ತೆ ಅತಿಕ್ರಮ: ಟ್ರಾಫಿಕ್ ಜಾಮ್

• ಉದಯವಾಹಿನಿ ಹನೂರು

ಪಟ್ಟಣದಲ್ಲಿನ ದಿ.ಹೆಚ್ ನಾಗಪ್ಪ ವೃತ್ತ ಮುಖ್ಯರಸ್ತೆಯಲ್ಲಿ ಕೆ- ಶಿಫ್ ರಸ್ತೆ ಅಭಿವೃದ್ಧಿ ಕಾಮಗಾರಿ ನಡೆಯುತ್ತಿದ್ದು ಎಲ್ಲಂದರಲ್ಲಿ ರಸ್ತೆಯಲ್ಲಿಯೇ ವ್ಯಾಪಾರ ಮಾಡುವ ಕೈ ಗಾಡಿಗಳು ಮತ್ತು ಬೈಕ್ ವಾಹನಗಳನ್ನು ರಸ್ತೆಯಲ್ಲಿ ನಿಲ್ಲಿಸುವುದರಿಂದ ವಾಹನ ಸಂಚಾರ ಸುರಕ್ಷತೆ ಇಲ್ಲದೆ ವಾಹನ ದಟ್ಟಣೆ ಹೆಚ್ಚಾಗಿ (ಟ್ರಾಫಿಕ್ ಜಾಮ್) ಇದರಿಂದ ಸಾರ್ವಜನಿಕರು ಪ್ರಯಾಣಕ್ಕೆ ತುಂಬಾ ತೊಂದರೆಯಾಗುತ್ತಿದೆ.

ಕೆ-ಶಿಫ್ ರಸ್ತೆ ಅಭಿವೃದ್ಧಿ ಕಾಮಗಾರಿ ನಡೆಯುತ್ತಿರುವುದರಿಂದ ವಾಹನ ಸಂಚಾರಕ್ಕೆ ಸಾರ್ವಜನಿಕರಿಗೆ ತೊಂದರೆಯಾಗದಂತೆ ಮುಂಜಾಗ್ರತೆ ಕ್ರಮ ಕೈಗೊಳ್ಳದೆ. ಒಂದು ಕಡೆ ರಸ್ತೆ ಕಾಮಗಾರಿ ಕೈಗೊಂಡಿರುವುದರಿಂದ ಕಾಮಗಾರಿಗೆ ಕೈಗೊಂಡಿರುವ ವಾಹನ ಯಂತ್ರಗಳು ರಸ್ತೆಯನ್ನೇ ಆವರಿಸಿಕೊಂಡಿರುತ್ತವೆ. ಇದರಿಂದ ಇತರ ವಾಹನಗಳ ಸಂಚಾರಕ್ಕೆ ತೊಂದರೆಯಾಗುತ್ತಿದೆ. ರಸ್ತೆ ಪಕ್ಕದಲ್ಲಿ ಇರುವಂತಹ ಅಂಗಡಿ ಮಳಿಗೆಗಳು ಬಹುತೇಕ ಫುಟ್ಪಾತ್ ರಸ್ತೆಯನ್ನೇ ಆಕ್ರಮಿಸಿ ಕೊಂಡಿರುತ್ತಾರೆ. ಇದೊಂದು ಕಡೆಯಾದರೆ ಕೆ- ಶಿಫ್ ರಸ್ತೆ ಕಾಮಗಾರಿ ನಡೆಯುತ್ತಿರುವ ರಸ್ತೆಯ ಬದಿಯಲ್ಲಿ ವ್ಯಾಪಾರದ ಕೈಗಾಡಿಗಳು ಮತ್ತು ಬೈಕ್ ವಾಹನಗಳು ರಸ್ತೆಯಲ್ಲಿಯೇ ನಿಲ್ಲಿಸಿರುವುದರಿಂದ ರಸ್ತೆಯಲ್ಲಿ ಸಂಚರಿಸುವ ವಾಹನಗಳ ದಟ್ಟಣೆಯಿಂದ (ಟ್ರಾಫಿಕ್ ಜಾಮ್) ಗಂಟೆಗಟ್ಟಲೆ ವಾಹನಗಳು ನಿಲ್ಲುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತಿದೆ.

### ಧ್ವನಿ ಮಾದರಿಯನ್ನು ರಾಜ್ಯ ವಿಧಿವಿಜ್ಞಾನ ಪ್ರಯೋಗಾಲಯದಲ್ಲಿ ಪರೀಕ್ಷಿಸಿ

• ಉದಯವಾಹಿನಿ ಚಿಕ್ಕಬಳ್ಳಾಪುರ

ಖಾಸಗಿ ಸಂಸ್ಥೆಗೆ ವಿಶ್ಲೇಷಣೆಗಾಗಿ ಕಳುಹಿಸುವ ಮೊದಲು ಅಧಿಕಾರಿಗಳು ಮೊದಲು ಧ್ವನಿ ಮಾದರಿಯನ್ನು ರಾಜ್ಯ ವಿಧಿವಿಜ್ಞಾನ ಪ್ರಯೋಗಾಲಯದಲ್ಲಿ ಪರೀಕ್ಷಿಸಬೇಕು ಎಂದು ಕರ್ನಾಟಕ ಹೈಕೋರ್ಟ್ ಭ್ರಷ್ಟಾಚಾರ ಪ್ರಕರಣದಲ್ಲಿ ಗಮನಿಸಿದೆ. ಸರ್ಕಾರಿ ಅಧಿಕಾರಿಯೊಬ್ಬರ ವಿರುದ್ಧದ ಭ್ರಷ್ಟಾಚಾರ ಆರೋಪದಿಂದ 2016ರಲ್ಲಿ ಲೋಕಾಯುಕ್ತ ಪೊಲೀಸರು ಸಲ್ಲಿಸಿದ್ದ ಆದೇಶವನ್ನು ಪ್ರಶ್ನಿಸಿ ಲೋಕಾಯುಕ್ತ ಪೊಲೀಸರು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಶ್ರೀಶಾನಂದ ಅವರಿದ್ದ ನ್ಯಾಯಪೀಠ ಡಿಸೆಂಬರ್ 6ರಂದು ವಜಾಗೊಳಿಸಿತ್ತು. ಈ ವಾರ ಆದೇಶ ಲಭ್ಯವಾಗಿದೆ.

2014ರ ಸಾರ್ವತ್ರಿಕ ಚುನಾವಣೆ ವೇಳೆ ಖಾಸಗಿ ವಾಹನ ಬಿಡುಗಡೆಗೆ ಆರೋಪಿ ಅಧಿಕಾರಿ ಲಂಚಕ್ಕೆ ಬೇಡಿಕೆ ಇಟ್ಟಿದ್ದರು ಎಂಬ ದೂರಿಗೆ ಸಂಬಂಧಿಸಿದ ಪ್ರಕರಣ ಇದಾಗಿದೆ. ನಂತರ ತನಿಖೆಯನ್ನು ಚಿಕ್ಕಬಳ್ಳಾಪುರದ ಲೋಕಾಯುಕ್ತ ಪೊಲೀಸರಿಗೆ ವರ್ಗಾಯಿಸಲಾಯಿತು. ಈ ಪ್ರಕರಣದಲ್ಲಿ ಲಂಚದ ಬಲೆ ವಿಫಲವಾದ ಕಾರಣ, ಪೊಲೀಸರು ಪ್ರತ್ಯಕ್ಷದರ್ಶಿಗಳ ಹೇಳಿಕೆಗಳ ಆಧಾರದ ಮೇಲೆ ಚಾರ್ಜಿಟ್ ಸಲ್ಲಿಸಿದರು. ಈ ಘಟನೆಯು ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ನಡೆದಿರುವುದರಿಂದ ಪ್ರಕರಣದಲ್ಲಿ ನ್ಯಾಯವ್ಯಾಪ್ತಿಯ ಸಮಸ್ಯೆಗಳಿವೆ ಎಂದು ಹೈಕೋರ್ಟ್ ಗಮನಿಸಿದೆ.

ಅಂತರಾಳದಿಂದ..
EDITORIAL

# ಶಿಕ್ಷಣ ವ್ಯವಸ್ಥೆಯ ವೈಫಲ್ಯಗಳಿಗೆ ವಿದ್ಯಾರ್ಥಿಗಳು ಹೊಣೆಗಾರರೆ?

ಇನ್ನು ಮುಂದೆ ವಾರ್ಷಿಕ ಪರೀಕ್ಷೆಯಲ್ಲಿ ನಿರ್ದಿಷ್ಟ ಅಂಕಗಳನ್ನು ಪಡೆಯದ 5 ಮತ್ತು ಎಂಟನೆಯ ತರಗತಿ ಮಕ್ಕಳನ್ನು ಸರಕಾರ ಅನುತ್ತೀರ್ಣಗೊಳಿಸಬಹುದಾಗಿದೆ. ಈ ಮೂಲಕ ಮತ್ತೆ ಪ್ರಾಥಮಿಕ ಮತ್ತು ಪ್ರೌಢ ಶಾಲೆಯ ವಿದ್ಯಾರ್ಥಿಗಳಿಗೆ ಪಾಸು-ಫೇಲು ಅಗ್ನಿ ಪರೀಕ್ಷೆಯನ್ನು ದಾಟಿ ಮುಂದೆ ಹೋಗಬೇಕಾದ ಸ್ಥಿತಿಯನ್ನು ನಿರ್ಮಾಣ ಮಾಡಿದೆ. ಶಿಕ್ಷಣದ ಹಕ್ಕಿನ ಮೂಲ ಕಾಯ್ದೆಯ ಪ್ರಕಾರ 8ನೇ ತರಗತಿಯನ್ನು ಪೂರ್ಣಗೊಳಿಸುವವರೆಗೆ ಯಾವುದೇ ಮಗುವನ್ನು ಶಾಲೆಯಿಂದ ಹೊರ ಹಾಕುವುದನ್ನು . ಅನುತ್ತೀರ್ಣಗೊಳಿಸುವುದನ್ನು ನಿಷೇಧಿಸಲಾಗಿತ್ತು ಇದಕ್ಕೆ ಹಲವು ಕಾರಣಗಳಿವೆ. ಪ್ರಾಥಮಿಕ ಕಲಿಕೆಯ ಅವಧಿಯಲ್ಲಿ ವಿದ್ಯಾರ್ಥಿಗಳ ಎಳೆ ಮನಸ್ಸು ಎನ್ನುವುದು ಈಗಷ್ಟೇ ಬೀಜವನ್ನು ತನ್ನೊಳಗೆ ತೆಗೆದುಕೊಳ್ಳುವ ಹಸಿ ಮಣ್ಣು ಅಲ್ಲಿ ಬೀಜ ಮೊಳಕೆ ಒಡೆಯುವ ಮೊದಲೇ, ಮಣ್ಣು ಮತ್ತು ಬೀಜದ ಗುಣಮಟ್ಟದ ಕುರಿತಂತೆ ನಿರ್ಧಾರಗಳನ್ನು ತಳೆಯುವ ಅಧಿಕಾರ ಯಾರಿಗೂ ಇಲ್ಲ. ಈ ಪ್ರಾಥಮಿಕ ಹಂತದಲ್ಲೇ ಮಕ್ಕಳನ್ನು ದಡ್ಡರು ಮತ್ತು ಬುದ್ಧಿವಂತರು ಎಂದು ವಿಭಜಿಸುವುದು ಎಳವೆಯಲ್ಲೇ ಮಕ್ಕಳೊಳಗೆ ಕೀಳರಿಮೆಯನ್ನು ಬಿತ್ತಿದಂತೆ. ಅವರ ವ್ಯಕ್ತಿತ್ವ ಇನ್ನೂ ಸ್ಪಷ್ಟ ರೂಪವನ್ನೇ ಪಡೆಯದ ಹೊತ್ತಿನಲ್ಲಿ ಅವರನ್ನು ಅನುತ್ತೀರ್ಣಗೊಳಿಸುವುದು ಅವರ ಒಳಗಿನ ಪ್ರತಿಭೆಯನ್ನು ಚಿವುಟಿದಂತೆ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸವನ್ನು ಬಿತ್ತಿ ಅವರೊಳಗೆ ಕಲಿಯುವ ಉತ್ಸಾಹವನ್ನು ತುಂಬುವ ಬದಲು, ಅವರನ್ನು ಶಿಕ್ಷಣವೇ ನಿರಾತೆಗೆ ತಳ್ಳಿದಂತಾಗುತ್ತದೆ.

> **ಕಟುಕನ ಕೈಗೆ ಕತ್ತರಿ ಕೊಟ್ಟು ಅಪರೇಷನ್ ಥಿಯೇಟರ್ ಒಳಗೆ ಬಿಟ್ಟುಕೊಟ್ಟಂತಾಗಿದೆ. ಶಿಕ್ಷಣ ಕ್ಷೇತ್ರದಲ್ಲಿ ಸರಕಾರ ಇತ್ತೀಚೆಗೆ ನಡೆಸುತ್ತಿರುವ ಪ್ರಯೋಗಗಳು. ಹೊಸ ಶಿಕ್ಷಣ ನೀತಿ, ಒಟ್ಟು ಶಿಕ್ಷಣ ವ್ಯವಸ್ಥೆಯ ಸ್ವರೂಪಕ್ಕೆ ಧಕ್ಕೆ ತರುವ ಆತಂಕವನ್ನು ಶಿಕ್ಷಣ ತಜ್ಞರು ವ್ಯಕ್ತಪಡಿಸುತ್ತಿರುವ ಸಂದರ್ಭದಲ್ಲೇ ಸರಕಾರ ವಿದ್ಯಾರ್ಥಿಗಳನ್ನು ತನ್ನ ಪ್ರಯೋಗಗಳ ಗಿನಿಪಿಗ್ಗಳನ್ನಾಗಿ ಸಲು ಹೊರಟಿದೆ. ಆಧುನಿಕತೆ ಮತ್ತು ವೈಚಾರಿಕತೆಗೆ ಪೂರಕವಾಗಿ ಶಿಕ್ಷಣವನ್ನು ಹೆಚ್ಚು ಸೃಜನಶೀಲಗೊಳಿಸಿ, ಆ ಮೂಲಕ ವಿದ್ಯಾರ್ಥಿಗಳನ್ನು ರೂಪಿಸುವ ಹೊಣೆಗಾರಿಕೆಗಳಿಂದ ನುಣುಚಿಕೊಳ್ಳುತ್ತಿರುವ ಶಿಕ್ಷಣ ವ್ಯವಸ್ಥೆ ವಿದ್ಯಾರ್ಥಿಗಳನ್ನು ಉರು ಹೊಡೆಯುವ' ಹಳೆತಂತ್ರಕ್ಕೆ ಮತ್ತೆ ತಳ್ಳಲು ಹೊರಟಿದೆ. ಅದರ ಭಾಗವಾಗಿಯೇ, ನೋ ಡಿಟೆನ್ಸನ್ ಪಾಲಿಸಿ ಅಥವಾ ಅನುತ್ತೀರ್ಣ ರಹಿತ ನೀತಿಯನ್ನು ಕೇಂದ್ರ ಸರಕಾರ ರದ್ದುಗೊಳಿಸಿದೆ.**

ಹಾಗೆಂದು, ಈ ಅವಧಿಯಲ್ಲಿ ಮಕ್ಕಳು ಪಠ್ಯದಲ್ಲಿರುವ ವಿಷಯಗಳನ್ನು ತಿಳಿದುಕೊಳ್ಳಬೇಕಾಗಿಲ್ಲ ಎಂದಲ್ಲ ಕಲಿಸುವ ವಿಧಾನಗಳಿಗೆ ಸರಕಾರ ಆದ್ಯತೆಯನ್ನು ನೀಡಬೇಕು. ಅವರ ಸಮಗ್ರ ವಿಕಾಸಕ್ಕೆ ಒಂದು ವಾತಾವರಣವನ್ನು ನಿರ್ಮಾಣ ಮಾಡಿಕೊಡುವುದು ಈ ಸಂದರ್ಭದಲ್ಲಿ ಅತ್ಯಗತ್ಯವಾಗಿದೆ. ವರ್ಷಕ್ಕೆ ಎರಡು ಬಾರಿ ಪರೀಕ್ಷೆಗಳನ್ನು ನಡೆಸಿ ಅವರು ಉರು ಹೊಡೆದಿರುವುದನ್ನು ಕಕ್ಕಿಸುವುದನ್ನೇ ಪರೀಕ್ಷೆ ಎಂದು ಕರೆಯುವುದನ್ನು ಮೊದಲು ಸರಕಾರ ನಿಲ್ಲಿಸಬೇಕು. ಪರೀಕ್ಷೆಗಳು ಇನ್ನಷ್ಟು ಸೃಜನಶೀಲವಾಗಬೇಕು. ಅದು ಅವರ ಒಳಗಿರುವ ಪ್ರತಿಭೆಯ ಬೇರೆ ಬೇರೆ ಮಗ್ಗಲುಗಳನ್ನು ತೀಡುವಂತಿರಬೇಕು. ಈ ನಿಟ್ಟಿನಲ್ಲಿ ಪ್ರತಿ ತಿಂಗಳೂ ಮಕ್ಕಳ ಕಲಿಕೆಯ ಮೌಲ್ಯಮಾಪನಗಳು ನಡೆಯಬೇಕು. ಅದು ಕೇವಲ ಪ್ರಶ್ನೆ ಮತ್ತು ಉತ್ತರ ಪತ್ರಿಕೆಗಳಿಗೆ ಸೀಮಿತವಾಗಬೇಕಾಗಿಲ್ಲ ಆಟದ ಬಯಲು, ರಂಗಮಂದಿರ, ಶಾಲೆಯ ಕೈತೋಟ, ಚಿತ್ರಕಲೆ ಹೀಗೆ ಪರೀಕ್ಷೆಯ ವ್ಯಾಪ್ತಿಯನ್ನು ಹಿಗ್ಗಿಸಬೇಕು. ವರ್ಷಕ್ಕೆ ಎರಡು ಬಾರಿ ಕೆಲವು ಗಂಟೆಗಳ ಕಾಲ ಕಲಿತದ್ದನ್ನು ಕಕ್ಕಿಸುವ ಕೆಲಸಕ್ಕಿಂತ ಪ್ರತಿ ತಿಂಗಳು ಕಲಿತವನ್ನು ಮೌಲ್ಯಮಾಪನ ಮಾಡುತ್ತಾ ಮತ್ತೆ ಹೊಸದಾಗಿ ಕಲಿಕೆಗೆ ಸಿದ್ಧಗೊಳಿಸುವ ವ್ಯವಸ್ಥೆ ಅತ್ಯುತ್ತಮ ವಿಧಾನವಾಗಿದೆ.

ಸರಕಾರ ನಡೆಸುವ ವಾರ್ಷಿಕ ಪರೀಕ್ಷೆಯಲ್ಲಿ ಫೇಲಾದರೆ ಮತ್ತೆ ಎರಡು ತಿಂಗಳಲ್ಲಿ ನಡೆಯುವ ಪರೀಕ್ಷೆಗೆ ವಿದ್ಯಾರ್ಥಿಗಳು ಸಿದ್ಧರಾಗಬೇಕು. ಅದರಲ್ಲೂ ವಿಫಲರಾದರೆ ಅದೇ ತರಗತಿಯಲ್ಲಿ ಮತ್ತೆ ಕಲಿಯಬೇಕು. ಒಂದು ವರ್ಷದಲ್ಲಿ ಕಲಿತಿರುವುದನ್ನು ಬರೇ ಎರಡು ತಿಂಗಳಲ್ಲಿ ಮತ್ತೆ ಕಲಿತು ಬರೆದು ಅವರು ಉತ್ತೀರ್ಣರಾಗಲು ಯೋಗ್ಯರಾಗುವುದು ಹೇಗೆ? ಒಂದು ವೇಳೆ ಈ ಪರೀಕ್ಷೆಯಲ್ಲಿ ಅನುತ್ತೀರ್ಣರಾದರೆ ವಿದ್ಯಾರ್ಥಿಗಳ ಗತಿಯೇನು? ಕೊರೊನೋತ್ತರ ದಿನಗಳಲ್ಲಿ ಶಾಲೆಗಳನ್ನು ತೊರೆಯುತ್ತಿರುವ ಮಕ್ಕಳ ಸಂಖ್ಯೆ ಹೆಚ್ಚಿದೆ ಎಂದು ವರದಿಗಳು ಹೇಳುತ್ತವೆ. ಲಾಕ್‌ಡೌನ್ ಸಂದರ್ಭದಲ್ಲಿ ಶಾಲೆ ತೊರೆದ ಸಾವಿರಾರು ಮಕ್ಕಳು ಮರಳಿ ಶಾಲೆಯ ಮೆಟ್ಟಿಲನ್ನು ತುಳಿದಿಲ್ಲ. ಬದಲಿಗೆ ಅವರು ಬಾಲಕಾರ್ಮಿಕರಾಗಿ ತಮ್ಮ ಬದುಕನ್ನು ಸವೆಸುತ್ತಿದ್ದಾರೆ. ಶಾಲೆ ತೊರೆದವರನ್ನು ಮರಳಿ ಶಾಲೆಗೆ ಸೇರಿಸಲು ಕೇಂದ್ರ ಸರಕಾರವಾಗಲಿ, ರಾಜ್ಯ ಸರಕಾರಗಳಾಗಲಿ ಪರಿಣಾಮಕಾರಿ ಕ್ರಮವನ್ನು ತೆಗೆದುಕೊಂಡಿಲ್ಲ. ಬದಲಿಗೆ ಸರಕಾರ ಜಾರಿಗೊಳಿಸಲು ಯತ್ನಿಸುತ್ತಿರುವ ನೂತನ ಶಿಕ್ಷಣ ನೀತಿ ಒಟ್ಟು ವ್ಯವಸ್ಥೆಯನ್ನು ಇನ್ನಷ್ಟು ಅಯೋಮಯಗೊಳಿಸಿದೆ ಇಂತಹ ಸಂದರ್ಭದಲ್ಲಿ ಪ್ರಾಥಮಿಕ ಶಾಲೆಯ ಮಕ್ಕಳನ್ನು ನಿರ್ದಿಷ್ಟ ಅಂಕ ಪಡೆದಿಲ್ಲ ಎಂದು ಅನುತ್ತೀರ್ಣಗೊಳಿಸಿದರೆ ಅವರು ಶಾಲೆ ತೊರೆಯುವಂತೆ ಪರೋಕ್ಷವಾಗಿ ಸರಕಾರವೇ ಒತ್ತಡ ಹೇರಿದಂತಾಗುತ್ತದೆ ಅನುತ್ತೀರ್ಣರಾದವರನ್ನು ಸಮಾಜ, ಪೋಷಕರು ಹೇಗೆ ಸ್ವೀಕರಿಸುತ್ತಾರೆ ಎನ್ನುವುದನ್ನು ನಾವು ನೋಡುತ್ತಲೇ ಬಂದಿದ್ದೇವೆ. ಎಸೆಸೆಲ್ಸಿ ಪಿಯುಸಿ ಪರೀಕ್ಷೆಯಲ್ಲಿ ಸೂಕ್ತ ಅಂಕಗಳು ಸಿಕ್ಕಿಲ್ಲ ಎಂದು ಆತ್ಮಹತ್ಯೆಗೈಯುವ ಮಕ್ಕಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿವೆ. ಇಂತಹ ಸಂದರ್ಭದಲ್ಲಿ ಐದನೇ ತರಗತಿ ಮತ್ತು ಎಂಟನೇ ತರಗತಿಗಳಲ್ಲಿ ವಿದ್ಯಾರ್ಥಿಗಳನ್ನು ಅನುತ್ತೀರ್ಣಗೊಳಿಸಿದರೆ, ಬಡವರ್ಗದ ಮಕ್ಕಳು ಅನಿವಾರ್ಯವಾಗಿ ಶಾಲೆ ತೊರೆಯ ಬೇಕಾದ ಸ್ಥಿತಿ ನಿರ್ಮಾಣ ಮಾಡಿದಂತಾಗುತ್ತದೆ. ಹಾಗೆ ಶಾಲೆ ತೊರೆದವರು ನಗರಗಳ ಹೊಟೇಲುಗಳಲ್ಲಿ ಅಥವಾ ಗ್ರಾಮೀಣ ಪ್ರದೇಶದ ಹಟ್ಟಿಗಳಲ್ಲಿ ತೋಟಗಳಲ್ಲಿ ಬಾಲಕಾರ್ಮಿಕರಾಗಿ ದುಡಿಯಬೇಕಾಗುತ್ತದೆ. ಇಷ್ಟಕ್ಕೂ ವಿದ್ಯಾರ್ಥಿಗಳು ಕಡಿಮೆ ಅಂಕ ಪಡೆಯುವುದಕ್ಕೆ ಶಿಕ್ಷಣ ವ್ಯವಸ್ಥೆಯ ಕೊಡುಗೆಯೇ ಇಲ್ಲವೆ? ದೇಶಾದ್ಯಂತ ಶಿಕ್ಷಕರ ಕೊರತೆಯಿಂದಲೇ ಸಾವಿರಾರು ಸರಕಾರಿ ಶಾಲೆಗಳು ಪಾಲು ಬಿದ್ದಿವೆ. ತರಗತಿ ಕೊಠಡಿಗಳಿಲ್ಲದಿರುವುದು, ಮೂಲಭೂತ ಸೌಕರ್ಯಗಳ ಕೊರತೆ, ಸುಸಜ್ಜಿತ ಗ್ರಂಥಾಲಯಗಳಿಲ್ಲದೇ ಇರುವುದು ಇವೆಲ್ಲವೂ ವಿದ್ಯಾರ್ಥಿಗಳ ಕಲಿಕೆಯ ಮೇಲೆ ನೇರ ಪರಿಣಾಮ ಬೀರುತ್ತವೆ. ಆದುದರಿಂದ, ಮೊದಲು ನಮ್ಮ ಶಾಲೆಗಳ ಯೋಗ್ಯತೆಯ ಬಗ್ಗೆ ಪರೀಕ್ಷೆಗಳು ನಡೆದು ಅವುಗಳ ಉತ್ತೀರ್ಣ, ಅನುತ್ತೀರ್ಣ ನಿರ್ಧಾರವಾಗಬೇಕು.

## ರಾಮಾಯಣ



**ಶುನ 1 ಶೇಫನು ದೀರ್ಘಾಯುಷ್ಯವನ್ನು ಪಡೆದುದು**

• ಹಿಂದಿನ ಸಂಚಿಕೆಯಿಂದ 60 ನೆಯ ಅಧ್ಯಾಯ

ಶರಣುಹೊಕ್ಕನು ಈತನ ಪ್ರಾಣವನ್ನು ಉಳಿಸಿ ನನ್ನ ಇಷ್ಟವನ್ನು ನೆರವೇರಿಸಿರಿ. ನೀವು ಮಹಾಕೃತಾರ್ಥರು ನೀವು ಧರ್ಮಬುದ್ಧಿಯುಳ್ಳವರು ಆದ್ದರಿಂದ ನೀವು ಅಂಬರೀಷರಾಜನ ಸರಮೇಧಯಾಗದಲ್ಲಿ ಪಶುಗಳಾಗಿ ಯಜ್ಞೇಶ್ವರನಿಗೆ ತೃಪ್ತಿಯನ್ನು ಮಾಡಿರಿ ಅನಾಥನಾದ ಶುನಃ ವೇಫನು ನಿಮ್ಮಿಂದ ಜೀವಿತನಾಗಿ ಬದುಕಲಿ. ಅಂಬರೀಷರಾಜನ ಯಾಗವು ನಿರ್ವಿಘ್ನವಾಗಿ ನೆರವೇರಲಿ. ಆ ಯಾಗದಲ್ಲಿ ಹವಿರ್ಭಾಗಗಳನ್ನು ಭುಜಿಸುವ ದೇವತೆಗಳು ಸಂತುಷ್ಟರಾಗಲಿ, ನನ್ನ ಮಾತು ಸತ್ಯವಾಗಲಿ' ಎಂದು ನುಡಿದನು. ಆ ಮಾತನ್ನು ಕೇಳಿ ಆ ಮಕ್ಕಳು ತಮ್ಮ ತಂದೆಯಾದ ವಿಶ್ವಾಮಿತ್ರಮುನೀಶ್ವರನನ್ನು ನೋಡಿ ಎಲ್ಲೆ ತಂದೆಯೆ, ತಮ್ಮ ಮಕ್ಕಳನ್ನು ಬಿಟ್ಟು ಪರರ ಮಕ್ಕಳನ್ನು ರಕ್ಷಿಸುವುದು ಲೋಕದಲ್ಲಿಲ್ಲ. ಮಾಂಸವನ್ನು ಭಕ್ಷಣೆಮಾಡುವಂತೆ ತನ್ನ ಮಕ್ಕಳನ್ನು ಪಶುನಿಮಿತ್ತವಾಗಿ ಕೊಡುವುದು ಅನುಚಿತವು ' ಎಂದು ದೇಹಾಭಿಮಾನದಿಂದ ನಗುತ್ತ ಅಂಗಚೇಷ್ಟೆ ಮಾಡುತ್ತಾ ನುಡಿದರು.

ಆ ಮಾತನ್ನು ಕೇಳಿ ವಿಶ್ವಾಮಿತ್ರಮುನೀಶ್ವರನು ಅತ್ಯಂತ ಕೋಪಯುಕ್ತನಾಗಿ ತನ್ನ ಮಕ್ಕಳಾದ ಮಧುಷ್ಯಂದಾದಿಗಳನ್ನು ಕುರಿತು ಎಲೈ, ನನ್ನ ಮಾತನ್ನ ಕ್ರಮಿಸಿ, ಕೇಳುವಂಥವರಿಗೆ ರೋಮಾಂಚವಾಗುವ ಮಾತನ್ನು ಭಯವಿಲ್ಲದೆ ಲೋಕದಲ್ಲಿ ಧರ್ಮಕ್ಕೆ ವಿರುದ್ಧವಾದ ರೀತಿಯಲ್ಲಿ ನುಡಿದಿರಿ. ಆದ್ದರಿಂದ ನೀವು ವಸಿಷ್ಠನ ಮಕ್ಕಳಂತೆ ನಾಯಿಯ ಮಾಂಸವನ್ನು ಭುಜಿಸುತ್ತಾ ಒಂದು ಸಾವಿರ ವರುಷಗಳು ಭೂಮಿಯಲ್ಲಿ ಸಂಚರಿಸಿಕೊಂಡಿರಿ' ಎಂದು ಶಾಪವನ್ನು ಕೊಟ್ಟನು. ಶುನಃ ಶೇಫನಿಗೆ ಅಭಯವನ್ನು ಕೊಟ್ಟು ಆತನನ್ನು ಕುರಿತು 'ಶುನಶ್ಶೈವ, ಅಂಬರೀಷರಾಜನು ಯಾಗದಲ್ಲಿ ನಿನ್ನನ್ನು ಪವಿತ್ರವಾದ ದರ್ಭೆಯ ಹಗ್ಗಗಳಿಂದ ಕಟ್ಟಿ ಕೆಂಪಾದ ಪುಷ್ಪಮಾಲಿಕೆಗಳಿಂದ ಅಲಂಕರಿಸಿ ವಿಷ್ಣುದೇವತಾಕವಾದ ಯೂಪಸ್ತಂಭದಲ್ಲಿ ಕಟ್ಟುವ ಸಮಯದಲ್ಲಿ ಎರಡು ರಹಸ್ಯವಾದ ಋಕ್ಕುಗಳಿಂದ ಯಜ್ಞಪುರುಷನನ್ನು ಸ್ತೋತ್ರಮಾಡು. ಆ ಋಕ್ಕುಗಳನ್ನು ನಿನಗೆ ಉಪದೇಶ ಮಾಡುತ್ತೇನೆ' ಎಂದು ನುಡಿದು ಉಪದೇಶವನ್ನು ಮಾಡಿದನು. ಹೀಗೆ ಆತನಲ್ಲಿ ಅನುಗ್ರಹಿಸಿ ★ ಶುನಃಶೇಫ, ಅಂಬರೀಷರಾಜನ ಯಾಗದಲ್ಲಿ ಈ ಋಕ್ಕುಗಳನ್ನು ಜಪಿಸಿ ಸಿದ್ಧಿಯನ್ನು ಪಡೆ ' ಎಂದು ಹೇಳಿ ಆತನ ಕೈ ಹಿಡಿದು ಧೈರ್ಯ ಹೇಳಿ ಕಳುಹಿಸಿದನು. ಆ ಮೇಲೆ ಶುನಃಶೇಫನು ವಿಶ್ವಾಮಿತ್ರನಿಂಥ ಮಂತ್ರೋಪದೇಶವನ್ನು ಪಡೆದು ಅಂಬರೀಷ ರಾಜನನ್ನು ಕುರಿತು 'ಎಲೈ ರಾಜನೆ, ನಾವು ಯಜ್ಞ ಶಾಲೆಗೆ ಹೋಗೋಣ. ನೀನು ಯಾಗದೀಕ್ಷೆ ಯನ್ನು ಕೈಗೊಳ್ಳು. ಈ ಯಾಗವು ಆಗಲಿ ' ಎಂದು ಹೇಳಿದನು. ಆ ಮಾತನ್ನು ಕೇಳಿ ಆ ರಾಜನು ಅತ್ಯಂತ ಸಂತೋಷಯುಕ್ತನಾಗಿ ಆಲಸ್ಯವಿಲ್ಲದೆ ಯಜ್ಞ ಶಾಲೆಯನ್ನು ಪ್ರವೇಶಿಸಿ ಶುನಃಶೇಫನನ್ನು ರಕ್ತವಸ್ತ್ರ ರಕ್ತ ಪುಷ್ಪ ಮಾಲಿಕೆಗಳಿಂದಲಂಕರಿಸಿ ದರ್ಭೆಯ ಹಗ್ಗದಿಂದ ಯೂಪಸ್ತಂಭದಲ್ಲಿ ಕಟ್ಟಿದನು.

**ಮುಂದುವರಿಯುವುದು...**

**ನಿಮ್ಮ ಸಾಧನೆ ನಿಮಗೆ ತ್ರಪ್ತಿ ತಂದಿದೆಯೇ ಹಾಗೂ ವಿದ್ಯಾರ್ಥಿ ಮಿತ್ರರಿಗೆ ನಿಮ್ಮ ಕಿವಿಮಾತು?**

ನಾನು ಇನ್ನೂ ಏನನ್ನೂ ಸಾಧಿಸಿಲ್ಲ . ನಾನು ಇನ್ನೂ ಸಾಧಿಸುವುದು ತುಂಬಾ ಇದೆ. ನನಗೆ ಪ್ರತಿಯೊಬ್ಬ ಪ್ರಜೆ ಬುಡಕಟ್ಟು ಜನಾಂಗವಿರಲಿ ಯಾರೇ ಇರಲಿ ಶಿಕ್ಷಣದಿಂದ ವಂಚಿತರಾಗಬಾರದು ಪ್ರತಿಯೊಬ್ಬರೂ ತಮ್ಮ ತಮ್ಮ ಮಕ್ಕಳಿಗೆ ಶಾಲೆಗೆ ಕಳಿಸಬೇಕು ನಾನು ನನ್ನ ಕೆಲಸದಲ್ಲಿ ತೃಪ್ತಿ ಕಂಡುಕೊಳ್ಳಲು ಪ್ರಯತ್ನಿಸುತ್ತೇನೆ . ಪ್ರತಿಯೊಬ್ಬ ವಿದ್ಯಾರ್ಥಿ ದೇಶ ಸೇವೆ, ನಮ್ಮಸಂವಿಧಾನದ ಮೌಲ್ಯಗಳ ಪಾಲನೆ, ಸಂವಿಧಾನದಲ್ಲಿ ಜೀವನದ ಮೌಲ್ಯಗಳು ಅಡಕವಾಗಿವೆ. ಹೀಗಾಗಿ ಅವುಗಳನ್ನು ಅರ್ಥಮಾಡಿಕೊಂಡಾಗ ಮಾತ್ರ ವಿದ್ಯಾರ್ಥಿಗಳು ಯಶಸ್ಸು ಕಾಣಲು ಸಾಧ್ಯ ಹಾಗೂ ಪರೋಪಕಾರ ಮನೋಭಾವ ಬೆಳಸಿಕೊಳ್ಳಬೇಕು ಎಂಬುದು ನನ್ನ ಅನಿಸಿಕೆ.

# ಬಾಸ್ಮತಿಯವರೊಂದಿಗೆ ಬಾತ್‌ಚೀತ್

• ಉದಯವಾಹಿನಿ, ವಿಶೇಷ



ಉದಯವಾಹಿನಿ ಚಿತ್ರ

ಮೊನ್ನೆ ತಾನೇ ನನ್ನ ಎಂ ಎಸ್ ಇಂಜಿನಿಯರಿಂಗ್ ಕಾಲೇಜ್, ಪ್ರಾಂಶುಪಾಲರಾದ ಡಾ. ಎನ್. ರಾಣಾಪ್ರತಾಪ್ ರೆಡ್ಡಿ ಅವರು ಒಬ್ಬ ಮಹಿಳೆಯನ್ನು ಕಾಲೇಜ್‌ಗೆ ಕರೆದುಕೊಂಡು ಬಂದಿದದ್ದರು. ಆ ಮಹಿಳೆಯನ್ನು ನೋಡಿದರೆ ಏನೋ ಕುತೂಹಲ. ಅವರ ನಡೆಯಲ್ಲಿ ವಿನೀತ ಸ್ವಭಾವ ಎದ್ದು ಕಾಣುತ್ತಿತ್ತು. ಅವರನ್ನು ಎಲ್ಲೋ ನೋಡಿದ ನೆನಪು ಆದರೆ ನೆನಪು ಅಸ್ಪಷ್ಟ, ನೋಡಲು ಉತ್ತರ ಭಾರತ ಮೂಲದವರು ಅದರಲ್ಲೂ ಒರಿಸ್ಸಾ ಅಥವಾ ಬಿಹಾರ್ ಆಕಡೆ ಅವರು ಎಂದೆನಿಸಿತು ಆ ಮಹಿಳೆಯ ಮುಖ ಚಹರೆ ನೋಡಿದರೆ ಏಕೋ ಏನೋ ಅವರನ್ನು ಮಾತನಾಡಿಸುವ ಆಸೆ ಆಕ್ಷಣವೆ ನನ್ನ ಒಳಗೆ ಚಿಗುರೊಡೆಯಿತು. ನಾನು ಕುತೂಹಲದಿಂದ ಹಾಗೂ ಸ್ವಲ್ಪ ಹಿಂಜರಿಕೆಯಿಂದ ನಮ್ಮ ಪ್ರಾಂಶುಪಾಲರಿಗೆ ನಾನು ಅವರನ್ನು ಮಾತನಾಡಿಸಬಹುದೆ ಎಂದು ಕೇಳಿದೆ ಅದಕ್ಕೆ ಅವರು ಆಲ್‌ರೈಟ್ ಆದರೆ ಮೊದಲು ಅವರು ನಿಮ್ಮನ್ನು ಉದ್ದೇಶಿಸಿ ಸಭಾಂಗಣದಲ್ಲಿ ಸ್ವಲ್ಪ ಸಮಯದಲ್ಲೇ ಭಾಷಣ ಮಾಡಲಿದ್ದಾರೆ ತದ ನಂತರ ನೀನು ಅವರನ್ನು ಮಾತನಾಡಿಸಬಹುದು ಎಂದರು. ಸರಿ ಎಂದು ನಾನು ಕೌತುಕದಿಂದ ಸಭಾಂಗಣಕ್ಕೆ ದೌಡಾಯಿಸಿದೆ . ಆ ಮಹಿಳೆ ಸಭಾಂಗಣಕ್ಕೆ ತಡ ಮಾಡದೆ ಬಂದೆ ಬಿಟ್ಟರು.

ಸಭಾಂಗಣದಲ್ಲಿರುವ ವೇದಿಕೆ ಮೇಲೆ ಆಸೀನಾರಾದರು ಆ ಮಹಿಳೆ ಅವರ ಬಗ್ಗೆ ನಿರೂಪಕರು ಪರಿಚಯಿಸಿದರು ಆವಾಗ ತಿಳಿಯಿತು ಅವರು ಬಾಸ್ಮತಿ ಗಾರ್ಗ್ಯ ಎಂದು ಇದೇನಿದು ಬಾಸ್ಮತಿ ಅಕ್ಕಿ ಕೇಳಿದ್ದೆ ಬಾಸ್ಮತಿ ಎಂಬ ಹೆಸರು ಎಂದು ಅಚ್ಚರಿ ಮೂಡಿತು .... ಸ್ವಲ್ಪ ಸಮಯದ ನಂತರ ತಿಳಿಯಿತು ಬಾಸ್ಮತಿ ಅಂದರೆ ಅದರ ಇನ್ನೊಂದು ಅರ್ಥ ಪರಿಮಳ ಎಂದು. ಮೊದಲಿನ ನನ್ನ ಊಹೆ ಸ್ವಲ್ಪ ಸರಿಯಿತ್ತು ಅವರು ಉತ್ತರ ಭಾರತದವರು ಎಂದು ನಂತರ, ಝಾರ್ಖಂಡ ರಾಜ್ಯದ ಒಂದು ಕುಗ್ರಾಮದ ಬುಡಕಟ್ಟು ಜನಾಂಗದ ಮಹಿಳೆ ಎಂದು ತಿಳಿಯಿತು. ಅವರು ''ಜೋಹಾರ್'' ''ಜೋಹಾರ್'' ತಮ್ಮ ಭಾಷಣ ಶುರು ಮಾಡಿದರು. ಅವರ ಬಾಷೆಯಲ್ಲಿ ಜೋಹಾರ್ ಎಂದರೆ ನಮಸ್ಕಾರವೆಂದು. ಅವರ ನುಡಿಗಳು ಎಂತವರಿಗಾದರೂ ಸ್ಫೂರ್ತಿ ತುಂಬುವ ಶಕ್ತಿ ಹೊಂದಿದದ್ದವು . ಅವರ ಭಾಷಣ ಪ್ರತಿಯೊಬ್ಬರನ್ನೂ ಬೇರೆ ಪ್ರಪಂಚಕ್ಕೆ ಕರೆದೋಯಿತು ಅಂದರೆ ತಪ್ಪಾಗಲಾರದು.

ಅಸಲಿ ಕಹಾನಿ ಎಂದರೆ ಬಾಸ್ಮತಿ ಗಾರ್ಗ್ಯ ಝಾರ್ಖಂಡ್ ರಾಜ್ಯದ ಪಶ್ಚಿಮ ಮಂಝುರಿ ಜಿಲ್ಲೆಯ ಲಾಂಝುರಿ ಎಂಬ ಹಳ್ಳಿಯ ಹೊ ಎಂಬ ಬುಡಕಟ್ಟು ಜನಾಂಗದ ಮಹಿಳೆ.

> **ಅಲ್ಲಿಯ ಬುಡಕಟ್ಟಿನ ಜನಾಂಗದವರಿಗೆ ಊಟ ವಸತಿ ದೊರೆತರೆ ಅದೇ ಹೆಚ್ಚು ಇಂಥಾ ಪರಿಸ್ಥಿತಿಯಲ್ಲಿ ಓದು ಬರಹ ಎಂದರೆ ಗಗನ ಕುಸುಮ , ಇಂಥಾ ದುಸ್ಥಿತಿಯಲ್ಲೂ ಎಲ್ಲಾ ರೀತಿಯ ಕಷ್ಟ ಕಾರ್ಪಣ್ಯಗಳನ್ನು ಮೆಟ್ಟಿ ನಿಂತು ಸಾವಿರಾರು ಬುಡಕಟ್ಟು ಮಹಿಳೆಯರಲ್ಲಿ ಡಿಗ್ರೀಯವರೆಗೂ ಓದಿದ ಏಕೈಕ ವ್ಯಕ್ತಿ ಹಾಗೂ ಸಾವಿರಾರು ಬುಡಕಟ್ಟು ಮತ್ತು ಅನಾಥ ಮಕ್ಕಳಿಗೆ ತನ್ನ ಕೈಯಾರೆ ಶಾಲೆ ಒಂದನ್ನು ಕಟ್ಟಿದ ಮಹಾನ್ ಸಾಧಕಿ**

ಅವರಿಗೆ 17ನೇ ವಯಸ್ಸಿಗೆ ಮದುವೆ ಮಾಡಲಾಯಿತು ಒಂದು ವರ್ಷದಲ್ಲಿ ಮಗುವಿಗೆ ಜನನ ತದನಂತರ ಎರಡು ವರ್ಷ ವನವಾಸ ಆದರೂ ಛಲ ಬಿಡದೆ ತನ್ನ ಸ್ವಂತ ದುಡಿಮೆಯಲ್ಲಿ ಡಿಗ್ರೀ ವರೆಗೆ ವಿದ್ಯಾಭಾಸ ಮುಗಿಸಿ ಪಟ್ಟಣ ಒಂದರಲ್ಲಿ ಶಿಕ್ಷಕಿ ಕೆಲಸಕ್ಕೆ ಸೇರಿದ ವರು. ತನ್ನ ಮಗುವಿಗೆ ಶಾಲೆಗೆ ಕಳಿಸಬೇಕು ಎಂದು ಮಹದಾಸೆ ಆದರೆ ತಮ್ಮ ಊರಲ್ಲಿ ಶಾಲೆ ಇಲ್ಲ, ಅದು 2016 ನೇ ವರ್ಷ ಬಾಸ್ಮತಿ ಸಂಬಂಧ ಪಟ್ಟವರಿಗೆ ಎಲ್ಲಾ ರೀತಿಯ ಮನವಿ ಮಾಡಿದರು ತನ್ನ ಹಳ್ಳಿಗೆ ಶಾಲೆಯ ವ್ಯವಸ್ಥೆ ಕಲ್ಪಿಸಲಾಗಲಿಲ್ಲ ಹಾಗಾಗಿ ಬಾಸ್ಮತಿ ಒಂದು ಮರದ ಕೆಳಗೆ ತನ್ನ ಮಗು ಮತ್ತು ಇತರೆ ಮೂರು ಮಕ್ಕಳೊಂದಿಗೆ ಒಂದು ಮರದ ಕೆಳಗೆ ಓನಾಮ ಹೇಳಿಕೊಡಲು ಶುರು ಮಾಡಿದರು. ಒಂದು ಮರದ ಕೆಳಗೆ ಶುರು ಮಾಡಿದ ಶಿಕ್ಷಣ ಈಗ ಒಂದು ಎನ್‌ಜಿಒ ಸಹಾಯದೊಂದಿಗೆ 350 ಮಕ್ಕಳಿಗೆ ಉಚಿತ ವಾಗಿ ಶಿಶು ವಿಹಾರದಿಂದ ಏಳನೇ ತರಗತಿಯವರಿಗೆ ವ್ಯಾಸಂಗ ಮಾಡಲು ಒಂದು ದೊಡ್ಡ ಶಾಲೆ ಜೊತೆಗೆ ಉಚಿತ ಬೆಳಗ್ಗಿನ ತಿಂಡಿ ಮಧ್ಯಾಹ್ನದ ಊಟ ಮತ್ತು 50 ಜನ ಅನಾಥ ಮಕ್ಕಳಿಗೆ ವಸತಿ ಸೌಕರ್ಯವಾಗಿ ಮಾರ್ಪಟ್ಟಿದೆ. ಅಷ್ಟೇ ಅಲ್ಲದೆ ಕಳೆದ 6 ವರ್ಷಗಳಲ್ಲಿ ಸರಿ ಸುಮಾರು 50,000 ಬುಡಕಟ್ಟು ಜನರಿಗೆ ಶಿಕ್ಷಣ, ಪರಿಸರ , ಆರೋಗ್ಯ , ವ್ಯಾಸಗಳಿಂದ ಮುಕ್ತಿ ಇವುಗಳ ಬಗ್ಗೆ ಯಶಸ್ವಿ ಜನ ಜಾಗೃತಿ ಮತ್ತು ಸಾವಿರಾರು ಮಹಿಳೆಯರ ಸಬಲೀಕರಣ ಮಾಡಿದ್ದಾರೆಂದು ಅವರ ಭಾಷಣದಿಂದ ತಿಳಿದು ಬಂತು.

ಇಷ್ಟೆಲ್ಲಾ ಕೇಳಿದ ನನಗೆ ಬಾಸ್ಮತಿಯವರ ಬಗ್ಗೆ ಇನ್ನೂ ತಿಳಿದು ಕೊಳ್ಳಬೇಕೆಂಬ ಆಸೆ ಇಮ್ಮಡಿ ಆಯಿತು. ಹಾಗಾಗಿ ಭಾಷಣ ಮತ್ತು ಇತರೆ ಕಾರ್ಯಕ್ರಮ ಮುಗಿದ ನಂತರ ನಮ್ಮ ಪ್ರಾಂಶುಪಾಲರಾದ ಡಾ. ಎನ್. ರಾಣಾಪ್ರತಾಪ್ ರೆಡ್ಡಿ ಮತ್ತು ಎಂ ಎಸ್ ಎಜುಕೇಶನ್ ಟ್ರಸ್ಟ್ ಕಾರ್ಯದರ್ಶಿ ಶ್ರೀ. ಸುದರ್ಶನ್ ರಾಜು ಅವರ ಅನುಮತಿಯೊಂದಿಗೆ ಬಾಸ್ಮತಿ ಗಾರ್ಗ್ಯ ಅವರೊಂದಿಗೆ ಬಾತ್ ಚೀತ್ ಗೆ ಮುಂದಾದೆ. ನನ್ನ ಪ್ರಶ್ನೆಗಳು ಹಾಗೂ ಅವುಗಳಿಗೆ ಬಾಸ್ಮತಿ ಗಾರ್ಗ್ಯ ಅವರ ಉತ್ತರ ಹೀಗಿದ್ದವು

**ಶಾಲೆ ಕಟ್ಟುವ ಸಮಯದಲ್ಲಿ ಏನಾದರೂ ಅಡೆ ತಡೆಗಳು ಉಂಟಾದವೋ?:** ಶಾಲೆ ಕಟ್ಟುವ ಸಮಯದಲ್ಲಿ ನಾನಾ ವಿಧದ ಸಮಸ್ಯೆಗಳು ಎದುರಾದವು , ನಮ್ಮ ಬುಡಕಟ್ಟು ಜನರೇ ನನ್ನ ವಿರುದ್ಧ ಪಿತೂರಿ ಮಾಡಿದರು, ಬೇರೆ ಬೇರೆ ಸಂಘ ಸಂಸ್ಥೆಗಳು ನೀಡಿದ್ದ ದೇಣಿಗೆ ಹಣದಿಂದ ತಂದಿದ ಕಟ್ಟಡ ಸಾಮಗ್ರಿಗಳನ್ನು ಕದ್ದರು, ಅರ್ಧ ಕಟ್ಟಡ ನಿರ್ಮಾಣ ಮಾಡಿದ ಮೇಲೆ ಪೂರ್ತಿ ನೆಲಸಮ ಮಾಡಿದರು, ಆಗ ನಾನೇ ಖುದ್ದಾಗಿ ನಿರ್ಮಾಣ ಮಾಡಲು ಮುಂದಾದೆ, ಶಾಲೆ ನಿರ್ಮಾಣ ಮಾಡುವರೆಗೆ ಪಾಳು ಕಟ್ಟಡದಲ್ಲೇ ನಾನು ವಾಸ ಮಾಡಿ ಎಲ್ಲವನ್ನೂ ನೋಡಿಕೊಂಡೆ, ಆಗ ಕೆಲ ಗಂಡಸರು ನನ್ನ ಮೇಲೆ ಹಲ್ಲೆ ಮಾಡಲು ಪ್ರಯತ್ನ ಪಟ್ಟರು ಆದರು ನಾನು ಧೃತಿಗೆಡಲಿಲ್ಲ ಧೈರ್ಯ ವಾಗಿ ಮುನ್ನುಗ್ಗಿ ಶಾಲೆ ಕಟ್ಟಿದೆ.

**ನೀವು ಬುಡಕಟ್ಟು ಜನಾಂಗದ ಹೆಣ್ಣು ಮಕ್ಕಳನ್ನು ಹೇಗೆ ಶಾಲೆಗೆ ಕರೆತಂದಿರಿ?:** ನಮ್ಮ ಬುಡಕಟ್ಟು ಜನರಲ್ಲಿ ಹೆಣ್ಣು ಮಕ್ಕಳನ್ನು ಶಾಲೆಗೆ ಕಳಿಸಲು ಪರಿಪಾಟವಿಲ್ಲ ನಾನು ಮೊದ ಮೊದಲು ನಮ್ಮ ಜನಾಂಗದ ಹೆಂಗಸರಿಗೆ ಎಷ್ಟೇ ಬುದ್ದಿವಾದ ಹೇಳಿದರು ಕೇಳಲಿಲ್ಲ ನಾನು ತದನಂತರ ನನ್ನ ತಾಯಿ ಸಹಕಾರದಿಂದ ಮನೆ ಮನೆಗೆ ಹೋಗಿ ಜಾಗೃತಿ ಮೂಡಿಸಿ ಉಚಿತ ಶಿಕ್ಷಣ ಮತ್ತು ಉಚಿತ ಸಮ ವಸ್ತ್ರ, ಊಟ,ಪುಸ್ತಕ, ಇತ್ಯಾದಿ ಮತ್ತುಶೌಚಾಲಯದ ಸೌಕರ್ಯವನ್ನು ನನ್ನ ಶಾಲೆ ಹೊಂದಿದೆ

ಉಚಿತ ಪೂರೈಕೆ ಮಾಡುತ್ತೇವೆ ಎಂದು ಹೇಳಿದ ಮೇಲೆ ಮತ್ತುಅವರಿಗೆ ತೋರಿಸಿ ಖಾತ್ರಿ ಪಡಿಸಿದ ಮೇಲೆ ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸಿದರು.

> **ನೀವು ಶಾಲೆ ಸ್ಥಾಪಿಸಲು ಕಾರಣವೇನು?**
> **ನಮ್ಮ ಹಳ್ಳಿ ತುಂಬಾ ದುಸ್ಥಿತಿಯಲ್ಲಿತ್ತು ನಮ್ಮ ಹಳ್ಳಿ ಜನರಿಗೆ ತಮ್ಮ ಮಕ್ಕಳಿಗೆ ಶಾಲೆಗೆ ಕಳಿಸಬೇಕು ಎಂಬ ಪರಿಜ್ಞಾನವಿರಲಿಲ್ಲಾ ಅದು ಅವರ ತಪ್ಪಲ್ಲ ಏಕೆಂದರೆ ಊಟ ವಸತಿ ನೀರಿಗೆ ಪರೆದಾಡುವ ನಮ್ಮ ಜನಾಂಗ ಮಕ್ಕಳಿಗೆ ಶಿಕ್ಷಣ ಕೊಡೆಸುವ ತಿಳುವಳಿಕೆ ಅಸಹಜ ಇದು ನನನ್ನು ಹಗಲು ಇರುಳು ಕಾಡಿತು ನಾನು ಹೇಗೂ ಶಿಕ್ಷಣ ಪಡೆದ ನಂತರ ಎಲ್ಲಾ ನನ್ನ ಸುತ್ತ ಮುತ್ತಲಿನ ಬುಡಕಟ್ಟು ಜನ ರ ಮಕ್ಕಳಿಗೆ ಶಿಕ್ಷಣ ನೀಡಬೇಕೆಂಬ ಮಹದಾಸೆ ಮತ್ತು ಜವಾಬ್ದಾರಿ ನನನ್ನು ಶಾಲೆಯೊಂದನ್ನು ಸ್ಥಾಪಿಸಲು ಕಾರಣವಾಯಿತು.**


**ನೀವು ನಮ್ಮ ಕಾಲೇಜಿಗೆ ಭೇಟಿ ನೀಡಲು ಕಾರಣ ಮತ್ತು ಅನಿಸಿಕೆ?:** ನಾನು ಹೋದ ಬಾರಿ ಬೆಂಗಳೂರಿಗೆ ಬಂದಾಗ ಡಾ. ರಾಣಾಪ್ರತಾಪ್ ರೆಡ್ಡಿ ಯವರು ಒಂದು ಸಮಾರಂಭದಲ್ಲಿ ಪರಿಚಯವಾದರು ನಾನು ಅವರ ಬಗ್ಗೆ ಮತ್ತು ಅವರ ಕಾಲೇ ಜಿನ ಬಗ್ಗೆ ವಿಚಾರಿಸಿದ ಮೇಲೆ ನಾನು ನಿಮ್ಮ ವಿದ್ಯಾ ಸಂಸ್ಥೆಯನ್ನು ನೋಡಲು ತವಕ ಉಂಟಾಯಿತು ಇಲ್ಲ ಬಂದ ಮೇಲೆ ನನಗೆ ಇಲ್ಲಿನ ವಾತಾವರಣ ಇಲ್ಲಿನ ಉನ್ನತ ಶಿಕ್ಷಣ ಕಲಿಸುವ ರೀತಿ ಎಲ್ಲವೂ ನನಗೆ ಇಷ್ಟವಾಯಿತು.

ನನಗೆ ಈ ಎಂ ಎಸ್ ಇಂಜಿನಿಯರಿಂಗ್ ಕಾಲೇಜ್ ನಮ್ಮ ಮಹಾಕವಿ ರವೀಂದ್ರನಾಥ್ ಟಾಗೋರ್'ರ ಶಾಂತಿ ನಿಕೇತನದಂತೆ ಭಾಸವಾಗುತ್ತಿದೆ ಮತ್ತು ಈ ಭೇಟಿ ತುಂಬಾ ಖುಷಿ ತಂದಿದೆ ನಾನು ಮುಂದೆ ಇದೆ ರೀತಿ ಒಂದು ಕಾಲೇಜ್ ಸ್ಥಾಪಿಸುವ ಆಸೆ ನನಗೆ ಬಂದಿದೆ.

ಬಾಸ್ಮತಿ ಗಾರ್ಗ್ಯ ಅವರ ಜೀವನದ ಅನುಭವಗಳನ್ನು ಕೇಳುವುದು ನಿಜವಾಗಿಯೂ ಸ್ಫೂರ್ತಿದಾಯಕವಾಗಿತ್ತು. ಇದು ನಿಸ್ವಾರ್ಥತೆ ಮತ್ತು ಸಮುದಾಯ ಹಾಗೂ ಸ್ಥಳೀಯ ಅಭಿವೃದ್ಧಿ ಮಹತ್ವ, ಮಹಿಳಾ ಸಬಲೀಕರಣ,ಕಲಿಕೆ, ಶಿಕ್ಷಣ, ಕುರಿತು ಅಮೂಲ್ಯವಾದ ಜೀವನ ಪಾಠಗಳನ್ನು ನನಗೆ ಈ ಬಾತ್ ಚೀತ್ ನೀಡಿದೆ.

# ಹುಬ್ಬಳ್ಳಿಯಲ್ಲಿ ಯಾಜ್ಞವಲ್ಕ್ಯ ಅನುಯಾಯಿಗಳ ಸಮ್ಮೇಳನ

• ಉದಯವಾಹಿನಿ, ಕಲಬುರಗಿ



ಉದಯವಾಹಿನಿ ಚಿತ್ರ

ಅಹಂ ಬ್ರಹ್ಮಾಸ್ಮಿ, ಯಾಜ್ಞವಲ್ಕ್ಯ ಚಕ್ರ ನಾಳೆಯಿಂದ ಹುಬ್ಬಳ್ಳಿಯಲ್ಲಿ ಶ್ರೀಯೋಗೀಶ್ವರ ಯಾಜ್ಞವಲ್ಕ್ಯ ಬ್ರಹ್ಮರ್ಷಿ ಅನುಯಾಯಿಗಳ ರಾಜ್ಯ ಸಮ್ಮೇಳನ.

ಅಹಂ ಬ್ರಹ್ಮಾಸ್ಮಿ ಎಂಬ ತತ್ತ್ವಜ್ಞಾನ ಮತ್ತು ಆಧ್ಯಾತ್ಮಿಕತೆಯ ಶ್ರೇಷ್ಠ ಸಂದೇಶ, ಮಾನವನ ಪರಮ ಗುರಿ ಮೋಕ್ಷ ಸಾಧನೆಯ ಶ್ರೇಷ್ಠತೆಯನ್ನು ಪ್ರತಿಪಾದಿಸಿದ ಬ್ರಹ್ಮಾವಾಂಶ ಸಂಭೂತರು ಸನಾತನ ಧರ್ಮವನ್ನು ರಕ್ಷಿಸಿ ಬೆಳೆಸಿ, ಲೋಕ ಕಲ್ಯಾಣಕರಾಗಿದ್ದರು ಮಹರ್ಷಿ ಯಾಜ್ಞವಲ್ಕ್ಯರು.

ಯಾಜ್ಞವಲ್ಕ್ಯರ 95 ವರ್ಷದ ಚಕ್ರ ಎಂಬುದು ಚಾಂದ್ರಮಾನ ಮತ್ತು ಸೌರಮಾನಗಳ ಸಮನ್ವಯ ಸಾಧಿಸುವ ವಿಧಾನವನ್ನು ಪ್ರಸ್ತಾಪಿಸಿದ್ದ ಪ್ರಾಚೀನ ಭಾರತೀಯ ಋಷಿ ಯಾಜ್ಞವಲ್ಕ್ಯರು, ಸೂರ್ಯ ಮತ್ತು ಚಂದ್ರನ ಸಂಬಂಧಿತ ಸ್ಥಾನಗಳು ಕಾಲಕಾಲಕ್ಕೆ ಬದಲಾಗುತ್ತವೆ, ಆದರೆ ಪ್ರತಿ 95 ವರ್ಷಗಳ ನಂತರ, ಅವು ಒಂದೇ ಸ್ಥಾನಕ್ಕೆ ಮರಳುತ್ತವೆ ಎಂದು ಶತಪಥ ಬ್ರಾಹ್ಮಣ ಮತ್ತು ಶುಕ್ಲ ಯಜುರ್ವೇದದಲ್ಲಿ ಉಲ್ಲೇಖವಾದ ಖಗೋಳಶಾಸ್ತ್ರದ ಮತ್ತು ಗಣಿತ ಶಾಸ್ತ್ರದ ಅದ್ಭುತ ಉದಾಹರಣೆ.

ಶುಕ್ಲ ಯಜುರ್ವೇದ ಪ್ರವರ್ತಕರು ಭಾರತೀಯ ಧಾರ್ಮಿಕ ಜಗತ್ತಿನಲ್ಲಿ ಬ್ರಹ್ಮರ್ಷಿ ಯಾಜ್ಞವಲ್ಕ್ಯರದ್ದು ಒಂದು ವಿಶಿಷ್ಟ ಸ್ಥಾನ. ಯಾಜ್ಞವಲ್ಕ್ಯರನ್ನು ಜ್ಞಾನದ ಪ್ರತೀಕವೆಂದು ಪರಿಗಣಿಸಲಾಗುತ್ತದೆ ಮತ್ತು ಭಾರತೀಯ ತತ್ತ್ವಶಾಸ್ತ್ರದ ಪಿತಾಮಹನಾಗಿ ಶ್ಲಾಘಿಸಲಾಗುತ್ತದೆ. ಶ್ರೀಯಾಜ್ಞವಲ್ಕ್ಯ ಗುರುಗಳ ಬಗ್ಗೆ ಸಂಪೂರ್ಣ ಜ್ಞಾನ ಹಾಗೂ ಅವರು ಕೊಡುಗೆಗಳನ್ನು ಇಂದಿನ ಯುವ ಪೀಳಿಗೆಗೆ ಮನವರಿಕೆ ಮಾಡಿ ಕೊಡುವ ಉದ್ದೇಶದಿಂದ ಶ್ರೀಯೋಗೀಶ್ವರ ಯಾಜ್ಞವಲ್ಕ್ಯ ಬ್ರಹ್ಮರ್ಷಿ ಅನುಯಾಯಿಗಳ ರಾಜ್ಯ ಸಮ್ಮೇಳನವನ್ನು ಡಿಸೆಂಬರ್ 28 ಶನಿವಾರ ಮತ್ತು ಡಿಸೆಂಬರ್ 29 ಭಾನುವಾರದಂದು ಹುಬ್ಬಳ್ಳಿಯ ಗೋಕುಲ್ ರಸ್ತೆಯ, ಗೋಕುಲ್ ಗಾರ್ಡನನಲ್ಲಿ ಶ್ರೀಯೋಗೀಶ್ವರ ಯಾಜ್ಞವಲ್ಕ್ಯ ಸೇವಾ ಟ್ರಸ್ಟ್ ವತಿಯಿಂದ ಆಯೋಜಿಸಲಾಗಿದೆ. ಶ್ರೀಮತ್ಕಣ್ವ ಮಠ ಹುಣಸಿಹೊಳೆಯ ಪೀಠಾಧಿಪತಿಗಳಾದ ಪರಮಪೂಜ್ಯ ಶ್ರೀ ಶ್ರೀ 1008 ಶ್ರೀ ವಿದ್ಯಾಕಣ್ವವಿರಾಜ ತೀರ್ಥ ಶ್ರೀಪಾದಂಗಳವರು ದಿವ್ಯ ಸಾನಿಧ್ಯದಲ್ಲಿ ಧರ್ಮ ಧ್ವಜಾರೋಹಣ, ಶ್ರೀಯೋಗೀಶ್ವರ ಯಾಜ್ಞವಲ್ಕ್ಯ ಬ್ರಹ್ಮರ್ಷಿ ಪೂಜೆ, ಮೋದಕ ಗಣಪತಿ ಹೋಮ ನಡೆಯಲಿದೆ ಹಾಗೂ ಸಂಜೆ ಬೃಹತ್ ಶೋಭಾಯಾತ್ರೆ ಆಯೋಜಿಸಲಾಗಿದೆ.

ಕನಕಶ್ರೀ ಪ್ರಶಸ್ತಿ ಪುರಸ್ಕೃತ ಸಾಹಿತಿ ಶ್ರೀ ಸ್ವಾಮಿರಾವ ಕುಲಕರ್ಣಿ ಹಾಗೂ ಪತ್ರಕರ್ತರು, ಅಂಕಣಕಾರರಾದ ಶ್ರೀ ಶ್ರೀನಿವಾಸ್ ಸಿರನೂರಕರ್ ಅವರು ಸಮ್ಮೇಳನದಲ್ಲಿ ವಿಶೇಷ ಉಪನ್ಯಾಸ ನೀಡಲಿದ್ದಾರೆ,

ನಾಡಿನ ವಿವಿಧ ಮಠಾಧೀಶರು ದಿವ್ಯಸಾನಿಧ್ಯ ವಹಿಸಲಿದ್ದು, ಕಲಬುರಗಿಯ ಶ್ರೀಯೋಗೀಶ್ವರ ಯಾಜ್ಞವಲ್ಕ್ಯ ಸೇವಾ ಸಮಿತಿ ಅಧ್ಯಕ್ಷರಾದ ಮಲ್ಹಾರಾವ ಗಾರಂಪಳ್ಳಿ, ಕಾರ್ಯದರ್ಶಿ ರಾಘವೇಂದ್ರ ವಕೀಲ, ಮುಖಂಡರಾದ ಶಾಮಾಚಾರ್ಯ ಬೈಚಬಾಳ್, ಅಶೋಕ್ ಮಳ್ಳಿ, ಭೀಮಸೇನರಾವ್ ಸಿಂಧಗೇರಿ, ವಿನುತ ಎಸ್ ಜೋಶಿ, ವೆಂಕಟೇಶ್ ಕುಲಕರ್ಣಿ, ಸುಧೀರ್ ಕುಲಕರ್ಣಿ, ವಾಸುದೇವರಾವ್ ಸಿಂಧಗೇರಿ, ರಾಮಚಂದ್ರ ಸೂಗೂರ, ರಾಘವೇಂದ್ರ ಚಾಮನಾಳ, ವಾಸುದೇವರಾವ ಕುಳಗೇರಿ, ಅನಿಲ ಕುಲಕರ್ಣಿ, ಮಂಜುನಾಥ್ ಕುಲಕರ್ಣಿ, ಅನಂತಕೃಷ್ಣಾ ವಕೀಲ ಸೇರಿದಂತೆ ವಿಪ್ರ ಮುಖಂಡರು, ಯುವಕರು ಹಾಗೂ ಅನುಯಾಯಿಗಳು ಭಾಗಿಯಾಗಲಿದ್ದಾರೆಂದು ಸಮ್ಮೇಳನದ ಮಾಧ್ಯಮ ಪ್ರತಿನಿಧಿ ವಿನುತ ಎಸ್ ಜೋಶಿ ತಿಳಿಸಿದ್ದಾರೆ.

## ಸಾಮಾಜಿಕ ಕಳಕಳಿ



ಹೆಚ್.ಎಸ್.ಪ್ರತಿಮಾ ಹಾಸನ್
ಸಾಹಿತಿ,ಶಿಕ್ಷಕಿ,ಸಾಮಾಜಿಕ ಚಿಂತಕಿ.ಹಾಸನ

• ಉದಯವಾಹಿನಿ, ವಿಶೇಷ

**ದಿನಕ್ಕೊಂದು ಮುಕ್ತಕ -62**



ಬರಹವನು ಸಂಗಾತಿ ನನಗೆಂದು ತಿಳಿದಿರಲು
ಅರಿವಿನಲಿ ದೀಪವನು ಬೆಳಗಿಸುತ್ತಾ
ಬರಿದಾದ ಬದುಕಿನಲಿ ಸಂತೋಷ ಮೂಡಿಸಲು
ಜರಿಯದಿರು ಯಾವುದನು ಲಕ್ಷ್ಮಿದೇವಿ....

**ಭಾವಾರ್ಥ :** ಬರಹವನ್ನು ಕೆಲವರು ಎಷ್ಟರಮಟ್ಟಿಗೆ ಹಚ್ಚಿಕೊಂಡಿರುತ್ತಾರೆ ಎಂದರೆ ಅದು ಜೀವನದಲ್ಲಿ ಒಂದು ಮುಖ್ಯವಾದ ಪಾತ್ರವನ್ನು ವಹಿಸುವ ರೀತಿಯಲ್ಲಿ ಹಚ್ಚಿಕೊಂಡಿರುತ್ತಾರೆ. ಬರಹವನ್ನೇ ಸ್ನೇಹಿತ, ತನ್ನ ಜೀವನದ ಸಂಗಾತಿ ಎಂಬಂತೆ ವರ್ತಿಸುತ್ತಾರೆ. ಬಹಳಷ್ಟು ಪುಸ್ತಕವನ್ನು ಓದುತ್ತ ಜ್ಞಾನವನ್ನು ಪಡೆಯುತ್ತಾ ದೀಪವನ್ನು ಹಚ್ಚಿ ಬೆಳಕನ್ನು ಪಡೆಯುವ ರೀತಿಯಲ್ಲಿ ಹೊಸ ಚೈತನ್ಯವನ್ನು ಪಡೆಯುತ್ತಾರೆ. ಬರಿದಾದ ಬದುಕಿನಲ್ಲಿ ಸಂತೋಷವನ್ನು ಮೂಡಿಸಿಕೊಳ್ಳಲು ಯಾವುದೇ ರೀತಿಯ ವಿಚಾರ ಗಳಿಗೂ ಜರಿಯದಂತೆ ಪ್ರೀತಿಯಿಂದ ವರ್ತಿಸುತ್ತಾರೆ. ಎಲ್ಲರೊಂದಿಗೂ ಹೊಂದಿಕೊಳ್ಳುತ್ತಾ ಬಾಳುತ್ತಾರೆ. ಬದುಕು ಎಂಬುದು ಬಹಳ ಅಮೂಲ್ಯವಾದದ್ದು ಎಂಬುದನ್ನು ಅರಿತಿರುತ್ತಾರೆ. ಬರಹವನ್ನು ತನ್ನ ಜೀವನದಲ್ಲಿ ಒಂದು ಪ್ರಮುಖ ಹಂತದ ಪಾತ್ರವನ್ನು ನೀಡಿ ಬಹಳಷ್ಟು ಪ್ರೀತಿಸುತ್ತಾರೆ.

# ಮದ್ಯಪಾನದಿಂದ ಹಾನಿಗೊಳಗಾದ ಲಿವರ್ ಗುಣಪಡಿಸುವ ವಿಶಿಷ್ಟ ವಿಧಾನ

• ಉದಯವಾಹಿನಿ, ವಿಶೇಷ



ಮದ್ಯಪಾನ ಮಾಡುವವರ ಸಂಖ್ಯೆ ದಿನದಿಂದ ದಿನಕ್ಕೆ ವೇಗವಾಗಿ ಹೆಚ್ಚುತ್ತಿದೆ. ಪುರುಷರ ಹೊರತಾಗಿ ಈ ಹಾನಿಕಾರಕ ಅಭ್ಯಾಸವು ಮಹಿಳೆಯರಿಗೂ ಪ್ರಿಯವಾಗುತ್ತಿದೆ. ಹಬ್ಬ ಹರಿದಿನಗಳಲ್ಲಿ ಪ್ರತಿ ವರ್ಷವೂ ಮದ್ಯ ಮಾರಾಟ ದಾಖಲೆಗಳನ್ನು ಮುರಿಯುತ್ತದೆ.

ಒಂದು ಹನಿ ಆಲೋಹಾಲ್ ಅನೇಕ ರೀತಿಯ ಕ್ಯಾನ್ಸರ್‌ಗೆ ಕಾರಣವಾಗಬಹುದು ಎಂದು ವಿಶ್ವ ಆರೋಗ್ಯ ಸಂಸ್ಥೆ ಎಚ್ಚರಿಸಿದೆ ಆಲೊಹಾಲ್ಯುಕ್ತ ಕೊಬ್ಬಿನ ಯಕೃತ್ತು, ಪಿತ್ತಜನಕಾಂಗದ ಹಾನಿ ಮತ್ತು ಯಕೃತ್ತಿನ ಸಿರೋಸಿಸ್ ಆಲ್ಕೋಹಾಲ್‌ನಿಂದ ಉಂಟಾಗುವ ಸಾಮಾನ್ಯ ಕಾಯಿಲೆಗಳಾಗಿವೆ. ಇವುಗಳನ್ನು ಎಸ್ಮಸ್ ಅಸ್ವಸ್ಥತೆಗಳು ಎಂದೂ ಕರೆಯುತ್ತಾರೆ ಮತ್ತು ಅವುಗಳಿಗೆ ಯಕೃತ್ತಿನ ಕಸಿ ಮಾಡುವ ಅಗತ್ಯವಿರುವಷ್ಟು ಅಪಾಯಕಾರಿ. ಆಲೊಹಾಲ್‌ನ ಮೊದಲ ಹನಿ ಯಕೃತ್ತಿಗೆ ಹಾನಿಯನ್ನುಂಟುಮಾಡುತ್ತದೆ. ಆಲೊಹಾಲ್ ಅನ್ನು ಹೆಚ್ಚು ಸಮಯ ಸೇವಿಸಿದರೆ ಅದು ಹೆಚ್ಚು ಹಾನಿಯನ್ನುಂಟುಮಾಡುತ್ತದೆ. ಆದರೆ ಆಯುರ್ವೇದದ ಸಹಾಯದಿಂದ ಈ ಹಾನಿಯನ್ನು ಸುಧಾರಿಸಬಹುದು. ಇದರ


> **10 ಗ್ರಾಂ ಖರ್ಜೂರ**
> **10 ಗ್ರಾಂ ಒಣದ್ರಾಕ್ಷಿ ಕೋಕಂ**
> **10 ಗ್ರಾಂ ಹುಣಸೆಹಣ್ಣು 2 ಗ್ರಾಂ ದಾಳಿಂಬೆ ಬೀಜಗಳು**
> **10 ಗ್ರಾಂ ಬೆಟ್ಟದ ನೆಲ್ಲಿಕಾಯಿ**
> **10 ಗ್ರಾಂ ಮೇಲೆ ಹೇಳಿದ ಎಲ್ಲಾ ಪದಾರ್ಥಗಳನ್ನು ಚೆನ್ನಾಗಿ ರುಬ್ಬಿಕೊಳ್ಳಿ. ಪೇಸ್ಟ್ ರೀತಿ ಆದಾಗ ಅರ್ಧ ಲೀಟರ್ ನೀರಿಗೆ ಹಾಕಿ ಕರಗಿಸಿ.**
> **ಪೇಸ್ಟ್ ಹಾಕಿರುವ ನೀರನ್ನು ದಿನವಿಡೀ 50-50 ಮಿಲಿ ಕುಡಿಯಿರಿ. ಯಕೃತ್ತಿನ ಹಾನಿ 3 ದಿನಗಳಲ್ಲಿ ಕಡಿಮೆಯಾಗಲು ಪ್ರಾರಂಭಿಸುತ್ತದೆ.**

ಬಗ್ಗೆ ಆಯುರ್ವೇದ ತಜ್ಞ ಡಾ.ತನ್ಮಯ್ ಗೋಸ್ವಾಮಿ ತಿಳಿಸಿದ್ದಾರೆ.

# ವೈಕುಂಠ ಏಕಾದಶಿಗೆ ಮಹತ್ವ, ಆಚರಣೆ ಕುರಿತ ಮಾಹಿತಿ

• ಉದಯವಾಹಿನಿ, ವಿಶೇಷ

**ವೈಕುಂಠ ಏಕಾದಶಿ ಪೂಜಾ ವಿಧಿ.!**



ಹಿಂದೂ ಧರ್ಮದಲ್ಲಿ ವೈಕುಂಠ ಏಕಾದಶಿಗೆ ವಿಶೇಷ ಮಹತ್ವವಿದೆ. ಈ ಶುಭ ದಿನದಂದು ವೈಕುಂಠದ ಶ್ರೀವಿಷ್ಣು ಮತ್ತು ತಾಯಿ ಲಕ್ಷ್ಮಿಯನ್ನ ಪೂಜಿಸುವ ಸಂಪ್ರದಾಯವಿದೆ. ಇನ್ನು ಈ ದಿನ ವೈಕುಂಠ ಏಕಾದಶಿಯ ಉಪವಾಸ ಆಚರಿಸಲಾಗುತ್ತದೆ. ಈ ವ್ರತವನ್ನ ಆಚರಿಸುವುದರಿಂದ ವ್ಯಕ್ತಿಯು ಜನನ ಮತ್ತು ಮರಣದ ಚಕ್ರದಿಂದ ಮುಕ್ತಿ ಪಡೆಯುತ್ತಾನೆ.ಧಾರ್ಮಿಕ ಗ್ರಂಥಗಳ ಪ್ರಕಾರ, ವೈಕುಂಠ ಲೋಕದ ಮುಖ್ಯ ದ್ವಾರವು ಈ ದಿನ ತೆರೆದಿರುತ್ತದೆ.ವೈದಿಕ ಲೆಕ್ಕಾಚಾರಗಳ ಪ್ರಕಾರ, ವೈಕುಂಠ ರೇಕಾದಶಿಯು ಧನು ರಾಶಿಯಲ್ಲಿ ಸೂರ್ಯ ದೇವರ ಸಂಕ್ರಮಣದ ಸಮಯದಲ್ಲಿ ಬರುತ್ತದೆ. ಅನೇಕ ಬಾರಿ ಇದನ್ನು ಪುಷ್ಯ ಮಾಸದ ಶುಕ್ಲ ಪಕ್ಷದ ಏಕಾದಶಿ ದಿನಾಂಕದಂದು ಆಚರಿಸಲಾಗುತ್ತದೆ. ವೈಕುಂಠ ಏಕಾದಶಿಯಂದು ಭಗವಂತ ಶ್ರೀಹರಿಯನ್ನ ಭಕ್ತಿಯಿಂದ ಪೂಜಿಸಲಾಗುತ್ತದೆ. ಹಾಗಿದ್ರೆ, 2025ರಲ್ಲಿ ವೈಕುಂಠ ಏಕಾದಶಿ ಯಾವಾಗ, ಈ ದಿನದ ಪೂಜೆಯ ವಿಧಾನ ಏನು ಎಂದು ತಿಳಿಯೋಣ.ವೈಕುಂಠ ಏಕಾದಶಿ ಯಾವಾಗ. ವೈದಿಕ ಕ್ಯಾಲೆಂಡರ್ ಪ್ರಕಾರ, ಪುಷ್ಯ ಮಾಸದ ಶುಕ್ಲ ಪಕ್ಷದ ಏಕಾದಶಿ ದಿನಾಂಕವು ಜನವರಿ 9ರಂದು ಮಧ್ಯಾಹ್ನ 12:22ಕ್ಕೆ ಪ್ರಾರಂಭವಾಗಲಿದ್ದು, ಜನವರಿ 10ರಂದು ಬೆಳಿಗ್ಗೆ 10:19ಕ್ಕೆ ಕೊನೆಗೊಳ್ಳುತ್ತದೆ. ಇನ್ನು ಉದಯ ತಿಥಿಯ ಪ್ರಕಾರ ಜನವರಿ 10 ರಂದು ವೈಕುಂಠ ಏಕಾದಶಿ ಉಪವಾಸವನ್ನ ಆಚರಿಸಲಾಗುತ್ತದೆ. ವೈಕುಂಠ ಏಕಾದಶಿ 2025 ಉಪವಾಸ ವ್ರತ ಸಮಯ. ವೈಕುಂಠ ಏಕಾದಶಿ ಉಪವಾಸವನ್ನ ಜನವರಿ 10 ರಂದು ಶುಕ್ರವಾರ ಆಚರಿಸಲಾಗುತ್ತದೆ. ಈ ದಿನ ವಿಧಿವಿಧಾನಗಳ ಪ್ರಕಾರ ವಿಷ್ಣು ಮತ್ತು ಲಕ್ಷ್ಮಿ ದೇವಿಯನ್ನು ಪೂಜಿಸಿ. ಸಂಜೆ ಆರತಿ ಮಾಡಿ ನಂತರ ಹಣ್ಣುಗಳನ್ನ ಸೇವಿಸಿ. ರಾತ್ರಿ ಜಾಗರಣೆ ಮಾಡಿ ವಿಷ್ಣು ದೇವರನ್ನ ಪೂಜಿಸಿ. ಮರುದಿನ, ಎಂದಿನಂತೆ ಪೂಜೆಯನ್ನ ಮಾಡುವ ಮೂಲಕ ಉಪವಾಸವನ್ನ ಮುರಿಯಬೇಕು.

- **ವೈಕುಂಠ ಏಕಾದಶಿಯ ದಿನ ಬ್ರಹ್ಮ ಮುಹೂರ್ತದಲ್ಲಿ ಏಳಿರಿ.**
- **ಎಚ್ಚರಗೊಂಡು ಭಗವಂತ ವಿಷ್ಣುವನ್ನ ಧ್ಯಾನಿಸುವ ಮೂಲಕ ನಿಮ್ಮ ದಿನ ಪ್ರಾರಂಭಿಸಿ. ಇದರ ನಂತರ ಮನೆಯನ್ನ ಸ್ವಚ್ಛಗೊಳಿಸಿ ಗಂಗಾಜಲವನ್ನ ಸಿಂಪಡಿಸಿ.**
- **ನಂತರ ಸಾಮಾನ್ಯ ನೀರಿನಲ್ಲಿ ಗಂಗಾಜಲವನ್ನು ಬೆರೆಸಿ ಸ್ನಾನ ಮಾಡಿ. ಸ್ನಾನದ ಬಳಿಕ ಹಳದಿ ಬಣ್ಣದ ಬಟ್ಟೆಗಳನ್ನು ಧರಿಸಿ. ಇದರ ನಂತರ, ತಾಮ್ರದ ಪಾತ್ರೆಯಿಂದ ಸೂರ್ಯ ದೇವರಿಗೆ ನೀರನ್ನ ಅರ್ಪಿಸಿ.**
- **ಪಂಚೋಪಚಾರ ಮಾಡಿದ ನಂತರ ವಿಷ್ಣುವನ್ನ ಆರಾಧಿಸಿ.**
- **ಪೂಜೆಯ ಸಮಯದಲ್ಲಿ ವಿಷ್ಣುವಿಗೆ ಹಣ್ಣುಗಳು, ಹೂವುಗಳು ಇತ್ಯಾದಿಗಳನ್ನು ಅರ್ಪಿಸಿ. ಕೊನೆಯಲ್ಲಿ, ಆರತಿ ಮಾಡಿ , ಮನೆಯ ಸಂತೋಷ, ಸಮೃದ್ಧಿಗಾಗಿ ಪ್ರಾರ್ಥಿಸಿ.**

ಉಪವಾಸ ಮುರಿದ ನಂತರ ಬ್ರಾಹ್ಮಣರಿಗೆ ದಾನ ಮಾಡಿ. ವೈಕುಂಠ ಏಕಾದಶಿಯ ಉಪವಾಸವನ್ನ ಜನವರಿ 11 ರಂದು ಬೆಳಿಗ್ಗೆ 07:21 ರಿಂದ 8:21 ರೊಳಗೆ ಮುರಿಯಬಹುದು.


# ಬಿರುಸಿನ ಪ್ರಚಾರದಲ್ಲಿ ಶೃಂಗಾರಗೌಡ ನಾರಾಯಣಸ್ವಾಮಿ ಫೈನಲ್

## ಕರ್ನಾಟಕ ಬ್ಯಾಂಕ್ ತಾಲ್ಲೂಕಿನ ಬ್ಯಾಂಕ್ ಆಗಿಸುವಾಸೆ, ಗ್ರಾಮಗಳಲ್ಲಿನ ಸದಸ್ಯರ ಮನೆ ಮನೆಗಳಿಗೆ ತೆರಳಿ ಮತಯಾಚನೆ

• ಉದಯವಾಹಿನಿ, ಮುದ್ದೇಬಿಹಾಳ

ದಿ ಕರ್ನಾಟಕ ಕೋ ಆಪರೇಟಿವ್ ಬ್ಯಾಂಕ್‌ನ ಚುನಾವಣೆ ಹತ್ತಿರ ಬರುತ್ತಿದ್ದಂತೆ ಚುನಾವಣೆ ಕಣದಲ್ಲಿರುವ ಉಮೇದುವಾರರು ಸದಸ್ಯರ ಮತ ಪಡೆಯಲು ಭರ್ಜರಿ ಪ್ರಚಾರ ದಲ್ಲಿ ತೊಡಗಿದ್ದಾರೆ.

ದಿ ಶೃಂಗಾರಗೌಡ್ರು ಹಾಗೂ ಎ ನಾರಾಯಣ ಸ್ವಾಮಿ ಅವರ ನೇತೃತ್ವದಲ್ಲಿ ಬಂದ ಹಾಲಿ ಅಧ್ಯಕ್ಷ ಸತೀಶ್ ಕುಮಾರ್ ಓಸ್ವಾಲ್ ಬಣದ 9 ಅಭ್ಯರ್ಥಿಗಳು ಮುದ್ದೇಬಿಹಾಳ ಪಟ್ಟಣ ಸೇರಿದಂತೆ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿಯ ಸದಸ್ಯರ ಮನೆ ಮನೆ ಗಳಿಗೆ ತೆರಳಿ ಮತಯಾಚನೆ ಮಾಡಿದರು. ಪಟ್ಟಣದ ಸಾಯಿನಗರ, ಬಸವನ ಗರ, ಸಂಗಮೇ ಶ್ವರ ನಗರ ದಲ್ಲಿ ಗುರುವಾರ ಬೆಳಗ್ಗೆ




**ಫೈನಲ್‌ನಲ್ಲಿ ಒಂಭತ್ತು ಅಭ್ಯರ್ಥಿಗಳು**

ಮತಪ್ರಚಾರದ ವೇಳೆ ಮಾಧ್ಯಮ ಜೊತೆ ಮಾತನಾಡಿದ ಬ್ಯಾಂಕ್‌ನ ಹಾಲಿ ಅಧ್ಯಕ್ಷ ಉಮೇದುವಾರ ಸತೀಶ್ ಕುಮಾರ್ ಓಸ್ವಾಲ್ ದಿವಂಗತ ಎಸ್. ಜಿ. ಪಾಟೀಲ್ ಶೃಂಗಾರ ಗೌಡರ, ಎ ನಾರಾಯಣಸ್ವಾಮಿ ಅವರ ನೇತೃತ್ವದ ನಮ್ಮ ಪೆನಾಲ್‌ಗೆ ಈ ಹಿಂದಿನಿಂದಲೂ ಅಭೂತಪೂರ್ವ ಗೆಲುವನ್ನು ಬ್ಯಾಂಕ್ ಎಲ್ಲಾ ಸದಸ್ಯರು ಒದಗಿಸಿಕೊಟ್ಟಿದ್ದಾರೆ ಈಗ ಅಗಲಿದ ಹಿರಿಯರ ಅನುಪಸ್ಥಿತಿಯಲ್ಲಿ ಮತ್ತು ಸದ್ಯ ಇರುವ ಊರಿನ ಹಿರಿಯರ ಮಾರ್ಗದರ್ಶನದಲ್ಲಿ ನಾವು ಚುನಾವಣೆ ಕಣದಲ್ಲಿ ನಮ್ಮ ಪೆನಾಲ್‌ನಲ್ಲಿ 9 ಅಭ್ಯರ್ಥಿಗಳು ಇದ್ದೇವೆ ಎಂದರು.

**ಮತಯಾಚನೆ**

**ಪ್ರಚಾರದಲ್ಲಿ ಉಮೇದುವಾರರಾದ ಗುರಲಿಂಗಪ್ಪಗೌಡ ಪಾಟೀಲ್, ಸಿ ಎಲ್ ಬಿರಾದಾರ, ರಾಜಶೇಖರ ಕರಡ್ಡಿ, ಪ್ರಭುದೇವ ಕಲಬುರಗಿ, ನಿಂಗಪ್ಪ ಚಟ್ಟೇರ, ಅಜೀತ್ ನಾಗಠಾಣ, ಸಂಗನಗೌಡ ಬಿರಾದಾರ, ಚಂದ್ರಶೇಖರ ಸಜ್ಜನ ಹಾಗೂ ಅವರ ಪರವಾಗಿ ಮತಯಾಚನೆಯಲ್ಲಿ ಗಣೇಶ ಅನ್ನಗೌನಿ ಗುರುಸ್ವಾಮಿ ಬೂದಿ ಹಾಳಮಠ, ಸಂಗಮೇಶ ನಾವದಗಿ, ಮುರಳಿಕೃಷ್ಣ ಬಡ್ಡೂಡಗಿ, ಸುಭಾಷ್ ಬಿದರಕುಂದಿ, ಶ್ರೀಕಾಂತ್ ಹಿರೇಮಠ ಸೇರಿದಂತೆ ಅನೇಕರು ಮತಯಾಚನೆ ಮಾಡಿದರು.**

> **ಈಗಲೂ ಸಹ ಅಭೂತಪೂರ್ವ ಗೆಲವು ನಮಗೆ ಬ್ಯಾಂಕ್ ಸದಸ್ಯರು ಆಶೀರ್ವಾದ ಮೂಲಕ ದೊರಕಿಸಿಕೊಡುವ ವಿಶ್ವಾಸವಿದೆ ಕರ್ನಾಟಕ ಬ್ಯಾಂಕ್ ನಮ್ಮ ಬ್ಯಾಂಕ್ ಎನ್ನುವ ಪರಿಕಲ್ಪನೆ ಪಟ್ಟಣದ ಜನರಲ್ಲಿ ಬರುವಂತೆ ನಾವು ಬ್ಯಾಂಕ್ ಸರ್ವಾಂಗೀಣ ಅಭಿವೃದ್ಧಿ ಮಾಡಿದ್ದೇವೆ ಈಗ ಈ ನಮ್ಮ ಕರ್ನಾಟಕ ಬ್ಯಾಂಕ್ ತಾಲ್ಲೂಕಿನ ಬ್ಯಾಂಕ್ ಮಾಡುವ ನಿಟ್ಟಿನಲ್ಲಿ ಬ್ಯಾಂಕ್ ಅನೇಕ ಶಾಖೆಗಳನ್ನು, ಬ್ಯಾಂಕ್‌ನ ಎಟಿಎಂ ಸಹ ಮಾಡಲಿದ್ದೇವೆ ಎಂದರು.**

ಈ ವೇಳೆ ಮಹಾಂತೇಶ ಬೂದಿಹಾಳಮಠ, ರಾಜೇಂದ್ರಗೌಡ ರಾಯಗೊಂಡ, ಶ್ರೀಶೈಲ್ ಪೂಜಾರಿ ಮಾತನಾಡಿ ಕರ್ನಾಟಕ ಬ್ಯಾಂಕ್ ಚುನಾವಣೆಯಲ್ಲಿ ಅವಿರೋಧ ವಾಗಿ ಶ್ರೀಮತಿ ವಿಜಯಲಕ್ಷ್ಮಿ ಬೂದಿಹಾಳ ಮಠ, ಶ್ರೀಮತಿ ರಕ್ಷೀತಾ ಬಿದರಕುಂದಿ, ಶ್ರೀಕಾಂತ್ ಚಲವಾದಿ ಶ್ರೀಶೈಲ್ ಪೂಜಾರಿ ಅವರನ್ನು ಅವಿರೋಧ ವಾಗಿ ಆಯ್ಕೆ ಮಾಡಲಾಗಿದೆ ಅದರಂತೆ ಈ ಪೆನಾಲ್‌ನ 9 ಅಭ್ಯರ್ಥಿಗಳು ಸಹ ಬಹುಮತದೊಂದಿಗೆ ಗೆಲು ವನ್ನು ಸಾಧಿಸಿಲಿದ್ದಾರೆ.

ಈಗಾಗಲೇ ಹಿಂದಿನ ಅವಧಿ ಯಲ್ಲಿ ಸತೀಶ್ ಓಸ್ವಾಲ್ ಸೇರಿದಂತೆ ಉಳಿದ ಎಲ್ಲಾ ಪೆನಲ್‌ನ ನಿರ್ದೇಶಕರು ಬ್ಯಾಂಕ್ ಅಭಿವೃದ್ಧಿ ಗೆ ಶ್ರಮಿಸಿದ್ದಾರೆ ಆ ಬಗ್ಗೆ ತಾಲ್ಲೂಕಿನ ಜನತೆಗೆ ಸಹ ತಿಳಿದಿದೆ ಊರಿನ ಜನರ ಆಶೀರ್ವಾದ ಹಿರಿಯರ ಮಾರ್ಗದರ್ಶನದಲ್ಲಿ ಈ ಪೆನಾಲ್‌ನ ಗೆಲುವನ್ನು ಸಾಧಿಸಲಿದೆ ಎಂದರು.

# ವಿಧವೆಯರಿಗೆ ಆತ್ಮಸ್ಥೈರ್ಯ ತುಂಬಲು ಗೌರವ ಸನ್ಮಾನ

• ಉದಯವಾಹಿನಿ, ಚಿಂಚೋಳಿ

ವಿಧವೆಯರಿಗೆ ಆತ್ಮಸ್ಥೈರ್ಯ ತುಂಬಲು ಅವ ರಿಗೆ ನೂತನ ಬಟ್ಟೆ ವಿತರಿಸಿ, ಕಾರ್ಯಕ್ರಮದ ಮೊದಲು ಪಂಕ್ತಿಯಲ್ಲಿ ಊಟಬಡಿಸಿ ಗೌರವಿಸಿ ಸನ್ಮಾನಿಸಿ ಸಮಾಜದಲ್ಲಿನ ಮೂಡನಂಬಿಕೆ ಹೊಗಲಾಡಿಸಲು ಸಣ್ಣ ಪ್ರಯತ್ನ ಮಾಡುತ್ತಿದ್ದೇನೆ ಎಂದು ಸಮಾಜ ಸೇವಕ ರಮೇಶ ಯಾಕಾಪೂರ ಹೇಳಿದರು.

**ಕಳೆದ 10 ವರ್ಷದಿಂದ ಆಚರಣೆ**




ಪಟ್ಟಣದ ಚಂದಾಪೂರದ ಯಾಕಾಪೂರ ನಿವಾಸದಲ್ಲಿ ದಿ.ಮರೆಮ್ಮ ಯಾಕಾಪೂರರವರ 69ನೇ ಪುಣ್ಯಸ್ಮರಣೆಯ ಅಂಗವಾಗಿ ಯಾಕಾಪೂರ ಕುಟುಂಬಸ್ಥರಿಂದ ಹಮ್ಮಿಕೊಂಡ ವಿಧವೆಯರಿಗೆ ಬಟ್ಟೆ ವಿತರಣೆ, ಗೌರವ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಮಾಜದಲ್ಲಿನ ಅನಿಷ್ಟ ಪದ್ಧತಿ ಹೊಗಲಾಡಿಸಲು ಕಳೆದ 10 ವರ್ಷದಿಂದ ದಿ.ಮರೆಮ್ಮ ಯಾಕಾಪೂರ ಪುಣ್ಯಸ್ಮರಣೆ ದಿನದಂದು ವಿಧವೆಯರಿಗೆ ನಿವಾಸಕ್ಕೆ ಅಹ್ವಾನಿಸಿ ಅವರಿಗೆ ನೂತನ ಬಟ್ಟೆ ವಿತರಿಸಿ ಕಾರ್ಯಕ್ರಮದ ಮೊದಲ ಪಂಕ್ತಿಯಲ್ಲಿ ಊಟಬಡಿಸಿ ಗೌರವ ಸನ್ಮಾನ ಮಾಡುವುದರ ಮೂಲಕ ಸಮಾಜಕ್ಕೆ ಒಳ್ಳೆಯ ಸಂದೇಶ ಸಾರುವ ನಿಟ್ಟಿನಲ್ಲಿ ಪ್ರತಿವರ್ಷ ಆಚರಣೆ ಮಾಡುತ್ತಿದ್ದೇನೆ ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಸ್ಥಾಯಿ ಸಮಿತಿಯ ಮಾಜಿ ಅಧ್ಯಕ್ಷರು ಜೆಡಿಎಸ್ ಹಿರಿಯ ಮುಖಂಡ ಸಂಜೀವನ್ ಯಾಕಾಪೂರ,

> **ಈಗಿನ ಸಮಾಜದಲ್ಲಿ ವಿಧವೆಯರಿಗೆ ಯಾವುದೇ ಶುಭ ಸಮಾರಂಭದಲ್ಲಿ ಅಹ್ವಾನ ನೀಡದೆ ಅವರನ್ನು ಕಡೆಗಣಿಸುವುದು ಮಹಿಳೆಯರಿಗೆ ಅವಮಾನ ಮಾಡಿದಂತೆ ಯಾಕೆಂದರೆ ಅವರ ಪತಿ ಮೃತರಾದರೆ ಮಹಿಳೆಗೆ ಯಾಕೆ ಶಿಕ್ಷೆ ನೀಡುವುದು ವಿಧವೆ ಮಹಿಳೆಯ ತಪ್ಪೆನ್ನು ಅವರಿಗೆ ಗೌರವ ನೀಡಬೇಕು ಅಂಥವರಿಗೆ ಆತ್ಮಸ್ಥೈರ್ಯ ತುಂಬಿ ಸಮಾಜದಲ್ಲಿ ಮೂಡನಂಬಿಕೆ ಹೊಗಲಾಡಿಸುವ ಪ್ರಯತ್ನ ಪ್ರತಿ ಯೊಬ್ಬರು ಮಾಡಿದರೆ ಅನಿಷ್ಟ ಪದ್ಧತಿ ದೂರ ಮಾಡಬಹುದು ಎಂದರು.**

ಶಕುಂತಲಾ ಎಸ್.ಯಾಕಾಪೂರ, ರಾಹುಲ್ ಯಾಕಾಪೂರ, ಸೇರಿದಂತೆ ಅನೇಕರಿದ್ದರು.

# ಶೂದ್ರರು, ಮಹಿಳೆಯರಿಗೆ ಘನತೆ ತಂದವರು ಅಂಬೇಡ್ಕರ್

• ಉದಯವಾಹಿನಿ, ಬೀದರ್

ದೇಶದಲ್ಲಿನ ಶೂದ್ರರು, ಮಹಿಳೆಯರನ್ನು ಮನುಷ್ಯರಾಗಿ ಕಂಡು ಅವರಿಗೆ ಘನತೆಯ ಬಂದು ತಂದುಕೊಟ್ಟ ಕೀರ್ತಿ ಡಾ.ಬಿ.ಆರ್. ಅಂಬೇಡ್ಕರ್ ಅವರಿಗೆ ಸಲ್ಲುತ್ತದೆ' ಎಂದು ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಘಟಕದ ಉಪಾಧ್ಯಕ್ಷೆ ಕೆ.ನೀಲಾ ತಿಳಿಸಿದರು.

ಭಾರತೀಯ ಬೌದ್ಧ ಮಹಾಸಭೆಯ ತಾಲ್ಲೂಕು ಹಾಗೂ ಜಿಲ್ಲಾ ಘಟಕದ ಸಹಯೋಗದಲ್ಲಿ ನಗರದ ಚನ್ನಬಸವ ಪಟ್ಟದ್ದೇವರು ರಂಗಮಂದಿರದಲ್ಲಿ ಏರ್ಪಡಿಸಿದ್ದ ಮಹಿಳಾ ವಿಮೋಚನಾ ದಿನಾಚರಣೆ ಹಾಗೂ ಸಮತಾ ಸೈನಿಕ ದಳದ ಸಮಾವೇಶದಲ್ಲಿ ಭಾಗವಹಿಸಿ ಮಾತನಾಡಿದರು. ನಿಕೃಷ್ಟವಾಗಿ ಕಾಣುತ್ತಿದ್ದ ಶೂದ್ರರಿಗೆ ಸ್ವಾಭಿಮಾನ ಬದುಕು ಸಿಕ್ಕಿದ್ದು ಅಂಬೇಡ್ಕರ್ ಅವರಿಂದ. ಮಹಿಳೆಯರನ್ನು ಅಮಾನುಷವಾಗಿ ಎರಡನೇ ದರ್ಜೆ ಪ್ರಜೆಯಾಗಿ ಕಾಣುತ್ತಿದ್ದರು.

ಅವರಿಗೆ ಪುರುಷರಷ್ಟೇ ಸಮಾನ ಅವಕಾಶಗಳನ್ನು ಕಲ್ಪಿಸಿ, ಮುಖ್ಯವಾಹಿನಿಗೆ ಬರಲು ಕಾರಣಕರ್ತರಾದವರು ಬಾಬಾ ಸಾಹೇಬರು ಎಂದು ಹೇಳಿದರು.




> **ಮಹಾಸಭೆಯ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯೆ ವೈಶಾಲಿ ಮೋರೆ ಉದ್ಘಾಟಿಸಿ, ಈ ದೇಶಕ್ಕೆ ಅಂಬೇಡ್ಕರ್ ಅವರು ಕೊಟ್ಟಿರುವ ಕೊಡುಗೆ ಅಮೋಘವಾದುದು. ತಳಸಮುದಾಯದವರು ಎಂದೂ ಅವರನ್ನು ಮರೆಯಬಾರದು. ಅವರು ಹಾಕಿಕೊಟ್ಟ ದಾರಿಯಲ್ಲಿ ಮುನ್ನಡೆಯಬೇಕೆಂದು ಹೇಳಿದರು.**


# ಅಭಿವೃದ್ಧಿಯಲ್ಲಿ ಸದಸ್ಯರ, ಅಧಿಕಾರಿಗಳ ಪಾತ್ರ ಹಿರಿದು

• ಉದಯವಾಹಿನಿ, ಭಾಲ್ಕಿ

ಗ್ರಾಮ ಪಂಚಾಯಿತಿಯ ಪ್ರಗತಿಯಲ್ಲಿ ಸರ್ವ ಸದಸ್ಯರ, ಅಧಿಕಾರಿಗಳ ಯೋಜನೆ, ಸಹಕಾರ ಪಾತ್ರ ಹಿರಿದು ಎಂದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಚಂದ್ರಕಾಂತ ಪುಲೆ ಹೇಳಿದರು. ತಾಲ್ಲೂಕಿನ ಹಲಬರ್ಗಾದಲ್ಲಿ ಗ್ರಾಮ ಪಂಚಾಯಿತಿ ಕಾರ್ಯದರ್ಶಿಯಾಗಿ ಬಡ್ತಿ ಪಡೆದಿರುವ ಅನಿತಾ ಕೆಪ್ಪೆ ಅವರನ್ನು ಸನ್ಮಾನಿಸಿ ಮಾತನಾಡಿದರು.

ಎಲ್ಲಾ ಗ್ರಾಮಗಳು ಅಭಿವೃದ್ಧಿ ಪಥದಲ್ಲಿ ಸಾಗಿ ದಾಗ ಮಾತ್ರ ದೇಶದ ತ್ವರಿತ, ಗುಣಾತ್ಮಕ ಪ್ರಗತಿ ಆಗಲು ಸಾಧ್ಯ ಎಂದರು.

ಸಿದ್ಧಗಂಗಾ ಮಠದ ಹಳೇ ವಿದ್ಯಾರ್ಥಿಗಳ, ಹಿತೈಷಿಗಳ ಸಂಘದ ಜಿಲ್ಲಾಧ್ಯಕ್ಷ ಶಿವಕುಮಾರ ಪಾಟೀಲ ತೇಗಂಪೂರ ಮಾತನಾಡಿದರು.




ಗ್ರಾಮ ಪಂಚಾಯಿತಿ ಸದಸ್ಯರಾದ ಶೋಭಾವತಿ ಶ್ರೀಮಾಳೆ, ರಜನಿಕಾ ಪಾಟೀಲ, ಶಿವಕಾಂತ ಮಹಾರುದ್ರ ದೊಡ್ಡಿ, ಅಂಜನಾ ಪಾಟೀಲ, ಕಾವೇರಿ ಪಾಟೀಲ, ಲಕ್ಷ್ಮಿ ಮಾರುತಿ ಸೂರ್ಯವಂಶಿ, ಮಂಜುನಾಥ್ ಪಾಟೀಲ, ಪಿಂಟು ಠಾಕೂರ್, ಮಹೇಶ ಪಾಟೀಲ ಸೇರಿದಂತೆ ಇತರರು ಇದ್ದರು.

# ಪ್ರತಿಭಾ ಕಾರಂಜಿ ಕಾರ್ಯಕ್ರಮ: ಕಾಟಾಚಾರಕ್ಕೆ ಆಚರಣೆ

• ಉದಯವಾಹಿನಿ,ಚಿಂಚೋಳಿ

ತಾಲ್ಲೂಕಾ ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮಕ್ಕೆ ಯಾರಿಗೂ ಅಹ್ವಾನ ನೀಡದೆ ಕಾಟಚಾರಕ್ಕೆ ಮಾಡಿ ಮುಗಿಸಿ ಉಧ್ಘಾಟನಾ ಕಾರ್ಯಕ್ರಮ ಜ್ಯೋತಿ ಬೆಳಗಿಸುವಾಗ ಮೇಣದ ಬತ್ತಿ ಇಲ್ಲದೆ ಕ್ಷೇತ್ರ ಶಿಕ್ಷಣಾ ಧಿಕಾರಿ ವಿ.ಲಕ್ಷ್ಮಯ್ಯ ಕಡ್ಡಿಪೆಟ್ಟಿಗೆಯಿಂದ ಜ್ಯೋತಿ ಬೆಳಗಿಸುವುದರ ಮೂಲಕ ಕಾಟಾಚಾರಕ್ಕೆ ಆಚರಣೆ ಮಾಡಿದರು.

ಪಟ್ಟಣದ ಹೊರವಲಯದಲ್ಲಿರುವ ಆದರ್ಶ ಮಹಾವಿದ್ಯಾಲಯದಲ್ಲಿ ಶಾಲಾ ಶಿಕ್ಷಣ ಇಲಾಖೆ,ಕ್ಷೇತ್ರ ಶಿಕ್ಷಣಾಧಿಕಾರಿ ಕಾರ್ಯಾಲಯ 2024-25ನೇ ಸಾಲಿನ ತಾಲ್ಲೂಕಾ ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮವನ್ನು ಮಂಗಳವಾರ ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮದಲ್ಲಿ ಚುನಾಯಿತ ಜನಪ್ರತಿನಿಧಿಗಳು ಗೈರು, ತಾಲ್ಲೂಕಾಮಟ್ಟದ ಉನ್ನತ ಅಧಿಕಾರಿಗಳು ಗೈರು, ಕಾರ್ಯಕ್ರಮ ಮಾಡುವಾಗ ಯಾವುದೇ ಮಂದಾಲೋಚನೆ ಮಾಡದೆ ಹೆಸರಿಗೆ ತರಾತುರಿ ಯಲ್ಲಿ ಕಾರ್ಯಕ್ರಮ ಮಾಡಿ ತಾಲ್ಲೂಕಿನ ಯಾವುದೇ ಪತ್ರಕರ್ತರಿಗೂ ಗಣ್ಯ ವ್ಯಕ್ತಿಗಳಿಗೂ ಆಹ್ವಾನ ನೀಡದೆ ನಿರ್ಲಕ್ಷ್ಯ ವಹಿಸಿ ಕಾಟಾಚಾರಕ್ಕೆ ಮಾಡಿದ್ದು ಕಂಡುಬಂದಿತ್ತು.

ಸಿ.ಆರ್ ಪಿ.ಸಭೆ ನಡೆಸಿ ಮಂಗಳವಾರವೇ ಕಾರ್ಯಕ್ರಮ ಹಮ್ಮಿಕೊಂಡಿದ್ದೇವು ಕಾರಣ ತರಾತುರಿಯಲ್ಲಿ ತಾಲ್ಲೂಕಾಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮ ಮಾಡಲಾಗಿದೆ. ಕಾರ್ಯಕ್ರಮದಲ್ಲಿ ಪ್ರಾಚಾರ್ಯರು ಮಲ್ಲಿಕಾರ್ಜುನ ಪಾಲಾಮೋರ್, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಜಯಪ್ಪ ಚಾಪಲ್, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ದೇವೀಂದ್ರಪ್ಪಾ ಹೋಳ್ಕರ, ಸುರೇಶ ಕೊರವಿ, ಮಕ್ಸೂದ್ ಅಲಿ, ಸೇರಿದಂತೆ ಅನೇಕರಿದ್ದರು.




> **ಶಾಸಕರಿಗೆ ಅಹ್ವಾನ ನೀಡಲಾಗಿತ್ತು ಶಾಸಕರು ಬರಲು ಆಗುವುದಿಲ್ಲಾ ತಾವೆ ಮಾಡಿಕೊಳ್ಳಿವೆಂದು ಹೇಳಿರುವುದರಿಂದ ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ ಇರುವುದರಿಂದ ಡಿಡಿಪಿಐ ಯವರು ಶೀಘ್ರವೇ ಪಟ್ಟಿ ಕೊಡಿ**
> **- ವಿ.ಲಕ್ಷ್ಮಯ್ಯ, ಕ್ಷೇತ್ರ ಶಿಕ್ಷಣಾಧಿಕಾರಿ**

# ಅನೂಪ್ ಪೂಜಾರಿ ಪಾರ್ಥೀವ ಶರೀರ ಹುಟ್ಟೂರಿಗೆ; ತಾಯಿ, ಪತ್ನಿಯಿಂದ ಅಂತಿಮ ದರ್ಶನ

• ಉದಯವಾಹಿನಿ, ಕುಂದಾಪುರ

ಜಮ್ಮುಕಾಶ್ಮೀರದ ಪೂಂಛನಲ್ಲಿ ಡಿ.25ರ ಮಂಗಳವಾರ ಸಂಭವಿಸಿದ ಅಪಘಾತದಲ್ಲಿ ಮೃತಪಟ್ಟ ಕುಂದಾಪುರದ ಬೀಜಾಡಿಯ ಯೋಧ ಲ್ಯಾನ್ಸ್ ಹವಾಲ್ದಾರ್ ಅನೂಪ್ ಪೂಜಾರಿ (31) ಅವರ ಪಾರ್ಥೀವ ಶರೀರವನ್ನು ಡಿ.26ರ ಗುರುವಾರ ಮಧ್ಯಾಹ್ನ ಅವರ ಹುಟ್ಟೂರಾದ ಬೀಜಾಡಿಗೆ ಮೆರವಣಿಗೆ ಮೂಲಕ ತರಲಾಗಿದೆ. ಈ ವೇಳೆ ತಾಯಿ, ಪತ್ನಿ ಹಾಗೂ ಕುಟುಂಬಸ್ಥರು ಅಂತಿಮ ದರ್ಶನ ಪಡೆದರು. ಅನೂಪ್ ಪೂಜಾರಿ (31) ಅವರ ಪಾರ್ಥೀವ ಶರೀರವನ್ನು ಡಿ.26ರ ಬುಧವಾರ ತಡರಾತ್ರಿ ಬಗ್ಗೆ ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ತರಲಾಗಿತ್ತು.

**ತೆರೆದ ವಾಹನದಲ್ಲಿ ಮೆರವಣಿಗೆ:** ಡಿ.26ರ ಬೆಳಗ್ಗೆ 9ಕ್ಕೆ ತೆಕ್ಕಟ್ಟೆಯಿಂದ ತೆರೆದ ವಾಹನದಲ್ಲಿ ಅವರ ಪಾರ್ಥೀವ ಶರೀರವನ್ನು ಕೋಟೇಶ್ವರ ಮೂಲಕವಾಗಿ ಮೆರವಣಿಗೆ ನಡೆಸಿ ಇದೀಗ ಹುಟ್ಟೂರಾದ ಬೀಜಾಡಿಗೆ ತರಲಾಗಿದೆ. ಕೋಟೇಶ್ವರ, ಬೀಜಾಡಿ, ಗೋಪಾಡಿಯಲ್ಲಿ ಅನೂಪ್ ಪೂಜಾರಿ ಅವರ ಪಾರ್ಥಿವ ಶರೀರಕ್ಕೆ ಗೌರವ ಸಲ್ಲಿಸಲು 4000ಕ್ಕೂ ಮಿಕ್ಕಿ ಗ್ರಾಮಸ್ಥರು ಭಾಗವಹಿಸಿದ್ದರು.

ಅಂತಿಮ ಯಾತ್ರೆ ಮುಗಿಸಿ ಹುತಾತ್ಮ ಯೋಧನ ದೇಹವನ್ನು ಅವರ ಕುಟುಂಬಕ್ಕೆ ಹಸ್ತಾಂತರಿಸಲಾಯಿತು. ಸಮುದ್ರ ತೀರದ ಸರ್ಕಾರಿ ಜಮೀನಿನಲ್ಲಿ ಅನೂಪ್ ಅಂತ್ಯಸಂಸ್ಕಾರಕ್ಕೆ ಸಿದ್ಧತೆ ಮಾಡಲಾಗಿತ್ತು.




ಪತ್ನಿ ಮಂಜುಶ್ರೀಗೆ ತ್ರಿವರ್ಣ ಧ್ವಜ ಹಸ್ತಾಂತರಿಸಲಾಯಿತು. ಬೀಜಾಡಿ ಕಡಲ ತೀರದಲ್ಲಿ ಅನೂಪ್ ಅವರ ಅಂತ್ಯಸಂಸ್ಕಾರ ನಡೆಯಿತು.

ಅನೂಪ್ ಪಾರ್ಥಿವ ಶರೀರಕ್ಕೆ ಅವರ ಸಹೋದರ ಅಗ್ನಿಸ್ಪರ್ಷ ಮಾಡಿದರು. ಅಂತಿಮ ವಿಧಿ-ವಿಧಾನದಲ್ಲಿ ಸಂಸದ ಕೋಟ ಶ್ರೀನಿವಾಸ ಪೂ ಜಾರಿ, ಶಾಸಕ ಗುರುರಾಜ್ ಗಂಟೆಹೊಳ ಸೇರಿದಂತೆ ಜಿಲ್ಲಾಡಳಿತ ಜಿಲ್ಲಾ ಪೊಲೀಸ್, ಸೇನಾ ಸಿಬ್ಬಂದಿ ಭಾಗಿಯಾಗಿದ್ದರು. ಸಕಲ ಸರಕಾರಿ ಗೌರವಗಳೊಂದಿಗೆ ಅಂತ್ಯಕ್ರಿಯೆ ನಡೆಯಿತು.

**ಸಕಲ ಸರಕಾರಿ ಗೌರವಗಳೊಂದಿಗೆ ಅಂತ್ಯಕ್ರಿಯೆ**

**ಬೀಜಾಡಿ ಗ್ರಾಮದ ಮನೆಯಲ್ಲಿ ಅಂತಿಮ ವಿಧಿವಿಧಾನ ನಡೆಯಿತು. ಕುಟುಂಬದ ಆಪ್ತರಿಗೆ ಮನೆಯಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಆ ಬಳಿಕ ಅವರು ಕಲಿತ ಬೀಜಾಡಿಪಡು ಸರ್ಕಾರಿ ಶಾಲೆ ಮೈದಾನದಲ್ಲಿ ಸಾರ್ವಜನಿಕ ಅಂತಿಮ ದರ್ಶನಕ್ಕೆ ವ್ಯವಸ್ಥೆ ಕಲ್ಪಿಸಲಾಗಿತ್ತು. ಆಪ್ತರು, ಸಾರ್ವಜನಿಕರು, ಶಾಲಾ ಮಕ್ಕಳು, ಅಧಿಕಾರಿಗಳು, ಜನಪ್ರತಿನಿಧಿಗಳು ಅಂತಿಮ ನಮನ ಸಲ್ಲಿಸಿದರು.**

# ಮುನಿರತ್ನ ಮೇಲೆ ಮೊಟ್ಟೆ ಎಸೆತ: ಶಾಸಕರ ಧ್ವನಿ ಅಡಗಿಸುವ ಕೆಲಸ

• ಉದಯವಾಹಿನಿ, ರಾಯಚೂರು

ಶಾಸಕ ಮುನಿರತ್ನ ಅವರ ಮೇಲೆ ಮೊಟ್ಟೆ ಎಸೆದ ಪ್ರಕರಣ ಶಾಸಕರ ಧ್ವನಿ ಹತ್ತಿಕ್ಕುವ ಕಾರ್ಯವಾಗಿದೆ. ಇಂತಹ ಕೃತ್ಯ ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾರಕವಾಗಿದೆ' ಎಂದು ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷರೂ ಆದ ಶಾಸಕ ಡಾ.ಶಿವರಾಜ ಪಾಟೀಲ ಹೇಳಿದರು. ಮುನಿರತ್ನ ಅವರ ಮೇಲೆ ಮೊಟ್ಟೆ ಎಸೆದ ವ್ಯಕ್ತಿಗಳು ಕಾಂಗ್ರೆಸ್ ಕಾರ್ಯಕರ್ತರು ಎಂದು ತಿಳಿದುಬಂದಿದೆ.

ಶಾಸಕರೊಬ್ಬರಿಗೆ ತಮ್ಮ ಕ್ಷೇತ್ರದಲ್ಲಿ ಕೆಲಸ ಮಾಡಲು ಬಿಡದ ಮುಖಂಡರು ಅವರ ಮೇಲೆ ಮೊಟ್ಟೆ ಎಸೆದು ಹಲ್ಲೆ ಮಾಡಿರುವುದು ದುರಾದೃಷ್ಟಕರ ಸಂಗತಿ' ಎಂದು ನಗರದಲ್ಲಿ ಗುರುವಾರ ಮಾಧ್ಯಮ ಗೋಷ್ಠಿಯಲ್ಲಿ ಟೀಕಿಸಿದರು. ಮುನಿರತ್ನ ವಿರುದ್ಧ ಸೋತು ಹತಾಶರಾದ ಕಾಂಗ್ರೆಸ್ ನಾಯಕರು ಇಂತಹ ಕೀಳು ಮಟ್ಟದ ರಾಜಕಾರಣಕ್ಕೆ ಇಳಿದಿರುವುದು ಸ್ಪಷ್ಟವಾಗುತ್ತಿದೆ. ಪೂರ್ಣ ಬಹುಮತದಿಂದ ಅಧಿಕಾರಕ್ಕೆ ಬಂದ ಸರ್ಕಾರಕ್ಕೆ ವಿರೋಧ ಪಕ್ಷದ ಶಾಸಕರ, ನಾಯಕರ ಮೇಲೆ ಹಲ್ಲೆ, ದೌರ್ಜನ್ಯ ಮಾಡುತ್ತಿರುವ ಬಗ್ಗೆ ನೋಡಿದರೆ ಸ್ವಪಕ್ಷದ ನಾಯಕರೇ ಸರ್ಕಾರದಿಂದ ಅಸಮಾಧಾನಗೊಂಡು ಅಶಾಂತಿ ಸೃಷ್ಟಿಸುವ ಅನುಮಾನ ಮೂಡುತ್ತಿದೆ. ರಾಜಕೀಯ ಏನೇ ಇದ್ದರೂ ಜನರ ಪ್ರತಿನಿಧಿಯಾದ ಶಾಸಕರ ಧ್ವನಿ



ಅಡಗಿಸುವ ಕೆಲಸ ಮಾಡುವುದು ಸರಿಯಲ್ಲ ಎಂದು ಕಿಡಿಕಾರಿದರು.

**ಸಂವಿಧಾನ ಬದಲಾವಣೆ ಯಾರಿಂದಲೂ ಸಾಧ್ಯವಿಲ್ಲ:** ಸಂವಿಧಾನ ಬದಲಾಣೆ ಮಾಡುವುದಾಗಿ ಬಿಜೆಪಿ ಎಲ್ಲಿಯೂ ಹೇಳಿಲ್ಲ, ಸಂವಿಧಾನ ಬದಲಾವಣೆ ಯಾರಿಂದಲೂ ಸಾಧ್ಯವಿಲ್ಲ ಎಂದು ಶಿವರಾಜ ಪಾಟೀಲ ಹೇಳಿದರು.

ಹಿಂದೆ ಕೇಂದ್ರ ಸಚಿವರಾಗಿದ್ದ ಅನಂತ ಕುಮಾರ ಹೆಗಡೆ ನೀಡಿದ ಹೇಳಿಕೆ ಪಕ್ಷದ ಅಭಿಪ್ರಾಯವಲ್ಲ ಅವರು ವ್ಯಕ್ತಿಗತ ಅಭಿಪ್ರಾಯ ವ್ಯಕ್ತಪಡಿಸಿರಬಹುದು. ಅವರ ಹೇಳಿಕೆಗೂ ಬಿಜೆಪಿಗೆ ಸಂಬಂಧವಿಲ್ಲ ಎಂದರು.

# ಮಾನವ ಹಕ್ಕಗಳು ರಕ್ಷಣೆ ಮಾಡಿ: ನ್ಯಾಯಾಧೀಶ

• ಉದಯವಾಹಿನಿ, ಮುದಗಲ್

ನಾವು ಮಾನವ ಹಕ್ಕುಗಳನ್ನು ಉಲ್ಲಂಘನೆ ಮಾಡಿದೇ ಅವುಗಳನ್ನು ರಕ್ಷಣೆ ಮಾಡಬೇಕು ಎಂದು ಲಿಂಗಸುಗೂರು ಜೆಎಂಎಫ್‌ಸಿ ನ್ಯಾಯಾಧೀಶೆ ಉಂಡಿ ಮಂಜುಳಾ ಶಿವಪ್ಪ ಹೇಳಿದರು. ಪಟ್ಟಣ ವಿಜಯ ಮಹಾಂತೇಶ ಪ್ರೌಢ ಶಾಲೆ ಯಲ್ಲಿ ವಿಶ್ವ ಮಾನವ ಹಕ್ಕುಗಳು ದಿನಾಚರಣೆ ನಿಮಿತ್ತ ತಾಲ್ಲೂಕು ಕಾನೂನು ಸೇವಾ ಸಮಿತಿ, ನ್ಯಾಯವಾದಿಗಳ ಸಂಘ ತಾಲ್ಲೂಕು ಆಡಳಿತ, ಮಾನವ ಹಕ್ಕುಗಳು, ಭ್ರಷ್ಟಾಚಾರ ವಿರೋಧಿ ಸಂಸ್ಥೆ, ಶಿಕ್ಷಣ ಇಲಾಖೆ, ಪೊಲೀಸ್ ಇಲಾಖೆ ಹಾಗೂ ವಿಜಯ ಮಹಾಂತೇಶ ಪ್ರೌಢ ಶಾಲೆ ಸಂಯುಕ್ತಾಶ್ರಯದಲ್ಲಿ ಕಾನೂನು ಅರಿವು ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸಂವಿಧಾನದ ಮೂರನೇ ಭಾಗದಲ್ಲಿ ಮಾನವ ಹಕ್ಕುಗಳ ರಕ್ಷಣೆ ಬಗ್ಗೆ ತಿಳಿಸಲಾಗಿದೆ. ಜಿಲ್ಲೆ, ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಮಾನವ ಹಕ್ಕುಗಳ ಆಯೋಗಗಳಿವೆ. ಮಾನವ ಹಕ್ಕುಗಳು ಉಲ್ಲಂಘನೆಯಾದರೆ ಇವುಗಳ ಸಹಾಯ ಪಡೆದುಕೊಳ್ಳಬೇಕು ಎಂದರು. ನಂತರ ಕ್ಷೇತ್ರ ಶಿಕ್ಷಣಾಧಿಕಾರಿ ಹುಂಬಣ್ಣ ರಾಠೋಡ್ ಮಾತನಾಡಿ, ಭ್ರಷ್ಟಾಚಾರ ನಿಯಂತ್ರಣ ನೆಪದಲ್ಲಿ ಕೆಲ ಸಂಘ-ಸಂಸ್ಥೆಗಳು ಹಾಗೂ ಕೆಲ ವ್ಯಕ್ತಿಗಳು ಅಧಿಕಾರಗಳಿಗೆ ಕಿರುಕುಳ ನೀಡುತ್ತಿದ್ದಾರೆ. ಕಿರುಕುಳ ನೀಡುವುದನ್ನು ನಿಲ್ಲಿಸಬೇಕು. ಕಿರುಕುಳ ತಡೆಯಲು ಸಂಬಂಧಿಸಿದ ಇಲಾಖೆ ಗಮನ ಹರಿಸಬೇಕು' ಎಂದು ಹೇಳಿದರು.




# ಸಾವಯವ ಕೃಷಿಯಲ್ಲಿ ಹೆಚ್ಚಿನ ಒಲವು ಹೊಂದಿರುವುದು ವಿಶೇಷ

## ಧಾರವಾಡ ಕೃಷಿ ವಿವಿಯ ರಿಸರ್ಚ್ ಕೌನ್ಸಿಲ್: ಬಸರಕೋಡದ ಹೇಮರಡ್ಡಿ ಮೇಟಿ ನಾಮನಿರ್ದೇಶನ

• ಉದಯವಾಹಿನಿ, ಮುದ್ದೇಬಿಹಾಳ

ತಾಲ್ಲೂಕಿನ ಬಸರಕೋಡದ ಪ್ರಗತಿಪರ ರೈತ, ಜಿಪಂ ಮಾಜಿ ಸದಸ್ಯ ಹೇಮರಡ್ಡಿ ಮೇಟಿ ಅವರನ್ನು ಧಾರವಾಡ ಕೃಷಿ ವಿಶ್ವವಿದ್ಯಾಲಯದ ಕುಲಪತಿಗಳ ಅಧ್ಯಕ್ಷತೆಯ ರಿಸರ್ಚ್ ಕೌನ್ಸಿಲ್ (ಕೃಷಿ ಸಂಶೋಧನಾ ಪರಿಷತ್)ಗೆ ಸದಸ್ಯರನ್ನಾಗಿಸಿ ಎರಡು ವರ್ಷಗಳ ಅವ ಧಿಗೆ ನಾಮನಿರ್ದೇಶನ ಮಾಡಿ ವಿವಿಯ ರಜಿಸ್ಟಾರ್ ಜಯಲಕ್ಷ್ಮೀ ಅವರು ಆದೇಶ ಹೊರಡಿಸಿರುವುದು ಈ ಭಾಗದ ರೈತರ ಸಂಭ್ರಮಕ್ಕೆ ಕಾರಣವಾಗಿದೆ.

ಕೃಷಿಯಲ್ಲಿ ವಿಶೇಷ ಅನುಭವವುಳ್ಳ ಪ್ರಗತಿಪರ ರೈತ ವಿಭಾಗದಿಂದ ಕೃಷಿ ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳಲ್ಲಿನ ವಿಶೇಷ ಅನುಭವ, ಸೇವೆ ಪರಿಗಣಿಸಿ ವಿವಿಯ ಕುಲಪತಿ ಡಾ. ಪಿ.ಎಲ್.ಪಾಟೀಲ ಅವರ ಸೂಚನೆ ಮೇರೆಗೆ ಈ ನಾಮನಿರ್ದೇಶನ ಮಾಡಲಾಗಿದೆ. ಕೌನ್ಸಿಲ್‌ನಲ್ಲಿ ಕೃಷಿ, ತೋಟಗಾರಿಕೆ, ರೇಷ್ಮೆ ಸೇರಿ ಪೂರಕ ಸರ್ಕಾರಿ ಇಲಾಖೆಗಳ ನಿರ್ದೇಶಕರು, ವಿಜ್ಞಾನಿಗಳು, ಸಂಶೋಧಕರು, ವಿವಿಯ ಎಚ್‌ಒಡಿಗಳು, ನವದೆಹಲಿಯ ಐಸಿಎಆರ್‌ನ ಎಡಿಜಿ ಸೇರಿ 54 ಸದಸ್ಯರಲ್ಲಿ ಇವರೂ ಒಬ್ಬರಾಗಿದ್ದಾರೆ.




**ರೈತರ ಸಂಭ್ರಮಕ್ಕೆ ಕಾರಣ**

**ಒಣದ್ರಾಕ್ಷಿ ರಫ್ತು ಖ್ಯಾತಿ:** ಈ ಭಾಗದಿಂದ ಮೊದಲ ಬಾರಿಗೆ ಅಂತರ್‌ರಾಜ್ಯ ಮಾತ್ರವಲ್ಲದೆ ವಿದೇಶಕ್ಕೆ ಒಣ ದ್ರಾಕ್ಷಿ ರಫ್ತು ಮಾಡಿದ ಖ್ಯಾತಿ ಹೊಂದಿರುವ ಹೇಮರಡ್ಡಿ ಅವರು 30 ಎಕರೆಯಲ್ಲಿ ದ್ರಾಕ್ಷಿ, 32 ಎಕರೆ ಯಲ್ಲಿ ಪೇರು, 20 ಎಕರೆಯಲ್ಲಿ ಬಾಳೆ, 22 ಎಕರೆ ಯಲ್ಲಿ ನುಗ್ಗೆ, 10 ಎಕರೆಯಲ್ಲಿ ಮಾವು ಬೆಳೆದಿದ್ದು 50-60 ಗೀರ್ ತಳಿಯ ದೇಸಿ ಹಸುಗಳನ್ನು ಸಾಕುವ ಮೂಲಕ ಹೈನುಗಾರಿಕೆಗೆ ಮಹತ್ವ ನೀಡಿದ್ದಾರೆ.

**ಕನ್ನೇರಿ ಮಠದ ಶ್ರೀಗಳ ಸಹೋದರ:** ಹೇಮರಡ್ಡಿ ಅವರು ಮಹಾರಾಷ್ಟ್ರದ ಕೊಲ್ಹಾಪುರ ಹತ್ತಿರ ಇರುವ ಕನ್ನೇರಿಯ ಶ್ರೀಕ್ಷೇತ್ರ ಸಿದ್ಧಗಿರಿ ಮಹಾಸಂಸ್ಥಾನದ 49ನೇ ಮಠಾಧಿಪತಿಗಳಾದ ಪೂಜ್ಯ ಶ್ರೀ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿಯವರ ಪೂರ್ವಾಶ್ರಮದ ಸಹೋದರರಾಗಿದ್ದು ಸಾವಯವ ಕೃಷಿಯಲ್ಲಿ ಹೆಚ್ಚಿನ ಒಲವು ಹೊಂದಿರುವುದು ವಿಶೇಷವಾಗಿದೆ.

**ಕೃಷಿ ಸಚಿವರಿಂದ ಶ್ಲಾಘನೆ**

**ಬಿಜೆಪಿ ರೈತ ಮೋರ್ಚಾ ರಾಜ್ಯಾಧ್ಯಕ್ಷರಾಗಿರುವ ಎ.ಎಸ್.ಪಾಟೀಲ ನಡಹಳ್ಳಿಯವರು ಈ ಮತಕ್ಷೇತ್ರದ ಶಾಸಕರಾಗಿದ್ದಾಗ ಹೇಮರಡ್ಡಿ ಮತ್ತಿತರ ಪ್ರಗತಿಪರ ರೈತರ ಕೃಷಿ ಸಾಧನೆ ರಾಜ್ಯಾದ್ಯಂತ ಪರಿಚಯಿಸಲು 2021ರ ಫೆಬ್ರವರಿ 23ರಂದು ಆಗಿನ ಕೃಷಿ ಸಚಿವ ಬಿ.ಸಿ.ಪಾಟೀಲ, ಜಿಲ್ಲಾ ಉಸ್ತುವಾರಿ ಸಚಿವೆ ಶಶಿಕಲಾ ಜೊಲ್ಲೆ, ಕೃಷಿ ಇಲಾಖೆಯ ಹಿರಿಯ ಅಧಿಕಾರಿಗಳನ್ನು ಬಸರಕೋಡ ಮತ್ತು ಕವಡಿಮಟ್ಟಿ ಗ್ರಾಮಗಳಿಗೆ ಕರೆಸಿ ಸಚಿವರ ನಡೆ ರೈತರ ಕಡೆ, ರೈತರೊಂದಿಗೆ ಒಂದು ದಿನ, ಕ್ಷೇತ್ರ ಭೇಟಿ ಕಾರ್ಯಕ್ರಮ ಹಮ್ಮಿಕೊಂಡಿದ್ದರು. ಹೇಮರಡ್ಡಿ ಅವರ ಕೃಷಿ ಸಾಧನೆಗೆ ಸಚಿವರು ಶ್ಲಾಘನೆ ವ್ಯಕ್ತಪಡಿಸಿದ್ದನ್ನು ಸ್ಮರಿಸಬಹುದು.**

> **ಕೃಷಿ ವಿವಿ ಕುಲಪತಿ ಡಾ.ಪಿ.ಎಲ್ .ಪಾಟೀಲ ಅವರು ಕೆಲ ದಿನಗಳ ಹಿಂದೆ ಬಸರಕೋಡಕ್ಕೆ ವಿಚಾರ ಸಂಕಿರಣವೊಮದರಲ್ಲಿ ಪಾಲ್ಗೊಳ್ಳಲು ಆಗಮಿಸಿದ್ದಾಗ ನನ್ನ ಕೃಷಿ ಚಟುವಟಿಕೆಯನ್ನು ಪ್ರತ್ಯಕ್ಷವಾಗಿ ಕಂಡು ಮಾಹಿತಿ ಪಡೆದುಕೊಂಡಿದ್ದು ಈ ನೇಮಕಕ್ಕೆ ಕಾರಣವಾಗಿದೆ. ಕೃಷಿಯಲ್ಲಿ ಬರುವ ಎಲ್ಲಾ ವಿಧದ ಮಾಹಿತಿ ಬಗ್ಗೆ ಸಂಶೋಧನೆ ನಡೆಸುವುದಕ್ಕೆ ಸಹಕರಿಸುವುದು ಕೌನ್ಸಿಲ್ ಸದಸ್ಯರ ಕೆಲಸವಾಗಿದೆ**
> **-ಹೇಮರಡ್ಡಿ ಮೇಟಿ, ಬಸರಕೋಡ.**

> **ನಮ್ಮ ಆತ್ಮೀಯರು, ಪ್ರಗತಿಪರ ರೈತರೂ ಆಗಿರುವ ಹೇಮಣ್ಣ ಸಾಹುಕಾರ ಅವರು ರಿಸರ್ಚ್ ಕೌನ್ಸಿಲ್‌ಗೆ ನಾಮನಿರ್ದೇಶನಗೊಂಡಿರುವುದು ಹರ್ಷ ತಂದು ಕೊಟ್ಟಿದೆ. ಇವರ ಸೇವೆ ಧಾರವಾಡ ಕೃಷಿ ವಿವಿ ವ್ಯಾಪ್ತಿ ಮಾತ್ರವಲ್ಲದೆ ಇಡೀ ರಾಜ್ಯದ ರೈತರಿಗೆ ಅತ್ಯುಪಯುಕ್ತವಾಗಲಿ ಎಂದು ರೈತ ಮೋರ್ಚಾ ರಾಜ್ಯಾಧ್ಯಕ್ಷನಾಗಿ ಅಭಿನಂದಿಸುತ್ತೇನೆ.**
> **-ಎ.ಎಸ್.ಪಾಟೀಲ ನಡಹಳ್ಳಿ, ಮಾಜಿ ಶಾಸಕರು.**

## ಮಿನಿ ನ್ಯೂಸ್

### ಮೈಮೇಲೆ ಪೆಟ್ರೋಲ್ ಸುರಿದುಕೊಂಡು ಆತ್ಮಹತ್ಯೆಗೆ ಯತ್ನ

• ಉದಯವಾಹಿನಿ, ಹುಲಸೂರ

ಮೊಬೈಲ್ ಆನ್ ಲೈನ್ ಗೇಮ್ ನಲ್ಲಿ ಹಣ ಕಳೆದುಕೊಂಡ ಯುವಕನೊಬ್ಬ ಮೈಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆಗೆ ಯತ್ನಿಸಿದ ಘಟನೆ ತಾಲ್ಲೂಕಿನ ಬೇಲೂರ ಗ್ರಾಮದಲ್ಲಿ ಗುರುವಾರ ನಡೆದಿದೆ.ಬೇಲೂರ ಗ್ರಾಮದ ನಿವಾಸಿ ವಿಜಯಕುಮಾರ್ ಜಗನ್ನಾಥ ಹೊಳ್ಳ (25) ಆತ್ಮಹತ್ಯೆಗೆ ಯತ್ನಿಸಿದ ಯುವಕ, ದೇಹದ ಬಹುತೇಕ ಭಾಗ ಸುಟ್ಟು ಹೋಗಿದ್ದು, ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಡಿ ಫಾರ್ಮಾ ಪದವೀಧರನಾಗಿರುವ ಯುವಕ ಆನ್ ಲೈನ್ ಗೇಮ್ ನಲ್ಲಿ 1.50 ಲಕ್ಷಕ್ಕೂ ಅಧಿಕ ಹಣ ಕಳೆದುಕೊಂಡಿದ್ದ. ಅದಕ್ಕಾಗಿ ಸಾಲ ಮಾಡಿದ್ದ. ಮಹಕರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಅಘೋಷಿತ ನಿಷೇದಾಜ್ಞೆ

• ಉದಯವಾಹಿನಿ, ಸಿಂಧನೂರು

ಫುಟ್ಪಾತ್ ಅತಿಕ್ರಮಿಸಿ ನಿರ್ಮಿಸಿದ್ದ ಶೆಡ್ ಮತ್ತು ಡಬ್ಬಾ ಅಂಗಡಿಗಳನ್ನು ನಗರದಲ್ಲಿ ನ್ಯಾಯಾಲಯದ ಆದೇಶದ ಮೇರೆಗೆ ಬುಧವಾರ ಬೆಳಗಿನಿಂದ ಸಂಜೆವರೆಗೆ ಸ್ವಯಂಪ್ರೇರಣೆಯಿಂದ ತೆರವು ಕಾರ್ಯಾಚರಣೆ ನಡೆಸಿದ ಹಿನ್ನೆಲೆಯಲ್ಲಿ ಅಘೋಷಿತ ನಿಷೇದಾಜ್ಞೆ ಜಾರಿಯಾದಂತೆ ಕಂಡುಬಂತು. ಲಿಂಗಸುಗೂರು ಸಹಾಯಕ ಆಯುಕ್ತ ಬಸವಣೆಪ್ಪ ಕಲ್‌ಶೆಟ್ಟಿ ತಹಶೀಲ್ದಾರ್ ಅರುಣ್ ಎಚ್.ದೇಸಾಯಿ ಸೇರಿದಂತೆ ಡಿವೈಎಸ್‌ಪಿ, ನಗರಸಭೆ ಪೌರಾಯುಕ್ತ, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ, ಸರ್ಕಲ್ ಇನ್ಸ್‌ಪೆಕ್ಟರ್ ಮತ್ತಿತರ ಅಧಿಕಾರಿಗಳು ಸುಮಾರು 500ಕ್ಕೂ ಅಧಿಕ ಪೊಲೀಸರ ಪಥಸಂಚಲನ ನಡೆಸುವ ಮೂಲಕ ಅತಿಕ್ರಮಿತ ಅಂಗಡಿಕಾರರಿಗೆ ಎಚ್ಚರಿಕೆಯ ಸಂದೇಶ ರವಾನಿಸಿದರು.

6 ಡಿಆರ್‌ಪಿ, 8 ಪೊಲೀಸ್ ವಾಹನಗಳು ನಿರಂತರವಾಗಿ ಸೈರನ್ ಹಾಕಿಕೊಂಡು ಮಹಾತ್ಮಗಾಂಧಿ ವೃತ್ತದ ಮೂಲಕ ಗಂಗಾವತಿ ರಸ್ತೆ, ಕುಷ್ಟಗಿ ರಸ್ತೆ, ಹಳೆಬಜಾರ್, ರಾಯಚೂರು ರಸ್ತೆಗಳಲ್ಲಿ ಸಂಚರಿಸಿದರು. ಪೊಲೀಸರ ಪಥ ಸಂಚಲನ ಸಾರ್ವಜನಿಕರಲ್ಲಿ ಭಯದ ವಾತಾವರಣ ಮೂಡಿಸಿತು.

### ಕೊಲೆ ಬೆದರಿಕೆ ಆರೋಪ: ಗುತ್ತಿಗೆದಾರ ರೈಲಿಗೆ ತಲೆಕೊಟ್ಟು ಆತ್ಮಹತ್ಯೆ

• ಉದಯವಾಹಿನಿ, ಬೀದರ್

ಜಿಲ್ಲೆಯಲ್ಲಿ ಸಚಿವ ಪ್ರಿಯಾಂಕ್ ಖರ್ಗೆ ಆಪ್ತನಿಂದ ಕೊಲೆ ಬೆದರಿಕೆ ಆರೋಪವನ್ನು ಮಾಡಿರುವಂತ ಗುತ್ತಿಗೆದಾರನೊಬ್ಬ ಚಲಿಸುತ್ತಿದ್ದಂತ ರೈಲಿಗೆ ತಲೆಕೊಟ್ಟು ಆತ್ಮಹತ್ಯೆ ಮಾಡಿಕೊಂಡಿರುವಂತ ಘಟನೆ ನಡೆದಿದೆ. ಬೀದರ್ ನಲ್ಲಿ ಚಲಿಸುತ್ತಿದ್ದಂತ ರೈಲಿಗೆ ತಲೆಕೊಟ್ಟು ಗುತ್ತಿಗೆದಾರ ಸಚಿನ್ (26) ಎಂಬಾತ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸುಮಾರು 7 ಪುಟಗಳ ಡೆತ್ ನೋಟ್ ಬರೆದಿಟ್ಟು ಗುತ್ತಿಗೆದಾರ ಸಚಿನ್ ಆತ್ಮಹತ್ಯೆ ಮಾಡಿಕೊಂಡಿರೋದಾಗಿ ತಿಳಿದು ಬಂದಿದೆ. ಗುತ್ತಿಗೆದಾರ ಸಚಿನ್ ಬರೆದಿರುವಂತ ಡೆತ್ ನೋಟ್ ನಲ್ಲಿ ಸಚಿವ ಪ್ರಿಯಾಂಕ್ ಖರ್ಗೆ ಅವರ ಆಪ್ತರೊಬ್ಬರು ತಮಗೆ ಕೊಲೆ ಬೆದರಿಕೆ ಹಾಕಿರೋ ಆರೋಪ ಮಾಡಿರೋದಾಗಿ ಹೇಳಲಾಗುತ್ತಿದೆ. ಅಂದಹಾಗೆ ಟೆಂಡರ್ ಕೊಡಿಸುವುದಾಗಿ ಹೇಳಿ ಸಚಿವ ಪ್ರಿಯಾಂಕ್ ಖರ್ಗೆ ಆಪ್ತ ರಾಜು ಗುತ್ತಿಗೆದಾರ ಸಚಿನ್ ಬಳಿಯಲ್ಲಿ ಲಕ್ಷಾಂತರ ಹಣ ಪಡೆದಿದ್ದನಂತೆ. ಆ ಬಳಿಕ ಮತ್ತೆ 1 ಕೋಟಿ ಹಣಕ್ಕೆ ಬೇಡಿಕೆ ಇಟ್ಟಿದ್ದನಂತೆ. ಅದರೇ ಟೆಂಡರ್ ಕೊಡಿಸದೇ, ಪಡೆದ ಹಣ ವಾಪಾಸು ಕೇಳಿದ್ದಕ್ಕೆ ಕೊಲೆ ಬೆದರಿಕೆ ಹಾಕಿದ್ದನಂತೆ. ಹೀಗಾಗಿ ರೈಲಿಗೆ ತಲೆಕೊಟ್ಟು ಸಚಿನ್ ಆತ್ಮಹತ್ಯೆ ಮಾಡಿ ಕೊಂಡಿದ್ದಾರೆ ಎನ್ನಲಾಗಿದೆ. ಈ ಬಗ್ಗೆ ಮತ್ತಷ್ಟು ಮಾಹಿತಿ ತಿಳಿದು ಬರಬೇಕಿದೆ.

### ರಾಜ್ಯಕ್ಕೆ ಆಗಮಿಸಿದ ಮೂವರು ಹುತಾತ್ಮ ಯೋಧರ ಪಾರ್ಥಿವ ಶರೀರ

• ಉದಯವಾಹಿನಿ, ಉಡುಪಿ

ಜಮ್ಮು ಕಾಶ್ಮೀರದ ಪೂಂಚ್‌ನಲ್ಲಿ ನಡೆದ ದುರಂತದಲ್ಲಿ ಹುತಾತ್ಮರಾದ ಕರ್ನಾಟಕದ ಸೈನಿಕರ ಪಾರ್ಥಿವ ಶರೀರಗಳು ಆಗಮಿಸಿದ್ದು, ಗುರುವಾರ ಬೆಳಗ್ಗೆ 9:30 ಕ್ಕೆ ಸಿಎಂ ಸಿದ್ದರಾಮಯ್ಯ ಅವರು ಯೋಧರ ಪಾರ್ಥಿವ ಶರೀರಕ್ಕೆ ಅಂತಿಮ ನಮನ ಸಲ್ಲಿಸಲಿದ್ದಾರೆ.

ಬಳಿಕ ಯೋಧರ ಸ್ವಗ್ರಾಮಗಳಿಗೆ ಪಾರ್ಥಿವ ಶರೀರ ಕಳುಹಿಸಲಾಗುತ್ತದೆ. ಗುರುವಾರ ಸರ್ಕಾರಿ ಶಾಲೆ ಮೈದಾನ ದಲ್ಲಿ ಸಾರ್ವಜನಿಕ ಅಂತಿಮ ದರ್ಶನಕ್ಕೆ ವ್ಯವಸ್ಥೆ ಇರಲಿದೆ.

ಆಪ್ತರು, ಸಾರ್ವಜನಿಕರು, ಜನಪ್ರತಿನಿಧಿಗಳಿಗೆ ಅಂತಿಮ ನಮನಕ್ಕೆ ಅವಕಾಶ ಕಲ್ಪಿಸಲಾಗಿದೆ. ಜಮ್ಮು ಮತ್ತು ಕಾಶ್ಮೀರದ ಮಂಧಾರ್ನ ನಿಯಂತ್ರಣ ರೇಖೆ (ಎಲ್‌ಒಸಿ) ಬಳಿ ಮಂಗಳವಾರ ಸಂಜೆ ಯೋಧರನ್ನು ಕರೆದೊಯ್ಯುತ್ತಿದ್ದ ಸೇನಾ ವಾಹನವು ಕಮರಿಗೆ ಬಿದ್ದ ಪರಿಣಾಮ ಐವರು ಯೋಧರು ಹುತಾತ್ಮರಾಗಿದ್ದು, ದುರಂತದಲ್ಲಿ ಬೆಳಗಾವಿ ಬಳಿಯ ಸಾಂಬ್ರಾ ಗ್ರಾಮದ ಯೋಧ ಸುಬೇದಾರ್ ದಯಾನಂದ ತಿರಕಣ್ಣವರ (45), ಕುಂದಾಪುರ ಬಳಿಯ ಕೋಟೇಶ್ವರ ಬಿಜಾಡಿಯ ಅನೂಪ್ (33) ಮಹಾಲಿಂಗಪುರದ 25 ವರ್ಷದ ಮಹೇಶ್ ಮರಿಗೊಂಡ ಹುತಾತ್ಮರಾಗಿದ್ದಾರೆ.

### ಬಿಜೆಪಿ ವಿರುದ್ಧ ಹೋರಾಟಕ್ಕೆ ಕಾಂಗ್ರೆಸ್ ಅಧಿವೇಶನದಲ್ಲಿ ನಿರ್ಣಯ

• ಉದಯವಾಹಿನಿ, ಬೆಳಗಾವಿ

ಮಹಾತ್ಮಾ ಗಾಂಧಿಯವರ ಅಧ್ಯಕ್ಷತೆಯಲ್ಲಿ ನಡೆದ ಬೆಳಗಾವಿ ಅಧಿವೇಶನದ 100ನೇ ವಾರ್ಷಿಕೋತ್ಸವದ ಅಂಗವಾಗಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಗುರುವಾರ ಕರ್ನಾಟಕದ ಬೆಳಗಾವಿಯಲ್ಲಿ ಎರಡು ದಿನಗಳ ವಿಶೇಷ ಸಭೆಯನ್ನು ಪ್ರಾರಂಭಿಸಿತು ಕಾಂಗ್ರೆಸ್ ತನ್ನ ಸಿಡಬ್ಲ್ಯೂಸಿ ಸಭೆಯಲ್ಲಿ ನವ ಸತ್ಯಾಗ್ರಹ ಬೈಠಕ್ ಎಂಬ ಕ್ರಿಯಾ ಯೋಜನೆಯನ್ನು ನಿರ್ಧರಿಸಲಿದೆ.ಗೃಹ ಸಚಿವ ಅಮಿತ್ ಶಾ ಅವರು ಡಾ.ಬಿ.ಆರ್.ಅಂಬೇಡ್ಕರ್ ಅವರಿಗೆ ಮಾಡಿದ ಅವಮಾನವನ್ನು ಬೆಳಗಾವಿಯಲ್ಲಿ ಚರ್ಚೆಗೆ ತೆಗೆದುಕೊಳ್ಳಲಾಗುವುದು ಮತ್ತು ಈ ವಿಷಯದ ಬಗ್ಗೆ ಬಲವಾದ ಅನುಸರಣೆ ಇರುತ್ತದೆ ಎಂದು ವಿರೋಧ ಪಕ್ಷ ಪ್ರತಿಪಾದಿಸಿದೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಮತ್ತು ಎಐಸಿಸಿ ಮಾಧ್ಯಮ ಮತ್ತು ಪ್ರಚಾರ ವಿಭಾಗದ ಮುಖ್ಯಸ್ಥ ಪವನ್ ಖೇರಾ ಅವರೊಂದಿಗೆ ಜಂಟಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಸಂವಹನ ಉಸ್ತುವಾರಿ ಜೈರಾಮ್ ರಮೇಶ್, ಡಿಸೆಂಬರ್ 26 ರಂದು ನಡೆಯಲಿರುವ ವಿಸ್ತ್ರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿ (ಸಿಡಬ್ಲ್ಯೂಸಿ) ಸಭೆಯನ್ನು 'ನವ ಸತ್ಯಾಗ್ರಹ ಬೈಠಕ್ ಎಂದು ಹೆಸರಿಸಲಾಗಿದೆ.ಗೃಹ ಸಚಿವ ಅಮಿತ್ ಶಾ ಅವರು ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ಅವಮಾನಿಸಿದ್ದನ್ನು ವಿರೋಧಿಸಿ ಕಾಂಗ್ರೆಸ್ ಪ್ರಸಕ್ತ ವಾರವನ್ನು 'ಅಂಬೇಡ್ಕರ್ ಸಮ್ಮಾನ್ ಸಪ್ತಾಹ' ಎಂದು ಆಚರಿಸುತ್ತಿದೆ ಎಂದು ರಮೇಶ್ ಹೇಳಿದರು.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 10:30 ರಿಂದ 12:00 |
| ಗುಳಿಕ ಕಾಲ | ಬೆಳಿಗ್ಗೆ | 07:30 ರಿಂದ 09:00 |
| ಯಮಗಂಡ ಕಾಲ | ಮಧ್ಯಾಹ್ನ | 03:00 ರಿಂದ 04:30 |

**ಮೇಷ** ಸಣ್ಣ ಸಣ್ಣ ವಿಷಯಗಳು ನಿಮ್ಮ ಮನಸ್ಸು ಕೆಡಿಸಲು ಬಿಡಬೇಡಿ. ನಿಮಗೆ ತಿಳಿದ ಜನರ ಮೂಲಕ ಆದಾಯದ ಹೊಸ ಮೂಲಗಳು ಕಂಡು ಬರುತ್ತವೆ. ಸ್ನೇಹಿತರು ಮತ್ತು ಅಪರಿಚಿತರಿಬ್ಬರ ಬಗೆಗೂ ಎಚ್ಚರದಿಂದಿರಿ.

**ವೃಷಭ** ಧ್ಯಾನ ಮತ್ತು ಯೋಗ ಆಧ್ಯಾತ್ಮಿಕ ಹಾಗೂ ಭೌತಿಕ ಲಾಭಗಳೆರಡಕ್ಕೂ ಪ್ರಯೋಜನಕಾರಿಯಾಗುತ್ತದೆ. ನೀವು ಪ್ರಯಾಣ ಮಾಡುವ ಮತ್ತು ಹಣ ಖರ್ಚು ಮಾಡುವ ಮನಸ್ಥಿತಿಯಲ್ಲಿರುತ್ತೀರಿ.

**ಮಿಥುನ** ನಿಮ್ಮ ಶೀಘ್ರ ಕ್ರಮ ನಿಮ್ಮನ್ನು ಪ್ರೇರೇಪಿಸುತ್ತದೆ. ಯಶಸ್ಸು ಸಾಧಿಸಲು- ಸಮಯದ ಜೊತೆ ನಿಮ್ಮ ಆಲೋಚನೆಗಳನ್ನು ಬದಲಾಯಿಸಿಕೊಳ್ಳಿ-ಇದು ನಿಮ್ಮ ದೃಷ್ಟಿಯನ್ನು ವಿಸ್ತಾರಗೊಳಿಸುತ್ತದೆ ನಿಮ್ಮ ವ್ಯಕ್ತಿತ್ವವನ್ನು ವೃದ್ಧಿಸುತ್ತದೆ.

**ಕರ್ಕಾಟಕ** ನೀವು ಪರಿಸ್ಥಿತಿಯ ನಿಯಂತ್ರಣ ಹೊಂದುತ್ತಿದ್ದಂತೆ ನಿಮ್ಮ ಆತಂಕ ಕಣ್ಮರೆಯಾಗುತ್ತದೆ. ಇದು ಧೈರ್ಯದ ಮೊದಲ ಸ್ಪರ್ಶದಲ್ಲಿ ಕುಸಿದುಹೋಗುವ ಸಾಬೂನಿನ ಗುಳ್ಳೆಯಷ್ಟೇ ಗಟ್ಟಿಯೆಂದು ನೀವು ಅರ್ಥ ಮಾಡಿಕೊಳ್ಳುತ್ತೀರಿ.

**ಸಿಂಹ** ನಿಮ್ಮ ಆಸಕ್ತಿಗಳನ್ನು ಮುಂದುವರಿಸಲು ಅಥವಾ ನೀವು ತುಂಬ ಆನಂದಿಸುವ ಕೆಲಸಗಳನ್ನು ಮಾಡಲು ಹೆಚ್ಚು ಸಮಯ ಕಳೆಯಬೇಕು. ನೀವು ಪ್ರಯಾಣ ಮಾಡುತ್ತಿದ್ದರೆ ನಿಮ್ಮ ಅಮೂಲ್ಯ ವಸ್ತುಗಳ ಬಗ್ಗೆ ವಿಶೇಷ ಗಮನ ಹರಿಸಿ.

**ಕನ್ಯಾ** ಒತ್ತಡದ ಕೆಲಸದ ವೇಳಾಪಟ್ಟಿ ನಿಮ್ಮ ಸಹನೆಯನ್ನು ಕೆಣಕಬಹುದು. ನಿಧಿಗಳ ಹಠಾತ್ ಒಳಹರಿವು ನಿಮ್ಮ ಪಾವತಿಗಳು ಮತ್ತು ತಕ್ಷಣದ ವೆಚ್ಚಗಳನ್ನು ನೋಡಿಕೊಳ್ಳುತ್ತದೆ.

**ತುಲಾ** ನಿಮ್ಮ ಸಂಜೆ ವಿಭಿನ್ನ ಪ್ರತಿಕ್ರಿಯೆಗಳಿಂದ ಗುರುತಿಸಲ್ಪಡುತ್ತದೆ ಹಾಗೂ ಇದು ನಿಮ್ಮನ್ನು ಉದ್ವಿಗ್ನವಾಗಿರಿಸಬಹುದು. ಆದರೆ ಹೆಚ್ಚು ಚಿಂತಿಸುವ ಅಗತ್ಯವಿಲ್ಲ. ನಿಮ್ಮ ಸಂತೋಷ ನಿಮಗೆ ನಿರಾಸೆಗಿಂತ ಹೆಚ್ಚು ಆನಂದ ನೀಡುತ್ತದೆ.

**ವೃಶ್ಚಿಕ** ಅತ್ಯಂತ ಪ್ರಭಾವಿ ಜನರ ಬೆಂಬಲ ನಿಮ್ಮ ನೈತಿಕ ಸ್ಥೈರ್ಯವನ್ನು ಹೆಚ್ಚಿಸುತ್ತದೆ. ನೀವು ಯಾವುದೇ ಅಜ್ಞಾತ ಮೂಲಗಳಿಂದ ಹಣವನ್ನು ಪಡೆಯಬಹುದು, ಇದರಿಂದ ನಿಮ್ಮ ಅನೇಕ ಆರ್ಥಿಕ ಸಮಸ್ಯೆಗಳು ದೂರವಾಗುತ್ತವೆ.

**ಧನಸ್ಸು** ಇಂದು ಮನೆಯಿಂದ ಹೊರಗೆ ಹಿರಿಯರ ಆಶೀರ್ವಾದವನ್ನು ತೆಗೆದುಕೊಂಡು ಹೋಗಿ, ಇದರಿಂದ ನೀವು ಹಣದ ಲಾಭವನ್ನು ಪಡೆಯಬಹುದು. ಸ್ನೇಹಿತರು ಉಪಯುಕ್ತವಾಗಿರುತ್ತಾರೆ

**ಮಕರ** ನೀವು ಯಾರನ್ನಾದರೂ ಮರಳಿ ಎರವಲು ಕೇಳುತ್ತಿದ್ದರೆ ಮತ್ತು ಇಲ್ಲಿಯವರೆಗೆ ಅವರು ನಿಮ್ಮ ಮಾತನ್ನು ತಪ್ಪಿಸುತ್ತಿದ್ದರೆ, ಇಂದು ಅವರು ಮಾತನಾಡದೆ ಹಣವನ್ನು ನಿಮಗೆ ಹಿಂದಿರುಗಿಸಬಹುದು.

**ಕುಂಭ** ನಿಮ್ಮ ಅಭ್ಯಾಸವನ್ನು ಬದಲಾಯಿಸಿಕೊಳ್ಳುವುದೊಳ್ಳೆಯದು. ಸಂಗಾತಿಯ ಕೆಟ್ಟ ಆರೋಗ್ಯದಿಂದಾಗಿ ಇಂದು ಪ್ರಣಯಕ್ಕೆ ಧಕ್ಕೆಯಾಗುತ್ತದೆ. ನಿಮ್ಮ ವೃತ್ತಿ ಅವಕಾಶಗಳನ್ನು ಹೆಚ್ಚಿಸಲು ನಿಮ್ಮ ವೃತ್ತಿಪರ ಶಕ್ತಿಯನ್ನು ಬಳಸಿ.

**ಮೀನ** ನಿಮ್ಮ ನೀಡುವ ವರ್ತನೆ ಪರೋಕ್ಷವಾಗಿ ನಿಮಗೆ ಆಶೀರ್ವಾದವೇ ಆಗುತ್ತದೆ, ಏಕೆಂದರೆ ನೀವು ಅನುಮಾನ, ನಿರಾಸೆ, ಅಸೂಯೆಯಂಥ ಅನೇಕ ದುರ್ಗುಣಗಳಿಂದ ಮುಕ್ತಿ ಹೊಂದುವ ಸಾಧ್ಯತೆಗಳಿವೆ.

## ಚಿತ್ರದುರ್ಗದ ಖಾಸಗಿ ಶಾಲೆ ಬಳಿ ಶಿಶುವಿನ ಶವ ಪತ್ತೆ : ನಾಯಿ ಕಚ್ಚಿ ತಂದಿರುವ ಶಂಕೆ

• ಉದಯವಾಹಿನಿ, ಚಿತ್ರದುರ್ಗ

ಚಿತ್ರದುರ್ಗ ನಗರದ ಖಾಸಗಿ ಶಾಲೆ ಬಳಿ ನವಜಾತ ಶಿಶುವಿನ ಶವ ಪತ್ತೆಯಾಗಿದ್ದು ಹೂತಿದ್ದ ಶಿಶುವಿನ ಶವವನ್ನು ನಾಯಿಗಳು ಕಚ್ಚಿ ತಂದಿರುವ ಶಂಕೆ ವ್ಯಕ್ತವಾಗಿದೆ. ಚಿತ್ರದುರ್ಗ ನಗರದ ಚಳ್ಳಕೆರೆ ಗೇಟ್ ಬಳಿಯ ವೆಂಕಟೇಶ್ವರ್ ಶಾಲೆಯ ಮೈದಾನದಲ್ಲಿ ಶಿಶುವಿನ ಶವ ಪತ್ತೆಯಾಗಿದ್ದು, ಹೂತಿದ್ದ ಶಿಶುವನ್ನು ನಾಯಿಗಳು ಕಚ್ಚಿ ತಿಂದು ಹಾಕಿರುವ ಶಂಕೆ ವ್ಯಕ್ತವಾಗಿದೆ. ಅರೆಬರೆ ಹೂತಿದ್ದ ನವಜಾತ ಶಿಶುವನ್ನು ನಾಯಿಗಳು ಕಚ್ಚಿ ಅರ್ಧ ತಿಂದು ಬಿಟ್ಟು ಹೋಗಿರುವ ಶಂಕೆ ವ್ಯಕ್ತವಾಗಿದೆ. ಹೆಚ್ಚಿನ ಮಾಹಿತಿ ನಿರೀಕ್ಷಿಸಲಾಗಿದೆ.

## ರಿವರ್ಸ್ ತೆಗೆಯುವಾಗ ಕಾರಿನ ಚಕ್ರಕ್ಕೆ ಸಿಲುಕಿ 2 ವರ್ಷದ ಮಗು ಸಾವು

• ಉದಯವಾಹಿನಿ, ಬೆಳಗಾವಿ

ಬೆಳಗಾವಿಯಲ್ಲಿ ಘೋರ ಘಟನೆಯೊಂದು ನಡೆದಿದ್ದು, ಕಾರು ರಿವರ್ಸ್ ತೆಗೆದುಕೊಳ್ಳುವಾಗ ಕಾರಿನ ಚಕ್ರಕ್ಕೆ ಸಿಲುಕಿ 2 ವರ್ಷದ ಮಗುವೊಂದು ಸಾವನ್ನಪ್ಪಿರುವ ಘಟನೆ ನಡೆದಿದೆ. ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಖಜಗೌಡನಟ್ಟಿ ಗ್ರಾಮದಲ್ಲಿ ಈ ದುರಂತ ಸಂಭವಿಸಿದ್ದು, ಕಾರು ರಿವರ್ಸ್ ತೆಗೆದುಕೊಳ್ಳುವಾಗ ಕಾರಿನ ಗಾಲಿಗೆ ಸಿಲುಕಿ 2 ವರ್ಷದ ಮಗು ಸಾವನ್ನಪ್ಪಿದೆ. ಗ್ರಾಮದ ಮಂಜುನಾಥ್ ಖೋತ ಎಂಬುವರು ಕಾರು ರಿವರ್ಸ್ ತೆಗೆದುಕೊಳ್ಳುವಾಗ ಮಗು ಆಕಸ್ಮಿಕವಾಗಿ ಕಾರಿನ ಹಿಂದಿನ ಚಕ್ರಕ್ಕೆ ಸಿಲುಕಿ ಮೃತಪಟ್ಟಿದೆ. ಅನುಶ್ರೀ ರಾಮಕೃಷ್ಣ ಖೋತ(2) ಮೃತಪಟ್ಟ ಮಗು. ಘಟನೆ ಸಂಬಂಧ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

## ಮನನೊಂದು ವಿದ್ಯಾರ್ಥಿನಿ ಆತ್ಮಹತ್ಯೆ

• ಉದಯವಾಹಿನಿ, ಶಿವಮೊಗ್ಗ

ರಾಜ್ಯದಲ್ಲಿ ಮತ್ತೊಂದು ಘೋರ ಘಟನೆಯೊಂದು ನಡೆದಿದ್ದು, ಪೋಷಕರು ಮೊಬೈಲ್ ನೋಡಬೇಡ ಎಂದಿದ್ದಕ್ಕೆ ಮನನವೊಂದು ವಿದ್ಯಾರ್ಥಿನಿ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡ ಘಟನೆ ಶಿವಮೊಗ್ಗದಲ್ಲಿ ನಡೆದಿದೆ. ಶಿವಮೊಗ್ಗ ಜಿಲ್ಲೆಯ ಹಾರನಹಳ್ಳಿ ಗ್ರಾಮದ ಯುವತಿ ಧನುಶ್ರೀಗೆ ಪೋಷಕರು ಹೆಚ್ಚು ಮೊಬೈಲ್ ನೋಡಬೇಡ ಎಂದು ಬುದ್ಧಿಮಾತು ಹೇಳಿದಕ್ಕೆ ಮನನೊಂದು ಕಳೆದ 3 ದಿನಗಳ ಹಿಂದೆ ವಿಷ ಸೇವಿಸಿದ್ದರು. ಕೂಡಲೇ ಪೋಷಕರು ಧನುಶ್ರೀಯನ್ನು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ದಾಖಲಿಸಿದ್ದರು. ಕಳೆದ ಮೂರು ದಿನಗಳಿಂದ ವಿದ್ಯಾರ್ಥಿನಿ ಧನುಶ್ರೀಗೆ ಮೆಗ್ಗಾನ್ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಧನುಶ್ರೀ ಮೃತಪಟ್ಟಿದ್ದಾಳೆ.

## ಜೀಪ್-ಟಿಟಿ ನಡುವೆ ಭೀಕರ ಅಪಘಾತ 8 ಮಂದಿಗೆ ಗಾಯ, ಮೂವರ ಸ್ಥಿತಿ ಗಂಭೀರ

• ಉದಯವಾಹಿನಿ, ಶಿವಮೊಗ್ಗ

ಜಿಲ್ಲೆಯಲ್ಲಿ ಕೊಡಚಾದ್ರಿ ಬಳಿಯಲ್ಲಿ ಜೀಪ್, ಟಿಟಿ ನಡುವೆ ಮುಖಾಮುಖಿ ಡಿಕ್ಕಿಯಾಗಿ ಸಂಭವಿಸಿದಂತ ಭೀಕರ ಅಪಘಾತದಲ್ಲಿ 8 ಮಂದಿ ಗಾಯಗೊಂಡಿದ್ದಾರೆ. ಇವರಲ್ಲಿ ಮೂವರ ಸ್ಥಿತಿ ಗಂಭೀರವಾಗಿರುವುದಾಗಿ ತಿಳಿದು ಬಂದಿದೆ. ಶಿವಮೊಗ್ಗ ಜಿಲ್ಲೆಯ ಹೊಸನಗರದ ನಿಟ್ಟೂರು ಸಮೀಪದ ಕೊಡಚಾದ್ರಿಯಲ್ಲಿ ಭೀಕರ ಅಪಘಾತ ಸಂಭವಿಸಿದೆ. ಕೊಲ್ಲೂರಿನಿಂದ ಕೊಡಚಾದ್ರಿಗೆ ತೆರಳುತ್ತಿದ್ದಂತ ಜೀಪ್ ಗೆ ಶಿವಮೊಗ್ಗದ ಕಡೆಯಿಂದ ಸಾಗುತ್ತಿದ್ದಂತ ಟಿಟಿ ವಾಹನ ಡಿಕ್ಕಿಯಾಗಿ ಈ ಅಪಘಾತ ನಡೆದಿದೆ. ಟಿಟಿ ಹಾಗೂ ಜೀಪ್ ನಡುವಿನ ಅಪಘಾತದಲ್ಲಿ 8 ಜನರು ಗಾಯಗೊಂಡಿದ್ದಾರೆ. ಇವರಲ್ಲಿ ಮೂವರ ಸ್ಥಿತಿ ಗಂಭೀರವಾಗಿರೋದಾಗಿ ತಿಳಿದು ಬಂದಿದೆ. ಅವರನ್ನು ಕುಂದಾಪುರದ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗುತ್ತಿದೆ. ಈ ಸಂಬಂಧ ಹೊಸನಗರ ಠಾಣೆಯಲ್ಲಿ ಪ್ರಕರಮ ದಾಖಲಾಗಿದೆ.

# ನಕಲಿ ಗಾಂಧಿಗಳನ್ನು ಮೆಚ್ಚಿಸಲು ಕನ್ನಡಿಗರ ತೆರಿಗೆ ಹಣ ಪೋಲು

## ಗಾಂಧಿ ಅವರ ಹೆಸರಿನಲ್ಲಿ ಸಿದ್ದರಾಮಯ್ಯನವರ ಸರ್ಕಾರ ಜನರ ತೆರಿಗೆ ದುಡ್ಡಲ್ಲಿ, ಕಾಂಗ್ರೇಸ್ ಪಕ್ಷದ ಜಾತ್ರೆ ಮಾಡುತ್ತಿದೆ

• ಉದಯವಾಹಿನಿ, ಬೆಳಗಾವಿ

ಮಹಾತ್ಮ ಗಾಂಧಿ ಹೆಸರಿನಲ್ಲಿ ನಕಲಿ ಗಾಂಧಿಗಳನ್ನು ಮೆಚ್ಚಿಸಲು ಕನ್ನಡಿಗರ ತೆರಿಗೆ ಹಣ ಪೋಲು ಮಾಡಲಾಗುತ್ತಿದೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಜಗದೀಶ್ ಶೆಟ್ಟರ್ ಆರೋಪ ಮಾಡಿದರು. ಬೆಳಗಾವಿಯಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದೇಶದ ಸ್ವಾತಂತ್ರ್ಯ ಹೋರಾಟ ಉಚ್ಛ್ರಾಯ ಘಟ್ಟದಲ್ಲಿದ್ದ ಸಂದರ್ಭದಲ್ಲಿ, ಬೆಳಗಾವಿಯ ನೆಲದಲ್ಲಿ ಮಹಾತ್ಮ ಗಾಂಧಿಯವರ ಅಧ್ಯಕ್ಷತೆಯಲ್ಲಿ ನಡೆದ ಅಧಿವೇಶನಕ್ಕೆ ಇಂದು ಶತಮಾನದ ಸಂಭ್ರಮ.

ಗಾಂಧಿ ಅವರ ಹೆಸರಿನಲ್ಲಿ ಸಿದ್ದರಾಮಯ್ಯನವರ ಸರ್ಕಾರ ಜನರ ತೆರಿಗೆ ದುಡ್ಡಲ್ಲಿ, ಕಾಂಗ್ರೇಸ್ ಪಕ್ಷದ ಜಾತ್ರೆ ಮಾಡುತ್ತಿದೆ ಎಂದು ಜಗದೀಶ್ ಶೆಟ್ಟರ್ ಆರೋಪ ಮಾಡಿದರು. ರಾಜ್ಯ ಸರ್ಕಾರ ಮತ್ತು ಕಾಂಗ್ರೇಸ್ ಪಕ್ಷ ನಕಲಿ ಗಾಂಧಿಗಳ ಗುಲಾಮಗಿರಿ ಮಾಡಲು, ಮಹಾತ್ಮ ಗಾಂಧೀಜಿಯವರ ಹೆಸರನ್ನು ಬಳಸಿಕೊಂಡು ರಾಜ್ಯದ ಜನರ ತೆರಿಗೆ ಹಣವನ್ನು ಪೋಲು ಮಾಡುತ್ತಿದೆ. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಕಾಂಗ್ರೇಸ್ ಎಂಬುದು ರಾಜಕೀಯ ಪಕ್ಷವಾಗಿರಲಿಲ್ಲ, ದೇಶದ ಸ್ವಾತಂತ್ರ್ಯ ಹೋರಾಟಗಾರರಿಗೆ ವೇದಿಕೆಯಾಗಿತ್ತು.

ಸ್ವಾತಂತ್ರ್ಯದ ನಂತರ ಕಾಂಗ್ರೇಸ್ ಪಕ್ಷವನ್ನು ವಿಸರ್ಜಿಸಬೇಕೆಂದು ಮಹಾತ್ಮ ಗಾಂಧಿ ಬಯಸಿದ್ದರು. ಆದರೆ ಅವರ ಆಶಯಕ್ಕೆ ವಿರುದ್ಧವಾಗಿ ನಡೆದುಕೊಳ್ಳುತ್ತಿರುವ ಕಾಂಗ್ರೇಸ್ ಪಕ್ಷವು ಇಂದು ಅವರ ಹೆಸರಿನಲ್ಲಿ ಕಾರ್ಯಕ್ರಮ ನಡೆಸುತ್ತಿರುವುದು ಹಾಸ್ಯಾಸ್ಪದ ಎಂದು ಹೇಳಿದರು. ಮಹಾತ್ಮ ಗಾಂಧಿ ಅಂದಿನ ಬೆಳಗಾವಿ ಅಧಿವೇಶನವು ಕಾಂಗ್ರೇಸ್ ಕಡು ವಿರೋಧಿಯಾಗಿದ್ದ ಸ್ವರಾಜ್ಯ ಪಕ್ಷದವರನ್ನೂ ವೇದಿಕೆಯ ಮೇಲೆ ಒಂದುಗೂಡಿಸುವುದರ ಮೂಲಕ ಐಕ್ಯತಾ ಸಮ್ಮೇಳನ ಎಂಬ ಖ್ಯಾತಿಗೆ ಪಾತ್ರವಾಗಿತ್ತು. ಆದರೆ ಈಗ ಅದರ ಸಂಭ್ರಮಾಚರಣೆಯಲ್ಲಿ ನಡೆಯುತ್ತಿರುವ ಕಾರ್ಯಕ್ರಮಕ್ಕೆ ವಿರೋಧ ಪಕ್ಷದವರಿಗೆ ಕನಿಷ್ಠ ಸೌಜನ್ಯಕ್ಕೂ ಈ ಕಾಂಗ್ರೇಸ್ ಸರ್ಕಾರ ಆಹ್ವಾನ ನೀಡಿಲ್ಲ ಎಂದು ಟೀಕೆ ಮಾಡಿದರು. ಈಗಿನ ಕಾಂಗ್ರೇಸ್ ನಾಯಕರಿಗೆ ಸುಳ್ಳೇ ಅವರ ಮನೆ ದೇವರಾಗಿದೆ. ಮುಖ್ಯಮಂತ್ರಿಗಳು ತಮ್ಮ ಸಮ್ಮುಖದಲ್ಲೇ ಜಗದೀಶ ಶೆಟ್ಟರ ಅವರಿಗೆ ಕರೆ ಮಾಡಿ ಖುದ್ದು ಆಹ್ವಾನ ನೀಡಿದ್ದಾರೆಂಬ ಡಿ.ಕೆ ಶಿವಕುಮಾರ್ ಅವರ ಹೇಳಿಕೆ ಶುದ್ಧ ಸುಳ್ಳು. ಮುಖ್ಯಮಂತ್ರಿಗಳ ಕರೆ ಒತ್ತಟ್ಟಿಗಿರಲಿ, ಯಾವುದೇ ಹಿರಿಯ ಅಧಿಕಾರಿಗಳಿಂದಲೂ ನನಗೆ ಸೌಜನ್ಯಕ್ಕೂ ಅಧಿಕೃತ ಆಹ್ವಾನ ಬಂದಿಲ್ಲ. ಡಿ.ಕೆ ಶಿವಕುಮಾರ್ ಅವರು ಈ ರೀತಿ ಹಸಿ ಸುಳ್ಳುಗಳ ಮೂಲಕ ಜನರ ದಾರಿ ತಪ್ಪಿಸಲು ಯತ್ನಿಸುತ್ತಿದ್ದಾರೆ ಎಂದು ಶೆಟ್ಟರ ಹೇಳಿದರು. ಇದಲ್ಲದೆ ಈ ಸಂದರ್ಭದಲ್ಲಿ ಅನವಶ್ಯಕವಾಗಿ ದಿ.ಸುರೇಶ ಅಂಗಡಿ ಅವರ ಸಾವನ್ನು ತಮ್ಮ ನೀಚ ರಾಜಕಾರಣಕ್ಕೆ ಉಪಯೋಗಿಸಿಕೊಳ್ಳುತ್ತಿರುವ ಡಿ.ಕೆ ಶಿವಕುಮಾರ್ ಅವರು ತಮ್ಮ ನಿರ್ಲಜ್ಜ ರಾಜಕಾರಣದ ತುದಿ ತಲುಪಿದ್ದಾರೆ. ದಿ. ಸುರೇಶ ಅಂಗಡಿಯವರು ಬೆಳಗಾವಿ ಜನತೆಯ ಪ್ರೀತಿ, ಆಶೀರ್ವಾದಿಂದ ಕೇಂದ್ರ ಸಚಿವರಾಗಿದ್ದರು.

ನಕಲಿ ಗಾಂಧಿಗಳ ಗುಲಾಮಗಿರಿ



ಕೋವಿಡ್ ಮಹಾಮಾರಿಗೆ ಅವರು ಉಸಿರು ಚೆಲ್ಲಿದ ಬಳಿಕ, ಅವರನ್ನು ಕೊನೆಯದಾಗಿ ಕಣ್ಣುಂಬಿಕೊಳ್ಳಬೇಕು, ಅವರು ಹುಟ್ಟಿ ಬೆಳೆದ ನೆಲದಲ್ಲಿಯೇ ಅವರ ಅಂತ್ಯಸಂಸ್ಕಾರ ಆಗಬೇಕೆಂದು ಬೆಳಗಾವಿ ಜನರ ಬೇಡಿಕೆಯಾಗಿತ್ತು. ಆದರೆ ಅಂದಿನ ಸಂದರ್ಭದಲ್ಲಿ ಸರ್ಕಾರದ ಕೋವಿಡ್ ನಿಯಮಾವಳಿಗಳನ್ನು ನಾವು ಪಾಲಿಸಬೇಕಿತ್ತು. ಆದ್ದರಿಂದ, ಅವರ ಪಾರ್ಥಿವ ಶರೀರವನ್ನು ಇಲ್ಲಿಗೆ ತರಲಾಗಲಿಲ್ಲವೆಂಬ ಬೇಸರ ಇನ್ನೂ ನಮಗೆ ಕಾಡುತ್ತಿದೆ ಎಂದು ಹೇಳಿದರು.

### ಕಾಂಗ್ರೇಸ್ ಕಾರ್ಯಕ್ರಮ

ಈ ಸಂಭ್ರಮಾಚರಣೆಯ ಅಂಗವಾಗಿ ರಾಜ್ಯ ಸರ್ಕಾರವು ಗಾಂಧಿ ಭಾರತ ಎಂಬ ಕಾರ್ಯಕ್ರಮವನ್ನು ಆಯೋಜಿಸಿರುವುದು ಸ್ವಾಗತಾರ್ಹ. ಆದರೆ ಈ ಕಾರ್ಯಕ್ರಮದ ರೂಪುರೇಷೆಗಳನ್ನು ನೋಡಿದರೆ, ಇದೊಂದು ಸರ್ಕಾರದ ಪ್ರಾಯೋಜಕತ್ವದಲ್ಲಿ ನಡೆಯುತ್ತಿರುವ ಕಾಂಗ್ರೇಸ್ ಕಾರ್ಯಕ್ರಮವಾಗಿ ರೂಪುಗೊಂಡಿದೆ ಎಂದು ಟೀಕೆ ಮಾಡಿದರು.

## ಸಹಕಾರ ಸಂಘಕ್ಕೆ ಆರ್ಥಿಕ ಶಿಸ್ತು ಅಗತ್ಯ: ಜ್ಯಾಂತಿಕರ್

• ಉದಯವಾಹಿನಿ, ಬೀದರ್

ಯಾವುದೇ ಸಹಕಾರ ಸಂಘ ಯಶಸ್ಸು ಗಳಿಸಬೇಕಾದರೆ ಆರ್ಥಿಕ ಶಿಸ್ತು ಬಹಳ ಅಗತ್ಯ' ಎಂದು ಸಂಯುಕ್ತ ಸಹಕಾರಿ ರಾಜ್ಯ ನಿರ್ದೇಶಕ ಗುರುನಾಥ ಜ್ಯಾಂತಿಕರ್ ತಿಳಿಸಿದರು. ನಗರದ ನೌಬಾದ್ ಸಮೀಪದ ಸಹಾರ್ದ ತರಬೇತಿ ಕೇಂದ್ರದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಬೆಂಗಳೂರು ಪ್ರಾಂತೀಯ ಕಚೇರಿ ಕಲಬುರಗಿಯಿಂದ ಏರ್ಪಡಿಸಿದ್ದ ಬೀದರ್ ಜಿಲ್ಲೆಯ ಸೌಹಾರ್ದ ಸಹಕಾರಿ ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಸಭೆ ಉದ್ಘಾಟಿಸಿ ಮಾತನಾಡಿದರು.

ಒಂದು ಸಹಕಾರ ಸಂಘವು ಗುಣಮಟ್ಟದ ಸೇವೆಯನ್ನು ನೀಡಿ ಮಾದರಿ ಎನ್ನುವಂತೆ ಕೆಲಸ ನಿರ್ವಹಿಸಬೇಕು.

ಅದರಲ್ಲೂ ಸಹಕಾರ ಸಂಘದಲ್ಲಿ ಆರ್ಥಿಕ ಶಿಸ್ತು ಅತ್ಯಂತ ಅವಶ್ಯಕ. ಸಹಕಾರಿ ಕಾಯ್ದೆ ಮತ್ತು ಉಪವಿಧಿಯಲ್ಲಿನ ಅಂಶಗಳನ್ನು ಅರ್ಥ ಮಾಡಿಕೊಂಡು ಆಡಳಿತ ಮಂಡಳಿಗೆ ಸಲಹೆ ನೀಡಬೇಕು ಎಂದು ಹೇಳಿದರು. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ 2025ನೇ ಸಾಲಿನ ಕ್ಯಾಲೆಂಡರ್ ಅನ್ನು ಸಹಕಾರ ಇಲಾಖೆಯ ಉಪನಿಬಂಧಕಿ


ಉದಯವಾಹಿನಿ ಚಿತ್ರ

ಮಂಜುಳಾ ಬಿಡುಗಡೆಗೊಳಿಸಿದರು. ಸೌಹಾರ್ದ ದಾವಾ ಪಂಚಾಯ್ತಿ ನ್ಯಾಯಾಲಯದ (411) ಸಹಾಯಕ ನಿಬಂಧಕ ಪ್ರೇಮಾನಂದ, ಸಹಾರ್ದ ತರಬೇತಿ ಕೇಂದ್ರದ ಸುಬ್ರಮಣ್ಯ ಪ್ರಭು, ಜಿಲ್ಲಾ ಒಕ್ಕೂಟದ ಉಪಾಧ್ಯಕ್ಷ ಸಂಜೀವಕುಮಾರ ಪಾಟೀಲ, ಸಂಯುಕ್ತ ಸಹಕಾರಿ ವ್ಯವಸ್ಥಾಪಕ ನಿರ್ದೇಶಕ ಶರಣಗೌಡ ಜಿ. ಪಾಟೀಲ, ಪ್ರಾಂತೀಯ ವ್ಯವಸ್ಥಾಪಕ ಸೂರಕಾಂತ ರಾಕಲೇ, ತರಬೇತಿ ಅಧಿಕಾರಿ ಶಿವಕುಮಾರ ಬಿರಾದಾರ ಹಾಜರಿದ್ದರು. ಸರ್ಕಾರಿ ನೌಕರರ ಸಂಘದ ನೂತನ ಜಿಲ್ಲಾಧ್ಯಕ್ಷ ಸೋಮಶೇಖರ ಬಿರಾದಾರ ಹಾಗೂ ಖಜಾಂಚಿ ದೇವಪ್ಪ ಅವರನ್ನು ಸನ್ಮಾನಿಸಲಾಯಿತು. ಶರಣಗೌಡ ಜಿ. ಪಾಟೀಲ ಪ್ರಾಸ್ತಾವಿಕ ಮಾತನಾಡಿದರು. ಸೂರಕಾಂತ ರಾಕಲೇ ಸ್ವಾಗತಿಸಿದರು. ಶಕುಂತಲಾ ಪ್ರಾರ್ಥನೆ ಮಾಡಿದರು. ಅಭಿವೃದ್ಧಿ ಅಧಿಕಾರಿ ವೀರಶೆಟ್ಟಿ ನಿರೂಪಿಸಿ, ವಂದಿಸಿದರು.

## ಉದಯ ವಾಹಿನಿ ವರದಿಗೆ ಎಚ್ಚೆತ್ತ ಅಧಿಕಾರಿಗಳು

• ಉದಯವಾಹಿನಿ, ಯಾದಗಿರಿ

ಗುರುಮಠಕಲ್ ತಾಲ್ಲೂಕಿನ ನವಬುರ್ಜ ಗ್ರಾಮಕ್ಕೆ ಮೂಲಭೂತ ಸೌಕರ್ಯದಿಂದ ವಂಚಿತವಾಗಿದೆ ಹಾಗೂ ಜೀವ ಬಲಿಗಾಗಿ ಕಾಯುತ್ತಿರುವ ತೆರೆದ ಭಾವಿ ಎಂಬ ತಲೆಬರಹ ಅಡಿಯಲ್ಲಿ ದಿಂ. 22 ಡಿಸೆಂಬರ್‌ರಂದು **ಉದಯ ವಾಹಿನಿ**ಯಲ್ಲಿ ಸುದ್ದಿ ಪ್ರಕಟಿಸಲಾಗಿತ್ತು ಸುದ್ದಿಯ ಹಿನ್ನಲೆಯಲ್ಲಿ ಅಧಿಕಾರಿಗಳ ದಂಡು ಸ್ಥಳಕ್ಕೆ ಬೇಟಿ ನೀಡಿದರು.

ತಾಲ್ಲೂಕ ಪಂಚಾಯತ ಕಾರ್ಯ ನಿರ್ವಾಹಕ ಅಧಿಕಾರಿಗಳವರಾದ ಅಂಬ್ರೇಶ ಪಾಟೀಲ್ ರವರು ಮಾತನಾಡಿ ತಕ್ಷಣದ ತೆರೆದ ಭಾವಿ ಮುಚ್ಚಿ, ಮತ್ತು ಸಿಸಿರಸ್ತೆ ಚರಂಡಿ ಕಾಮಗಾರಿಗಳನ್ನು ಪ್ರಾರಂಭ ಮಾಡಿ ತಂಗು ಗುಂಡಿಗಳ ಮರ್ಮ ನಿಂದ ಮುಚ್ಚಿ, ಕಲುಶಿತ ನೀರು ನಿಲ್ಲದಂತೆ ನೋಡಿಕೊಳ್ಳಿ ನಂತರ ಬ್ಲಿಚಿಂಗ್ ಪೌಡರ ಸಿಂಪಡಿಸಿ ಸ್ಥಳದಲ್ಲಿ ಸಿಬ್ಬಂದಿಗಳಿಗೆ ಸೂಚಸಿದರು.

ಉದಯ ವಾಹಿನಿ IMPACT ಫಲಶ್ರುತಿ

ಸಮಸ್ಯೆ ಶೀಘ್ರದಲ್ಲೆ ಇತ್ಯಾರ್ಥಕ್ಕೆ ಭರವಸೆ

ಸ್ಥಳಕ್ಕೆ ಗುರುಮಠಕಲ್ ತಾಲ್ಲೂಕ ಪಂಚಾಯತ ಕಾರ್ಯ ನಿರ್ವಾಹಕ ಅಧಿಕಾರಿಗಳು ಅಂಬ್ರೇಶ ಪಾಟೀಲ್, ಗ್ರಾಮ ಪಂಚಾಯತಿ ಯಲ್ಹೇರಿ ಪಿಡಿಓ ಶೋಭಾ ಪಾಟೀಲ, ಜೆಇ ಹಾಗೂ ಅವರ ಸಿಬ್ಬಂದಿ ವರ್ಗ ನವಬುರ್ಜ ಗ್ರಾಮಕ್ಕೆ ಭೇಟಿ ನೀಡಿ ಸಮಸ್ಯೆ ಅತಿ ಶೀಘ್ರದಲ್ಲೇ ಬಗೆಹರಿಸುವುದಾಗಿ ಬರವಸೆ ನೀಡಿದರು. ಮಲ್ಲೇಶ, ಭೀಮರಾಯ, ಶರಣಪ್ಪ, ಶಂಕರ, ತಾಯಪ್ಪ, ಭಿಮಾಶಂಕರ,


ಉದಯವಾಹಿನಿ ಚಿತ್ರ


ನವಬುರ್ಜ ಗ್ರಾಮಕ್ಕೆ ಅಧಿಕಾರಿಗಳ ದಂಡು ದೌಡು


ಜೀವ ಬಲಿಗಾಗಿ ಕಾಯುತ್ತಿರುವ ತೆರೆದ ಬಾವಿ
ಸಾಂಕ್ರಾಮಿಕ ರೋಗ ಹರಡುತ್ತಿದ್ದು ಸೊಳ್ಳೆಗಳ ಹಾವಳಿಗೆ ಜನ ಜಾನುವಾರುಗಳು ತತ್ತರಿಸಿವೆ
ಸಾಂಕ್ರಾಮಿಕ ರೋಗದ ಭೀತಿ

ಬಸವರಾಜ, ಹುಸೇನಿ, ರಮೇಶ, ಹಣಮಂತ, ಯಂಕಮ್ಮ, ನಿಲಕಂಠಸ್ವಾಮಿ, ಮಲ್ಲಮ್ಮ, ಲಕ್ಷ್ಮಿಮ್ಮ, ತಾಯಮ್ಮ, ಭೀಮವ್ವ, ಶರಣಮ್ಮ, ನಾಗಮ್ಮ, ತಾಯಮ್ಮ, ಬಾಲಮ್ಮ, ಚಂದಮ್ಮ, ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು.

## ಕೆಜಿಎಫ್ ಚುನಾವಣೆಯಲ್ಲಿ ಅಕ್ರಮ

• ಉದಯವಾಹಿನಿ, ಚಿಕ್ಕಮಗಳೂರು



ಕರ್ನಾಟಕ ಬೆಳೆಗಾರರ ಒಕ್ಕೂಟದ(ಕೆಜಿಎಫ್) ಪದಾಧಿಕಾರಿಗಳ ಆಯ್ಕೆಯನ್ನು ನಿಯಮ ಬಾಹಿರ ಮತ್ತು ಅಕ್ರಮವಾಗಿ ಮಾಡಲಾಗಿದೆ ಎಂದು ಕಾಫಿ ಮಂಡಳಿ ಮಾಜಿ ಸದಸ್ಯ ಡಿ.ಎಂ. ವಿಜಯ್ ಆರೋಪಿಸಿದ್ದಾರೆ.

ಪದಾಧಿಕಾರಿಗಳ ಆಯ್ಕೆಗೆ ಚುನಾವಣೆ ನಡೆಸಬೇಕು ಅಥವಾ ಸರ್ವ ಸದಸ್ಯರ ಸಭೆಯಲ್ಲಿ ಆಯ್ಕೆ ಮಾಡಬೇಕು. ಉಪಾಧ್ಯಕ್ಷರಾದವರನ್ನೇ ಅಧ್ಯಕ್ಷರನ್ನಾಗಿ ಮಾಡಬೇಕು ಎಂಬ ನಿಯಮ ಒಕ್ಕೂಟದ ಬೈಲಾದಲ್ಲಿ ಇದ್ದರೂ ಅದನ್ನು ಕಡೆಗಣಿಸಿ ಒಕ್ಕೂಟಕ್ಕೆ ಹೊಸದಾಗಿ ಸದಸ್ಯರಾದವರನ್ನು ಅಧ್ಯಕ್ಷರನ್ನಾಗಿ ಮಾಡಲಾಗಿದೆ ಎಂದು ಹೇಳಿಕೆಯಲ್ಲಿ ದೂರಿದ್ದಾರೆ.

ಕರ್ನಾಟಕ ಬೆಳೆಗಾರರ ಒಕ್ಕೂಟದ ಬೈಲಾದ ಪ್ರಕಾರ ಒಕ್ಕೂಟದ ಸರ್ವ ಸದಸ್ಯರ ಸಭೆಯನ್ನು ಕರೆದು ಅದರಲ್ಲಿ ಪದಾಧಿಕಾರಿಗಳ ಆಯ್ಕೆಯನ್ನು ಮಾಡಿಲ್ಲ ಅಥವಾ ಚುನಾವಣೆಯನ್ನೂ ನಡೆಸಿಲ್ಲ. ಚುನಾವಣೆಗಾಗಿ ನೇಮಿಸಲಾಗಿದ್ದ ಇಬ್ಬರು ಚುನಾವಣಾಧಿಕಾರಿಗಳು ಗೈರಾಗಿದ್ದರೂ, ಪದಾಧಿಕಾರಿಗಳ ಆಯ್ಕೆಯ ವಿವಾದ ನ್ಯಾಯಾಲಯದಲ್ಲಿದ್ದರೂ ಕಾನೂನು ಗಾಳಿಗೆ ತೂರಿ ಚುನಾವಣೆ ಅಧ್ಯಕ್ಷರನ್ನು ಏಕಾಏಕಿ ಘೋಷಿಸಿದೆ. ಒಕ್ಕೂಟದ ಆಡಳಿತ ಮಂಡಳಿ ಗುಂಪುಗಾರಿಕೆ ನಡೆಸಿದೆ. ಆ ಮೂಲಕ ಸರ್ವಾಧಿಕಾರಿ ಧೋರಣೆಯನ್ನು ಪ್ರದರ್ಶಿಸಿದೆ ಎಂದು ಆರೋಪಿಸಿದ್ದಾರೆ. ಒಕ್ಕೂಟದ ಆಡಳಿತ ಮಂಡಳಿ ಕಾನೂನು ಬಾಹಿರವಾಗಿ ಮಾಡಿರುವ ಪದಾಧಿಕಾರಿಗಳ ಆಯ್ಕೆಯನ್ನು ಕೂಡಲೇ ರದ್ದುಗೊಳಿಸಬೇಕು. ಒಕ್ಕೂಟದ ನಿಯಮಗಳ ಪ್ರಕಾರ ಚುನಾವಣೆ ನಡೆಸಿ ಪದಾಧಿಕಾರಿಗಳ ಆಯ್ಕೆ ಮಾಡಬೇಕು ಎಂದು ಆಗ್ರಹಿಸಿದ್ದಾರೆ.

## ಅಕ್ರಮ ಕಲ್ಲು ಗಣಿಗಾರಿಕೆ: ನೋಟಿಸ್ ಜಾರಿ

• ಉದಯವಾಹಿನಿ, ಶಹಾಪುರ

ತಾಲ್ಲೂಕಿನ ಶಿರವಾಳ ಗ್ರಾಮದ ಕೃಷಿ ಜಮೀನಿನಲ್ಲಿ ಕೃಷಿಯೇತರನ್ನಾಗಿ ಪರಿವರ್ತಿಸದೆ ಅಕ್ರಮವಾಗಿ ಕಲ್ಲು ಗಣಿಗಾರಿಕೆ ಬಳಸುತ್ತಿರುವುದು ಕಂಡ ಬಂದ ಹಿನ್ನೆಲೆಯಲ್ಲಿ ಕಂದಾಯ ಇಲಾಖೆಯ ಅಧಿಕಾರಿಗಳು ಮೂರು ದಿನದ ಹಿಂದೆ (ಡಿ.21) 24 ರೈತರಿಗೆ ನೋಟಿಸು ಜಾರಿ ಮಾಡಿದ್ದಾರೆ. ತಮ್ಮ ಜಮೀನು ಕೃಷಿ ಜಮೀನು ಆಗಿದ್ದು, ಬೇಸಾಯದ ಉದ್ದೇಶಕ್ಕಾಗಿ ಇರುತ್ತದೆ.

ಆದರೆ ಪ್ರಸ್ತಾವಿತ ಜಮೀನನ್ನು ತಾವು ಕೃಷಿಯೇತರನ್ನಾಗಿ ಪರಿವರ್ತಿಸದೇ ಕಲ್ಲು ಗಣಿಗಾರಿಕೆಯನ್ನು ಯಾವುದೇ ಅನುಮತಿ ಪಡೆಯದೆ ಮಾಡುತ್ತಿರುವುದು ಕಂಡು ಬಂದಿರುತ್ತದೆ. ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ಕಲಂ 95 ಉಲ್ಲಂಘನೆ ಮಾಡಿರುತ್ತೀರಿ ಎಂದು ಕಂದಾಯ ನಿರೀಕ್ಷಕರು ಜಾರಿ ಮಾಡಿದ ನೋಟಿಸಿನಲ್ಲಿ ತಿಳಿಸಿದ್ದಾರೆ. ಅಲ್ಲದೆ ನೋಟಿಸು ಮುಟ್ಟಿದ 3 ದಿನಗಳ ಒಳಗೆ ಸದರಿ ಜಮೀನಿನ ಮೂಲ ಉದ್ದೇಶಕ್ಕಾಗಿ ಉಪಯೋಗಿಸುವಂತೆ ಹಾಗೂ ಅನಧಿಕೃತವಾಗಿ ಕಲ್ಲುಗಣಿಗಾರಿಕೆಯನ್ನು ನಿಲ್ಲಿಸುವಂತೆ ಸೂಚಿಸಿದೆ ಎಂದು ನೋಟಿಸಿನಲ್ಲಿ ಸ್ಪಷ್ಟಪಡಿಸಿದ್ದಾರೆ.

ರೈತರು ತಮ್ಮ ಪಟ್ಟಾ ಜಮೀನುಗಳಲ್ಲಿ ಸುಮಾರು 200 ಅಡಿ ಆಳದಲ್ಲಿ ಮತ್ತು ಒಂದು ಎಕರೆ ವಿಶಾಲವಾಗಿ ಅಗೆದು ಕಲ್ಲುಗಳನ್ನು ಹೊರ ತೆಗೆದು ಮಾರಾಟ ಮಾಡುತ್ತಾರೆ. ಇದೇ ಕಲ್ಲುಗಳನ್ನು (ಬಾಂಡ್) ಮನೆ, ಹಾಸುಗಲ್ಲು ಹಾಕಲು


ಉದಯವಾಹಿನಿ ಚಿತ್ರ

### ಅಧಿಕಾರಿಗಳು ಮೌನ

ತಾಲ್ಲೂಕಿನ ಶಿರವಾಳ ಗ್ರಾಮದಲ್ಲಿ ಹಲವಾರು ವರ್ಷದಿಂದ ಅಕ್ರಮವಾಗಿ ಕಲ್ಲು ಗಣಗಾರಿಕೆ ನಡೆಯುತ್ತಲಿದೆ. ಅದರಲ್ಲಿ ಶಿರವಾಳ-ಅಣಬಿ ರಸ್ತೆಗೆ ಹೊಂದಿಕೊಂಡು ಆಳವಾಗಿ ಜಮೀನು ಅಗೆದು ಹಾಕಿದ್ದಾರೆ. ವಾಹನ ಸಂಚಾರವು ಇದೆ. ಬಸ್ಸು ಚಲಿಸುವಾಗ ತುಸು ಯಾಮಾರಿದರೆ ಅದರಲ್ಲಿಯೇ ಬೀಳಬೇಕು. ಆದರೂ ಯಾರೂ ಕ್ರಮ ತೆಗೆದುಕೊಳ್ಳಲು ಮುಂದಾಗುತ್ತಿಲ್ಲ ಎಂಬ ಆರೋಪ ಕೇಳಿ ಬಂದಿದೆ.

ಬಳಕೆ ಮಾಡುತ್ತಾರೆ. ಹಲವಾರು ಕುಟುಂಬಗಳು ಇದೇ ಕಲ್ಲು ಗಣಿಗಾರಿಕೆಯಿಂದಲೇ ಬದುಕು ಸವೆಸುತ್ತಲಿವೆ. ಜೀವ ಸಂಕುಲಕ್ಕೆ ಅಪಾಯ ಒಡ್ಡುವ ರೀತಿಯಲ್ಲಿ ಕಲ್ಲು ಬ್ಲಾಸ್ಟಿಂಗ್ ಮಾಡುತ್ತಾರೆ. ಇದನ್ನು ತಡೆಗಟ್ಟಲು ಹೋದರೆ ನಮ್ಮ ಜೀವ ಉಳಿಸುವುದಿಲ್ಲ. ಸ್ಥಳೀಯ ಪ್ರಭಾವಿ ರಾಜಕೀಯ ಮುಖಂಡರ ಒಬ್ಬರ ಅಣತಿಯಂತೆ ಅಧಿಕಾರಿಗಳು ಕೆಲಸ ನಿರ್ವಹಿಸುತ್ತಿದ್ದಾರೆ' ಎಂದು ಗ್ರಾಮದ ಮುಖಂಡರು ಅಳುಕುತ್ತಲೇ ತಿಳಿಸಿದರು.

ನಮ್ಮಂತೆ ತಾಲ್ಲೂಕಿನ ಅಣಬಿ, ಹೊಸೂರ, ದೋರನಹಳ್ಳಿ, ಹುರಸಗುಂಡಗಿ ಹೀಗೆ ಹಲವಾರು ಗ್ರಾಮಗಳಲ್ಲಿ ಅಕ್ರಮ ಕಲ್ಲು ಗಣಿಗಾರಿಕೆ ನಡೆಯುತ್ತಿದ್ದರೂ ಕಂದಾಯ ಇಲಾಖೆಯ ಅಧಿಕಾರಿಗಳು ಮೌನ ವಹಿಸಿದ್ದಾರೆ. ನಮ್ಮಂತೆ ಅವರಿಗೂ ನೋಟಿಸು ಜಾರಿ ಯಾಕೆ ಮಾಡಿಲ್ಲ' ಎಂಬ ಪ್ರಶ್ನೆಯನ್ನು ಶಿರವಾಳ ಗ್ರಾಮದ ನೋಟಿಸು ಪಡೆದ ರೈತರೊಬ್ಬರು ಪ್ರಶ್ನಿಸಿದ್ದಾರೆ.

ಬಸನಗೌಡ, ಆರ್‌ಐ ಶಹಾಪುರಶಿರವಾಳ ಗ್ರಾಮದಲ್ಲಿ ಕೃಷಿ ಜಮೀನನ್ನು ಕೃಷಿಯೇತರನ್ನಾಗಿ ಪರಿವರ್ತಿಸದೆ ಅಕ್ರಮ ಕಲ್ಲು ಗಣಿಗಾರಿಕೆಗಾಗಿ ಬಳಸುತ್ತಿರುವ ಬಗ್ಗೆ 24 ರೈತರಿಗೆ 3 ದಿನದ ಹಿಂದೆ ನೋಟಿಸು ಜಾರಿ ಮಾಡಲಾಗಿದೆ. ಕೂಲಿ ಕಾರ್ಮಿಕಹಲವು ವರ್ಷದಿಂದ ಕಲ್ಲು ಗಣಿಗಾರಿಕೆಯಲ್ಲಿ ಕೂಲಿ ಕೆಲಸ ಮಾಡುತ್ತಿದ್ದೇವೆ. ಅಧಿಕಾರಿಗಳು ಬಂದು ಪರಿಶೀಲಿಸುವುದು ಸಾಮಾನ್ಯ ಹಣ ನೀಡಿದ ಮೇಲೆ ಕೆಲಸ ಆರಂಭಿಸುತ್ತೇವೆ. ಇದು ತಾಲ್ಲೂಕಿನ ಅಧಿಕಾರಿಗಳಿಗೆ ಗೊತ್ತಿದೆ.

## ಮೂಲಭೂತ ಸೌಕರ್ಯ ಒದಗಿಸುವಂತೆ ಕಾರಜೋಳರಿಗೆ ಮನವಿ

• ಉದಯವಾಹಿನಿ, ಚಿತ್ರದುರ್ಗ


ಚಿತ್ರದುರ್ಗದ ಐತಿಹಾಸಿಕ ಕೋಟೆಯಲ್ಲಿ ಕುಡಿಯುವ ನೀರು, ಶೌಚಾಲಯ ಸೇರಿದಂತೆ ವಿವಿಧ ಮೂಲಭೂತ ಸೌಕರ್ಯಗಳ ಸಮಸ್ಯೆಗಳ ನಿವಾರಣೆಗಾಗಿ ಕೋಟೆ ವಾಯುವಿಹಾರಿಗಳ ಸಂಘದ ಸದಸ್ಯರು ಸೇರಿದಂತೆ ಚಿತ್ರದುರ್ಗ ನಾಗರೀಕರು ಗುರುವಾರ ಸಂಸದ ಗೋವಿಂದ ಕಾರಜೋಳ ಅವರನ್ನು ಭೇಟಿ ಮಾಡಿ ಮನವಿ ಪತ್ರ ಸಲ್ಲಿಸಿದರು.

ಈಗಾಗಲೇ ಹಿಂದೆ ಇದ್ದ ರೀತಿ ಹಿರಿಯ ನಾಗರಿಕರಿಗೆ ಕೋಟೆಯೊಳಗೆ ಬೆಳಗ್ಗೆ 6 ರಿಂದ 8 ಗಂಟೆವರೆಗೆ. ಮತ್ತು ಸಂಜೆ 4 ರಿಂದ ರವರೆಗೆ ಉಚಿತ ಪ್ರವೇಶಕ್ಕೆ ಅವಕಾಶವನ್ನು ಮುಂದುವರಿಸುವುದರೊಂದಿಗೆ ಕ್ರಮ ಕೈಗೊಳ್ಳುವುದು.

ವಾಯುವಿಹಾರಿಯ ಹಿರಿಯ ನಾಗರಿಕರು ಮತ್ತು ಚಿತ್ರದುರ್ಗ ನಗರದ ನಾಗರಿಕರಿಗೆ ಕೋಟೆಯ ಪ್ರವೇಶ ಶುಲ್ಕದಿಂದ ವಿನಾಯಿತಿ ನೀಡುವುದು.

ಕೋಟೆಯ ಪ್ರವಾಸಿಗರಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಸಾಕಷ್ಟು ಪ್ರಮಾಣದಲ್ಲಿ ಒದಗಿಸಲು ಸಂಬಂಧಿಸಿದ ಅಧಿಕಾರಿಗಳ ಗಮನಕ್ಕೆ ತರುವುದು. ಚಿತ್ರದುರ್ಗ ಕೋಟೆಗೆ ಬರುವ ಪ್ರವಾಸಿಗರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಶೌಚಾಲಯ ವ್ಯವಸ್ಥೆಯನ್ನು ನಿರ್ಮಾಣ ಮಾಡಲು ಸಂಬಂಧಿಸಿದ ಅಧಿಕಾರಿಗಳ ಗಮನಕ್ಕೆ ತರುವುದರ ಮೂಲಕ ನಿರ್ದೇಶನ ನೀಡುವುದು.

ಕೋಟೆಯೊಳಗಿರುವ ಬನಶಂಕರಿ ದೇವಸ್ಥಾನ,


ಉದಯವಾಹಿನಿ ಚಿತ್ರ

ಏಕನಾಥೇಶ್ವರಿ ದೇವಸ್ಥಾನ, ಸಂಪಿಗೆ ಸಿದ್ದೇಶ್ವರ ದೇವಸ್ಥಾನ, ಗಣಪತಿ ದೇವಸ್ಥಾನ, ಪೂಜಾ ಕಾರ್ಯಕ್ರಮಗಳಲ್ಲಿ ಹಾಗೂ ಧಾರ್ಮಿಕ ಚಟುವಟಿಕೆಗಳಲ್ಲಿ ಭಾಗವಹಿಸುವ ಭಕ್ತಾದಿಗಳಿಗೆ ಕೋಟೆ ಪ್ರವೇಶಕ್ಕೆ ಅನುಕೂಲ ಮಾಡುವುದು.

ಪ್ರತಿದಿನ ಬೆಳಗ್ಗೆ ಮತ್ತು ಸಂಜೆ ವಾಕಿಂಗ್ ಮಾಡುವ ಹಿರಿಯ ನಾಗರಿಕರಿಗೆ ಕೋಟೆಯ ಪ್ರವೇಶವನ್ನು ನಿರಾಕರಿಸಿ ಪ್ರವೇಶ ಶುಲ್ಕ ನಿಗದಿಪಡಿಸಿರುವ ಪ್ರಯುಕ್ತ ವಾಯುವಿಹಾರಿಗಳು ಕೋಟೆಯ ಮುಂಬಾಗದಲ್ಲಿರುವ ಸಿಮೆಂಟ್ ರಸ್ತೆಯಲ್ಲಿ ವಾಕಿಂಗ್ ಮಾಡಬೇಕಾಗಿರುವುದರಿಂದ ಕೆಲವರು ಅಪಘಾತಗಳು ಉಂಟಾಗಿ ತೊಂದರೆ ಆಗಿರುವ ಪ್ರಯುಕ್ತ ತಕ್ಷಣ ಪ್ರವೇಶ ಶುಲ್ಕದಿಂದ ವಿನಾಯತಿ ನೀಡಲು ಕೋರಲಾಗಿದೆ.

ಮನವಿ ಪತ್ರ ಸ್ವೀಕರಿಸಿ ಸಕಾರಾತ್ಮಕವಾಗಿ ಸ್ಪಂದಿಸಿ ಮಾತನಾಡಿದ ಸಂಸದ ಗೋವಿಂದ ಕಾರಜೋಳ ತಕ್ಷಣವೇ ಸಮಸ್ಯೆಗಳನ್ನು ಪರಿಹರಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಕರೆಮಾಡಿ ಸೂಚಿಸಿದರು. ಈ ಸಂಧರ್ಭದಲ್ಲಿ ಕೋಟೆ ವಾಯು ವಿಹಾರಿಗಳ ಸಂಘದ ಅಧ್ಯಕ್ಷ ಆರ್. ಸತ್ಯಣ್ಣ, ಸದಸ್ಯರಾದ ಮಲ್ಲಿಕಾರ್ಜುನಪ್ಪ, ಶಾಂತಪ್ಪ, ಭಾರತೀಯ ಯೋಗ ಶಿಕ್ಷಣ ಸಂಸ್ಥೆ ಅಧ್ಯಕ್ಷ ರವಿ ಕೆ.ಅಂಬೇಕರ್ ಇನ್ನಿತರರು ಉಪಸ್ಥಿತರಿದ್ದರು.

# ಅಮಿತ್ ಶಾ ರಾಜೀನಾಮೆಗೆ ಪ್ರಗತಿಪರ ಸಂಘಟನೆಗಳ ಒತ್ತಾಯ

## ಸಂಪತ್ತನ್ನು ಕೊಳ್ಳೆ ಹೊಡೆಯಲು ಕಾರ್ಪೊರೇಟ್ ಬಂಡವಾಳಿಗರಿಗೆ ದೇಶವನ್ನು ಹರಾಜಿಗಿಟ್ಟಿರುವ ಕೇಂದ್ರ ಸರ್ಕಾರ

• ಉದಯವಾಹಿನಿ, ಸಿಂಧನೂರು

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಗೃಹ ಸಚಿವ ಅಮಿತ್ ಶಾ ಮಹಾನ್ ನಾಯಕ ವಿಶ್ವ ಜ್ಞಾನಿ ಡಾ. ಅಂಬೇಡ್ಕರ್ ಅವರ ಬಗ್ಗೆ ಅಧಿವೇಶನ ದಲ್ಲಿ ಅವಹೇಳನಕಾರಿ ಮಾತನಾಡಿದ ಅಮಿತ್ ಶಾ ಕ್ಷಮೆಯಾಚಿಸಿ ಕೂಡಲೇ ರಾಜೀನಾಮೆ ನೀಡಬೇಕೆಂದು ಪ್ರಗತಿಪರ ಸಂಘಟನೆಗಳ ಆಗ್ರಹಿಸಿದರು.

ನಗರದ ಎಪಿಎಂಸಿ ಗಣೇಶ ದೇವಸ್ಥಾನದಿಂದ ಕೇಂದ್ರ ಸರ್ಕಾರ ವಿರುದ್ಧ ಘೋಷಣೆ ಕೂಗುತ್ತ ಬೃಹತ್ ಮೆರವಣಿಗೆ ಮೂಲಕ ಗಾಂಧಿ ಸರ್ಕಲ್ ಬಳಿ ಸರಪಳಿ ಹಾಕಿ ಆಗ್ರಹಿಸಿದರು. ನಂತರ ಬೃಹತ್ ಪ್ರತಿಭಟನೆ ವೇದಿಕೆ ತಲುಪಿ ಆಗ್ರಹಿಸಿದರು.

ಸಂಪತ್ತನ್ನು ಕೊಳ್ಳೆಹೊಡಿಯಲು ಕಾರ್ಪೊರೇಟ್ ಬಂಡವಾಳಿಗರಿಗೆ ದೇಶವನ್ನು ಹರಾಜಿಗಿಟ್ಟಿರುವ ಕೇಂದ್ರದ ಬಿಜೆಪಿ ಸರ್ಕಾರ. ಉದ್ಯಮಿ ಅದಾನಿಗೆ ಬಂದರು ಹಡಗುಕಟ್ಟೆ ಗಣಿಗಾರಿಕೆ.


ಉದಯವಾಹಿನಿ ಚಿತ್ರ

ಕೇಂದ್ರ ಸರ್ಕಾರ ವಿರುದ್ಧ ಘೋಷಣೆ

ಐದು ರಾಜ್ಯಗಳಲ್ಲಿ ವಿದ್ಯುತ್ ಕ್ಷೇತ್ರವನ್ನು ಕೇಂದ್ರ ಸರ್ಕಾರ ಧಾರೆಯೆರೆದೆ ವಾಗ್ದಾಳಿ ವಿರುದ್ಧ ಕಿಡಿಕಾರಿದರು.

ಈ ಸಂದರ್ಭದಲ್ಲಿ ಹಲವು ಸಮುದಾಯಗಳ ಮುಖಂಡರು ಹಾಗೂ ಪ್ರಗತಿಪರ ಸಂಘಟನೆಗಳ ಮುಖಂಡರು ಈ ಪ್ರತಿಭಟನೆಯಲ್ಲಿ ಭಾಗವಹಿಸಿ ಮಾತನಾಡಿದರು.

ಈ ಸಂದರ್ಭದಲ್ಲಿ, ನಾಗರಾಜ ಪೂಜಾರ. ಚಂದ್ರಶೇಖರ ಗೊರೇಬಾಳ. ಡಿ ಎಚ ಕಂಬಳಿ ವೆಂಕನಗೌಡ ಅಶೋಕ್ ನಂಜಲದಿನ್ನಿ. ಶರಣಪ್ಪ ಮರಳಿ ರಮೇಶ್ ಪಾಟೀಲ್ ಬೇರಿಗೆ. ಬಿ ಎನ್ ಯರದಿಹಾಳ. ವಿದ್ಯಾರ್ಥಿಗಳು ಮತ್ತು ಎಲ್ಲಾ ಪ್ರಗತಿಪರ ಸಂಘಟನೆಗಳ ಎಲ್ಲಾ ಕಾರ್ಯಕರ್ತರು ಈ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಡಾ. ಅಂಬೇಡ್ಕರ್ ಅವರ ಬಗ್ಗೆ ಇಡೀ ವಿಶ್ವವೇ ಅವರನ್ನು ಸಂವಿಧಾನ ಶಿಲ್ಪಿ ವಿಶ್ವಜ್ಞಾನಿ ಎಂದು ಹೇಳುವಂತೆ ಮಹಾ ನಾಯಕರನ್ನು ಫ್ಯಾಷನ್ ಎಂದು ನೀನು ಒಬ್ಬ ಅವೇಕ್ ಮಿಸ್ಟರ್ ಅಮಿತ್ ಶಾ ನೀನು ಗೃಹ ಸಚಿವರಾಗಿದ್ದ ಅವರು ಬರೆದಿರುವ ಸಂವಿಧಾನದಿಂದ ಎಂಬುದು ನಿನಗೆ ಅರಿವು ಇದೆಯೇ..? ನೀನೊಬ್ಬ ನಾಲಾಯಕ್ 420 ಗೃಹ ಸಚಿವ ಎಂಬುದು ಇಡೀ ಜಗತ್ತಿಗೆ ಗೊತ್ತಿದೆ. ಅಮಿತ್ ಶಾ ಒಬ್ಬ ನಕಲಿ ನೀನು. ಈ ಹೋರಾಟ ಪ್ರಾರಂಭ ಇನ್ನೂ ದೊಡ್ಡ ಹೋರಾಟ ಮಾಡುವಂತೆ ಶಕ್ತಿ ನಮ್ಮ ಡಾ. ಅಂಬೇಡ್ಕರ್ ಅವರ ಸಂವಿಧಾನದ ಮೂಲಕ ನಮಗೆ ಕೊಟ್ಟಿದ್ದಾರೆ -ನಿರುಪಾದಿಯಪ್ಪ, ವಕೀಲರು

### ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ

ಇವತ್ತು ಏನು ಹೈಕೋರ್ಟ್ ನ್ಯಾಯಾವಾಗದೇ ನಾವೆಲ್ಲರೂ ಕೋರ್ಟ್ ಆದೇಶ ಮೇರೆಗೆ ನಾವು ಭರವಸೆಯನ್ನು ಇಟ್ಟಿದ್ದೇವೆ. ಆದರೆ ಅ ಭರವಸೆ ನುಚ್ಚು ನೀರು ಯಾಗುತ್ತದೆ.ಅವರು ಮನುವಾದಿಗಳು ಅವರಿಗೆ ಡಾ. ಅಂಬೇಡ್ಕರ್‌ನ್ನು ಮತ್ತು ಸಂವಿಧಾನದವನ್ನು ಸಹಿಸಿಕೊಳ್ಳಲಿಕ ಆಗುತ್ತಿಲ್ಲ . ಮನುವಾದಿ ಮನಸ್ಥಿತಿಯನ್ನು ದೇಶದ ಜನರ ಮುಂದೆ ಬಹಿರಂಗಗೊಳಿಸಿದೆ ಎಂದು ಕೇಂದ್ರ ಸರ್ಕಾರದ ವಿರುದ್ಧ ಡಿ.ಎಚ್ ಪೂಜಾರ ವಾಗ್ದಾಳಿ ನಡೆಸಿದರು.

## 32 ಜೀವಂತ ನಾಡಬಾಂಬ್ ಪತ್ತೆ

• ಉದಯವಾಹಿನಿ, ದಾವಣಗೆರೆ

ಜಿಲ್ಲೆಯ ಫಲವನಹಳ್ಳಿ ಅರಣ್ಯ ವಲಯದಲ್ಲಿ ಬರೋಬ್ಬರಿ 32 ನಾಡಬಾಂಬ್ ಪತ್ತೆಯಾಗಿದ್ದಾವೆ. ಈ ಮೂಲಕ ಸಾರ್ವಜನಿಕರನ್ನು ಬೆಚ್ಚಿ ಬೀಳುವಂತೆ ಮಾಡಿದ್ದಾವೆ. ದಾವಣಗೆರೆ ಜಿಲ್ಲೆಯ ನ್ಯಾಮತಿ ತಾಲ್ಲೂಕಿನ ಫಲವನಹಳ್ಳಿ ಅರಣ್ಯ ವಲಯದಲ್ಲಿ 32 ನಾಡಬಾಂಬ್ ಪತ್ತೆಯಾಗಿರುವುದಾಗಿ ತಿಳಿದು ಬಂದಿದೆ. ಫಲವನಹಳ್ಳಿ ಉಪ ವಲಯ ಅರಣ್ಯಾಧಿಕಾರಿ ಬರ್ಕತ್ ಆಲಿಯವರು ಗಸ್ತು ತಿರುಗುವ ಸಂದರ್ಭದಲ್ಲಿ ಈ ನಾಡ ಬಾಂಬ್ ಪತ್ತೆಯಾಗಿದ್ದಾನೆ. ಪತ್ತೆಯಾದ ನಾಡಬಾಂಬ್ ಅನ್ನು ಕಾಡು ಪ್ರಾಣಿಗಳನ್ನು ಬೇಟೆಯಾಡಲು ಇರಿಸಲಾಗಿತ್ತು ಎನ್ನಲಾಗುತ್ತಿದೆ. ಇನ್ನೂ ಅರಣ್ಯ ಸಿಬ್ಬಂದಿ ಸ್ಥಳಕ್ಕೆ ತೆರಳುತ್ತಿದ್ದಂತೆ 4 ಜನ ಆರೋಪಿಗಳು 2 ಬೈಕ್ ಗಳನ್ನು ಸ್ಥಳದಲ್ಲೇ ಬಿಟ್ಟು ಪರಾರಿಯಾಗಿದ್ದಾರೆ. ಈ ಸಂಬಂಧ ತನಿಖೆ ನಡೆಸಲಾಗುತ್ತಿದೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವಂತ ನ್ಯಾಮತಿ ಠಾಣೆಯ ಪೊಲೀಸರು, ತನಿಖೆ ಕೈಗೊಂಡಿದ್ದಾರೆ.


ಉದಯವಾಹಿನಿ ಚಿತ್ರ

# ಬಾಂಗ್ಲಾ ದೇಶದಲ್ಲಿ ಅಶಾಂತಿ ಸೃಷ್ಟಿಸಿದ ನಂತರ ಅಮೆರಿಕಾದ ಮುಂದಿನ ಟಾರ್ಗೆಟ್ ಪಾಕಿಸ್ತಾನ

## ಟ್ರಂಪ್ ಅಧಿಕಾರ ಸ್ವೀಕರಿಸುವ ಸಮಯ ಹತ್ತಿರ ಬರುತ್ತಿರುವುದರಿಂದ, ಪಾಕಿಸ್ತಾನದಲ್ಲಿ ದಂಗೆ ಸಾಧ್ಯತೆ

**ವಾಷಿಂಗ್ಟನ್:** ವಿಶ್ವದ ಹೆಚ್ಚಿನ ದೇಶಗಳಲ್ಲಿ ದೊಡ್ಡಣ್ಣ ಅಮೆರಿಕಾದ ಪ್ರಭಾವ ಅಥವಾ ಹಸ್ತಕ್ಷೇಪ ಇದ್ದೇ ಇರುತ್ತದೆ. ಬಾಂಗ್ಲಾ ದೇಶದಲ್ಲಿ ಕೆಲವು ತಿಂಗಳಿನಿಂದ ನಡೆಯುತ್ತಿರುವ ವಿದ್ಯಾರ್ಥಿ ದಂಗೆಯ ಮೂಲಕ, ದೇಶದಲ್ಲಿ ಅಶಾಂತಿ ತಾಂಡವಾಡುತ್ತಿದೆ. ಇದರ ಬೆನ್ನಲ್ಲೇ, ಪ್ರಧಾನಿ ಶೇಖ್ ಹಸೀನಾ, ಭಾರತದ ಅಶ್ರಯವನ್ನು ಪಡೆದಿದ್ದರು.

ಶೇಖ್ ಹಸೀನಾ ಪದಚ್ಯುತಿ ಮತ್ತು ಬಾಂಗ್ಲಾ ಪ್ರಕ್ಷುಬ್ದಗೊಂಡಿರುವ ಹಿಂದೆ ಅಮೆರಿಕಾದ ಕೈವಾಡವಿದೆ ಎನ್ನುವ ಸುದ್ದಿ ಬಲವಾಗಿ ಹರಿದಾಡುತ್ತಿತ್ತು. ಬಾಂಗ್ಲಾದಲ್ಲಿ ಏನು ಮಾಡಬೇಕೋ ಅದು ಯಶಸ್ವಿಯಾದ ನಂತರ, ಅಮೆರಿಕಾದ ಮುಂದಿನ ಟಾರ್ಗೆಟ್ ಪಾಕಿಸ್ತಾನ ಎನ್ನುವ ಬಲವಾದ ಸುದ್ದಿ ಹರಿದಾಡುತ್ತಿದೆ. ಹಲವು ವರ್ಷಗಳಿಂದ ಬಾಂಗ್ಲಾದಲ್ಲಿ ಅಶಾಂತಿ ಸೃಷ್ಟಿಸುವ ಅಮೆರಿಕಾದ ಪ್ರಯತ್ನ ಮುಗಿದ ನಂತರ, ಈಗ, ಆರ್ಥಿಕವಾಗಿ ಕಂಗೆಟ್ಟಿರುವ ಪಾಕಿಸ್ತಾನದ ಕಡೆ ಕಣ್ಣು ನೆಟ್ಟಿದೆ ಎಂದು ಮಧ್ಯಪ್ರಾಚ್ಯ ಭಾಗದ ಹಲವು ಮಾಧ್ಯಮಗಳು ವರದಿ ಮಾಡಿವೆ. ಇದಕ್ಕೆ ಪೂರಕ ಎನ್ನುವಂತೆ ಇಮ್ರಾನ್ ಖಾನ್ ನೇತೃತ್ವದ




ಇಮ್ರಾನ್ ಖಾನ್ ಬಿಡುಗಡೆಗೆ ಒತ್ತಡ

ತೆಹ್ರಿಕ್ - ಇ -ಇನ್ಸಾಫ್ ಪಾರ್ಟಿಯ ಕೆಲವು ಮುಖಂಡರ ಹೇಳಿಕೆ.

ಡೊನಾಲ್ಡ್ ಟ್ರಂಪ್ ಅಧಿಕಾರಕ್ಕೇರಲು ಇನ್ನೂ ಕೆಲವು ದಿನಗಳಿವೆ. ಆದಾಗ್ಯೂ, ಅಮೆರಿಕಾದ ಅಧಿಕಾರಿಗಳು ಪಾಕಿಸ್ತಾನದ ರಾಜಕೀಯ ಮುಖಂಡರನ್ನು ಓಲೈಸುವ ಕೆಲಸಕ್ಕೆ ಮುಂದಾಗಿದ್ದಾರೆ. ಇತ್ತೀಚೆಗೆ, ಪಾಕಿಸ್ತಾನದ ಮಿಲಿಟರಿ ಕೋರ್ಟ್, ಇಮ್ರಾನ್ ಪಾರ್ಟಿಯ 25 ನಾಯಕರ ವಿರುದ್ದ ಶಿಕ್ಷೆ ವಿಧಿಸಿದಾಗ, ಯುಎಸ್ ಇದಕ್ಕೆ ಪ್ರತಿಕ್ರಿಯೆಯನ್ನು ನೀಡಿತ್ತು.

ಇಷ್ಟೇ ಅಲ್ಲದೇ, ನ್ಯಾಯಾಲಯದ ಆದೇಶವನ್ನು ಖಂಡಿಸಿದ್ದೇ ಅಲ್ಲದೇ, ಇಮ್ರಾನ್ ಖಾನ್ ಅವರನ್ನು

**ಅಮೆರಿಕಾದ ಕೈವಾಡ**

**ಬಾಂಗ್ಲಾ ದೇಶದಲ್ಲಿನ ವಿದ್ಯಾರ್ಥಿಗಳ ದಂಗೆ, ಶೇಖ್ ಹಸೀನಾ ಅವರು ಭಾರತಕ್ಕೆ ಆಶ್ರಯ ಪಡೆದಿರುವುದು ಈ ಎಲ್ಲಾ ವಿದ್ಯಮಾನಗಳ ಹಿಂದೆ, ಅಮೆರಿಕಾದ ಕೈವಾಡವಿತ್ತು ಎಂದು ಹೇಳಲಾಗುತ್ತಿದೆ. ಈಗ, ಇಮ್ರಾನ್ ಖಾನ್ ಪರವಾಗಿ ಡೊನಾಲ್ಡ್ ಟ್ರಂಪ್ ಬ್ಯಾಟ್ ಬೀಸುವ ಸಾಧ್ಯತೆಯಿದೆ. ಟ್ರಂಪ್ ಅಧಿಕಾರಕ್ಕೆ ಬಂದ ನಂತರ, ಅಮೆರಿಕಾದ ಮಧ್ಯ ಪ್ರವೇಶ ಹೆಚ್ಚಾಗಬಹುದು ಎಂದು ವಿಶ್ಲೇಷಿಸಲಾಗುತ್ತಿದೆ.**

ಬೇಷರತ್ತಾಗಿ ಬಿಡುಗಡೆ ಮಾಡಬೇಕೆಂದು ತಾಕೀತು ಮಾಡಿತ್ತು. ಇದು, ಡೊನಾಲ್ಡ್ ಟ್ರಂಪ್, ತಮ್ಮ ಅಧಿಕಾರ ಆರಂಭವಾಗುತ್ತಿದ್ದಂತೆಯೇ, ಇಮ್ರಾನ್ ಖಾನ್ ಬಿಡುಗಡೆಗೆ ಒತ್ತಡ ಹೇರಲು ಆರಂಭಿಸಬಹುದು ಎನ್ನುವುದರ ಮುನ್ಸೂಚನೆ ಎಂದು ವ್ಯಾಖ್ಯಾನಿಸಲಾಗುತ್ತಿದೆ. ಟ್ರಂಪ್ ಅವರು ಅಧಿಕಾರ

- **ಶೇಖ್ ಹಸೀನಾ ಪದಚ್ಯುತಿ ಮತ್ತು ಬಾಂಗ್ಲಾ ಪ್ರಕ್ಷುಬ್ದಗೊಂಡಿರುವ ಹಿಂದೆ ಅಮೆರಿಕಾದ ಕೈವಾಡ**
- **ಅಮೆರಿಕಾದ ಅಥವಾ ವಿಶ್ವದ ಯಾವುದೇ ರಾಷ್ಟ್ರಗಳ ಹಸ್ತಕ್ಷೇಪವನ್ನು ನಾವು ಸಹಿಸುವುದಿಲ್ಲ**

ಸ್ವೀಕರಿಸುವ ಸಮಯ ಹತ್ತಿರ ಬರುತ್ತಿರುವುದರಿಂದ, ಪಾಕಿಸ್ತಾನದಲ್ಲಿ ದಂಗೆಯು ಏಳಬಹುದು ಎಂದು ಹೇಳಲಾಗುತ್ತಿದೆ. ಟ್ರಂಪ್ ಅವರ ಆಪ್ತರಲ್ಲಿ ಒಬ್ಬರಾದ ರಿಚರ್ಡ್ ಗ್ರೆನೆಲ್, ಇಮ್ರಾನ್ ಖಾನ್ ಬಿಡುಗಡೆ ಮಾಡುವಂತೆ, ಪಾಕಿಸ್ತಾನ ಸರ್ಕಾರಕ್ಕೆ ವಾರ್ನಿಂಗ್ ನೀಡಿದ್ದಾರೆ. ಇದು, ಮುಂಬರುವ ದಿನಗಳಲ್ಲಿ ಅಮೆರಿಕಾದ ಹಸ್ತಕ್ಷೇಪದ ಮುನ್ಸೂಚನೆ ಎಂದು ವಿಶ್ಲೇಷಿಸಲಾಗುತ್ತಿದೆ.

ಇದರ ಜೊತೆಗೆ, ಇಮ್ರಾನ್ ಖಾನ್ ಪಕ್ಷದ ಹಲವು ನಾಯಕರು, ಟ್ರಂಪ್ ಆಡಳಿತದಲ್ಲಿ ನಮಗೆ ಬೆಂಬಲ ಸಿಗಲಿದೆ ಎಂದು ಬಹಿರಂಗವಾಗಿ ಹೇಳಿಕೆಯನ್ನು ನೀಡಿದ್ದಾರೆ ಎಂದು ವರದಿಯಾಗಿದೆ.

ಟ್ರಂಪ್ ಅಧಿಕಾರ ಅಧಿಕೃತವಾಗಿ ಆರಂಭವಾದ ನಂತರ, ಪಾಕ್ ಮಿಲಿಟರಿ, ಶೇಬಾಜ್ ಷರೀಫ್ ಸರ್ಕಾರದ ಮೇಲೆ, ಇಮ್ರಾನ್ ಬಿಡುಗಡೆಗೆ ಒತ್ತಡ ಹೆಚ್ಚಾಗಬಹುದು ಎಂದು ಹೇಳಲಾಗುತ್ತಿದೆ.

ಅಮೆರಿಕಾದ ಅಥವಾ ವಿಶ್ವದ ಯಾವುದೇ ರಾಷ್ಟ್ರಗಳ ಹಸ್ತಕ್ಷೇಪವನ್ನು ನಾವು ಸಹಿಸುವುದಿಲ್ಲ, ಅವರ ಒತ್ತಡಕ್ಕೂ ಮಣಿಯುವುದಿಲ್ಲ. ಇಮ್ರಾನ್ ಖಾನ್ ವಿಚಾರದಲ್ಲಿ ನ್ಯಾಯಾಲಯ ಏನು ನಿರ್ಧಾರ ತೆಗೆದುಕೊಳ್ಳುತ್ತದೆ ಅದೇ ಅಂತಿಮ, ನಮ್ಮ ಆಂತರಿಕ ವಿಚಾರದಲ್ಲಿ ಯಾರೂ ತಲೆಹಾಕಬಾರದು ಎಂದು ಶೆಬಾಜ್ ಷರೀಫ್ ಅವರ ರಾಜಕೀಯ ಕಾರ್ಯದರ್ಶಿ ರಾಣಾ ಸನಾವುಲ್ಲಾ ಪ್ರತಿಕ್ರಿಯೆ ನೀಡಿದ್ದಾರೆ. ಇಮ್ರಾನ್ ಖಾನ್, ಡೊನಾಲ್ಡ್ ಟ್ರಂಪ್ ಅವರ ಬೆಂಬಲಿಗರು ಎಂದು ಅವರನ್ನು ಬಿಂಬಿಸಲಾಗುತ್ತಿದೆ. ಜೋ ಬೈಡೆನ್ ಸರ್ಕಾರದ ಅವಧಿಯಲ್ಲಿ, ಇಮ್ರಾನ್ ಖಾನ್ ವಿರುದ್ಧ ಕ್ರಮ ತೆಗೆದುಕೊಳ್ಳಲು ಶೆಬಾಜ್ ಷರೀಫ್ ಸರ್ಕಾರಕ್ಕೆ ಉತ್ತಮ ಬೆಂಬಲ ಸಿಕ್ಕಿತ್ತು. ಆದರೆ, ಚೀನಾ ಮತ್ತು ಇರಾನ್ ಜೊತೆ ಪಾಕ್ ಸರ್ಕಾರ ಒಡನಾಟ ಹೆಚ್ಚಾಗಿರುವುದು ಅಮೆರಿಕಾಗೆ ಸಹಿಸಲಾಗುತ್ತಿಲ್ಲ. ಮುಂದಿನ ದಿನಗಳಲ್ಲಿ, ಪಾಕಿಸ್ತಾನದ ಮೇಲೆ ಟ್ರಂಪ್ ಅವರ ಪ್ರಭಾವ ಹೆಚ್ಚಾಗಲಿದೆ ಎಂದು ಹೇಳಲಾಗುತ್ತಿದೆ.


# ಚೀನಾದಿಂದ ವಿಶ್ವದ ಅತಿದೊಡ್ಡ ಅಣೆಕಟ್ಟು ನಿರ್ಮಾಣ

**ಬೀಜಿಂಗ್:** ಭಾರತ, ಬಾಂಗ್ಲಾದೇಶಗಳ ಲಕ್ಷಾಂತರ ಜನರ ಮೇಲೆ ಪರಿಣಾಮ ಬೀಳುವಂತಹ ನಿರ್ಧಾರವೊಂದನ್ನು ಚೀನಾ ಕೈಗೊಂಡಿದೆ.

ಅದು ಟಿಬೆಟಿಯನ್ ಪ್ರಸ್ಥಭೂಮಿಯ ಪೂರ್ವ ಅಂಚಿನಲ್ಲಿ ಮಹತ್ವಾಕಾಂಕ್ಷೆಯ ಯೋಜನೆಯನ್ನು ಪ್ರಾರಂಭಿಸುವ ಮೂಲಕ ವಿಶ್ವದ ಅತಿದೊಡ್ಡ ಜಲ ವಿದ್ಯುತ್ ಅಣೆಕಟ್ಟು ನಿರ್ಮಿಸಲು ಮುಂದಾಗಿದೆ. ಟಿಬೆಟ್‌ನ ಯಾರ್ಲುಂಗ್ ಜಾಂಗ್ಬೋ ನದಿಯ ಕೆಳಭಾಗದಲ್ಲಿ ನೆಲೆಗೊಂಡಿರುವ ಅಣೆಕಟ್ಟು ವಾರ್ಷಿಕವಾಗಿ 300 ಶತಕೋಟಿ ಕಿಲೋವ್ಯಾಟ್ ಗಂಟೆಗಳ ವಿದ್ಯುತ್ ಉತ್ಪಾದಿಸುತ್ತದೆ.

ಇದು ಮಧ್ಯ ಚೀನಾದಲ್ಲಿ ಪ್ರಸ್ತುತ ವಿಶ್ವದ ಅತಿ ದೊಡ್ಡದಾದ ತ್ರೀ ಗಾರ್ಜಸ್ ಅಣೆಕಟ್ಟಿನ 88.2 ಶತಕೋಟಿ ಕಿ. ವ್ಯಾಟ್ ವಿನ್ಯಾಸ ಸಾಮರ್ಥ್ಯವನ್ನು ಮೂರು ಪಟ್ಟು ಹೆಚ್ಚು ಮಾಡುತ್ತದೆ.

ಚೀನಾದ ಕಾರ್ಬನ್ ಪೀಕಿಂಗ್, ಕಾರ್ಬನ್



ಭಾರತ ಬಾಂಗ್ಲಾಕ್ಕೆ ಗಂಡಾಂತರ

ನ್ಯೂಟ್ರಾಲಿಟಿ ಗುರಿಗಳನ್ನು ಪೂರೈಸುವಲ್ಲಿ ಈ ಯೋಜನೆಯು ಪ್ರಮುಖ ಪಾತ್ರ ವಹಿಸುತ್ತದೆ.

ಎಂಜಿನಿಯರಿಂಗ್‌ನಂತಹ ಸಂಬಂಧಿತ ಉದ್ಯಮಗಳನ್ನು ಉತ್ತೇಜಿಸುತ್ತದೆ ಮತ್ತು ಟಿಬೆಟ್‌ನಲ್ಲಿ ಉದ್ಯೋಗಗಳನ್ನು ಸೃಷ್ಟಿಸುತ್ತದೆ ಎಂದು ಅಧಿಕತ ಕ್ಸಿನ್ಹುವಾ ಸುದ್ದಿ ಸಂಸ್ಥೆ ವರದಿ ಮಾಡಿದೆ. ಯಾರ್ಲುಂಗ್ ಜಾಂಗ್ಬೊದ ಒಂದು ವಿಭಾಗವು 50 ಕಿಮೀ (31 ಮೈಲುಗಳು) ಕಡಿಮೆ ಅವಧಿಯಲ್ಲಿ ನಾಟಕೀಯ 2,000 ಮೀಟರ್ (6,561 ಅಡಿ) ಬೀಳುತ್ತದೆ, ಇದು ಬಹತ್ ಜಲವಿದ್ಯುತ್ ಸಾಮರ್ಥ್ಯ ಮತ್ತು ಅನನ್ಯ ಎಂಜಿನಿಯರಿಂಗ್ ಸವಾಲುಗಳನ್ನು ನೀಡುತ್ತದೆ.

ಇಂಜಿನಿಯರಿಂಗ್ ವೆಚ್ಚಗಳು ಸೇರಿದಂತೆ ಅಣೆಕಟ್ಟನ್ನು ನಿರ್ಮಿಸುವ ವೆಚ್ಚವು ತ್ರೀ ಗಾರ್ಜಸ್ ಅಣೆಕಟ್ಟನ್ನು ಗ್ರಹಣ ಮಾಡುವ ನಿರೀಕ್ಷೆಯಿದೆ, ಇದು 254.2 ಬಿಲಿಯನ್ ಯುವಾನ್ (34.83 ಶತಕೋಟಿ) ವೆಚ್ಚವಾಗಿದೆ.

ಇದು ಸ್ಥಳಾಂತರಗೊಂಡ 1.4 ಮಿಲಿಯನ್ ಜನರ ಪುನರ್ವಸತಿಯನ್ನು ಒಳಗೊಂಡಿತ್ತು, ಆರಂಭಿಕ ಅಂದಾಜಿನ 57 ಬಿಲಿಯನ್ ಯುವಾನ್‌ಗಿಂತ ನಾಲ್ಕು ಪಟ್ಟು ಹೆಚ್ಚು ಎಂದು ಭಾವಿಸಲಾಗಿದೆ.

ಟಿಬೆಟ್ ಯೋಜನೆಯು ಎಷ್ಟು ಜನರನ್ನು ಸ್ಥಳಾಂತರಿಸುತ್ತದೆ ಮತ್ತು ಅದು ಸ್ಥಳೀಯ ಪರಿಸರ ವ್ಯವಸ್ಥೆಯನ್ನು ಹೇಗೆ ಪರಿಣಾಮ ಬೀರುತ್ತದೆ ಎಂಬುದನ್ನು ಅಧಿಕಾರಿಗಳು ಸೂಚಿಸಿಲ್ಲ, ಆದಾಗ್ಯೂ ಈ ಯೋಜನೆಯಿಂದ ಭಾರತ -ಬಾಂಗ್ಲಾದೇಶಗಳ ಮೇಲೆ ಪರಿಣಾಮ ಬೀರುವ ಸಾಧ್ಯತೆಗಳಿವೆ ಎಂದು ತಜ್ಞರು ಎಚ್ಚರಿಕೆ ನೀಡಿದ್ದಾರೆ.

# ಇಂಡಿಯಾ ಸಿಮೆಂಟ್ಸ್ ಸಿಇಒ ಸ್ಥಾನಕ್ಕೆ ಶ್ರೀನಿವಾಸನ್ ರಾಜೀನಾಮೆ

**ಚೆನ್ನೈ:** ತಮಿಳುನಾಡು ಮೂಲದ ಇಂಡಿಯಾ ಸಿಮೆಂಟ್ಸ್ ಸಂಸ್ಥೆಯ ಸಿಇಒ ಎನ್ ಶ್ರೀನಿವಾಸನ್ ಅವರು ತಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಇಂಡಿಯಾ ಸಿಮೆಂಟ್ ಸಂಸ್ಥೆಯನ್ನು ಅಲ್ಟ್ರಾಟೆಕ್ ಖರೀದಿಸಿರುವ ಒಪ್ಪಂದಕ್ಕೆ ಭಾರತೀಯ ಸ್ಪರ್ಧಾ ಆಯೋಗ (ಸಿಸಿಐ) ಒಪ್ಪಿಗೆ ನೀಡಿದ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ. ಕುಮಾರಮಂಗಳಂ ಬಿರ್ಲಾ ಒಡೆತನದ ಅಲ್ಟ್ರಾಟೆಕ್ ಸಿಮೆಂಟ್ ಸಂಸ್ಥೆ ಇಂಡಿಯಾ ಸಿಮೆಂಟ್ಸ್‌ನಲ್ಲಿ ಪ್ರಮುಖ ಪಾಲನ್ನು ಖರೀದಿಸುತ್ತಿದೆ.

7,000 ಕೋಟಿ ರೂ. ಮೊತ್ತದ ಡೀಲ್ ಆಗಿದೆ ಎನ್ನಲಾಗಿದೆ. ಒಪ್ಪಂದ ಅಂತಿಮಗೊಳ್ಳುತ್ತಿದ್ದಂತೆಯೇ ಇಂಡಿಯಾ ಸಿಮೆಂಟ್ಸ್‌ನ ಮಾಲೀಕರ ಅಧಿಕಾರ ತಪ್ಪಿದಂತಾಗಿದೆ. ರೆಗ್ಯುಲೇಟರಿ ಫೈಲಿಂಗ್‌ನಲ್ಲಿ ಐಸಿಎಲ್ ಸಂಸ್ಥೆ ಎನ್ ಶ್ರೀನಿವಾಸನ್ ರಾಜೀನಾಮೆ ನೀಡಿರುವ ಸಂಗತಿಯನ್ನು ಘೋಷಿಸಿದೆ.

ಐಪಿಎಲ್ ತಂಡವಾದ ಚೆನ್ನೈ ಸೂಪರ್ ಕಿಂಗ್ಸ್‌ನ ಮಾಜಿ ಮಾಲೀಕರಾದ ಎನ್ ಶ್ರೀನಿವಾಸನ್ ಅವರು



**ಶ್ರೀನಿವಾಸನ್ ಮಾತ್ರವಲ್ಲದೇ ಅವರ ಕುಟುಂಬದ ಇತರ ಕೆಲ ಸದಸ್ಯರು ಇಂಡಿಯಾ ಸಿಮೆಂಟ್ಸ್‌ನಲ್ಲಿ ಪ್ರಮುಖ ಅಧಿಕಾರ ಹೊಂದಿದ್ದರು. ಪತ್ನಿ ಚಿತ್ರಾ ಶ್ರೀನಿವಾಸನ್, ಮಗಳು ರೂಪಾ ಗುರುನಾಥ್, ವಿ.ಎಂ. ಮೋಹನ್ ಅವರು ಐಸಿಎಲ್‌ನ ಮಂಡಳಿಯಿಂದ ಹೊರಬಂದಿದ್ದಾರೆ.**

ಇಂಡಿಯಾ ಸಿಮೆಂಟ್ಸ್‌ನ ಮುಖ್ಯಸ್ಥರಾಗಿ ಯಶಸ್ಸು ಗಳಿಸಿದ್ದರು. ಇವರೆಲ್ಲರೂ ಕೂಡ ಇಂಡಿಯಾ ಸಿಮೆಂಟ್ಸ್‌ನಲ್ಲಿ ಹೊಂದಿದ್ದ ಎಲ್ಲಾ ಷೇರುಪಾಲನ್ನೂ ಬಿಟ್ಟುಕೊಟ್ಟಿದ್ದಾರೆ.

ಇವರ ಮಾಲೀಕತ್ವದ ಎಲ್ಲಾ ಸಂಸ್ಥೆಗಳು ಇಂಡಿಯಾ ಸಿಮೆಂಟ್ಸ್‌ನಲ್ಲಿ ಹೊಂದಿದ್ದ ಯಾವುದೇ ಈಕ್ವಿಟಿ ಷೇರುಗಳನ್ನೂ ಬಿಟ್ಟುಕೊಡಲಾಗಿದೆ.

ಶ್ರೀನಿವಾಸನ್ ಅವರು ಇಂಡಿಯಾ ಸಿಮೆಂಟ್ಸ್ ಸಂಸ್ಥೆಯಲ್ಲಿ ಸಿಇಒ ಮಾತ್ರವಲ್ಲದೇ ವೈಸ್ ಛೇರ್ಮನ್, ಎಂಡಿ ಮತ್ತು ಡೈರೆಕ್ಟರ್ ಕೂಡ ಆಗಿದ್ದರು.

# ಫುಡ್ ಡೆಲಿವರಿಬಾಯ್‌ನ ಸಾಂಟಾ ಕ್ಲಾಸ್ ವೇಷ ತೆಗೆಸಿದ ಹಿಂದೂ ಕಾರ್ಯಕರ್ತ

**ಇಂದೋರ್:** ಕ್ರಿಸ್‌ಮಸ್ ಹಬ್ಬದಂದು ಸಾಂಟಾ ಕ್ಲಾಸ್ ವೇಷದಲ್ಲಿ ಫುಡ್ ಡಿಲಿವರಿ ಮಾಡುತ್ತಿದ್ದ ಏಜೆಂಟ್‌ಗೆ ಹಿಂದೂ ಸಂಘಟನೆಯ ಕಾರ್ಯಕರ್ತರು ತರಾಟೆಗೆ ತೆಗೆದು ಕೊಂಡಿರುವ ಘಟನೆ ಮಧ್ಯಪ್ರದೇಶದ ಇಂದೋರ್‌ನಲ್ಲಿ ನಡೆದಿದೆ. ಝೊಮಾಟೊ ಡೆಲಿವರಿ ಏಜೆಂಟ್ ಅನ್ನು ಹಿಂದೂ ಜಾಗರಣ ಮಂಚ್‌ನ ಜಿಲ್ಲಾ ಸಂಚಾಲಕ ಸುಮಿತ್ ಹಾರ್ಡಿಯಾ ತರಾಟೆಗೆ ತೆಗೆದುಕೊಂಡಿರುವ ವಿಡಿಯೋ ಭಾರಿ ವೈರಲ್ ಆಗಿದೆ.

ನೀವು ಸಾಂಟಾ ಕ್ಲಾಸ್‌ನಂತೆ ಧರಿಸುವ ಮೂಲಕ ಆರ್ಡರ್ ಅನ್ನು ತಲುಪಿಸುತ್ತಿದ್ದೀರಾ? ಎಂದು ಹಾರ್ಡಿಯಾ ಆ ವ್ಯಕ್ತಿಯನ್ನು ಕೇಳಿದರು, ಅದಕ್ಕೆ ಏಜೆಂಟ್ ತಲೆಯಾಡಿಸಿ ಹೌದು ಎಂದು ಹೇಳಿದರು. ನೀವು ಎಂದಾದರೂ ದೀಪಾವಳಿಯಂದು ಭಗವಾನ್ ಶ್ರೀರಾಮನ ವೇಷ ಧರಿಸಿ ಜನರ ಮನೆಗೆ ಹೋಗುತ್ತೀರಾ..? ಎಂದು ಅವರು ಪ್ರಶ್ನಿಸಿದರು. ಇದಕ್ಕೆ ಡೆಲಿವರಿ ಏಜೆಂಟ್ ಇಲ್ಲ ಎಂದು ಉತ್ತರಿಸಿದರು. ನಾವು ಹಿಂದೂಗಳು,



ನಾವು ಮಕ್ಕಳಿಗೆ ಏನು ಸಂದೇಶವನ್ನು ನೀಡುತ್ತಿದ್ದೇವೆ. ನೀವು ಕೇವಲ ಸಾಂಟಾ ಕ್ಲಾಸ್‌ನಂತೆ ಧರಿಸಿದರೆ ಮಾತ್ರ ಸಂದೇಶವನ್ನು ರವಾನಿಸುವುದು ಅಗತ್ಯವೇ? ನೀವು ನಿಜವಾಗಿಯೂ ಸಂದೇಶವನ್ನು ಕಳುಹಿಸಲು ಬಯಸಿದರೆ, ಭಗತ್ ಸಿಂಗ್, ಚಂದ್ರಶೇಖರ್ ಆಜಾದ್ ಅವರಂತೆ ಉಡುಪು ಧರಿಸಿ ಎಂದು ಹಾರ್ಡಿಯಾ ಹೇಳಿದರು.

ಆಗ ಆತ ನಾನು ನನ್ನ ಸಂಸ್ಥೆ ಹೇಳಿದಂತೆ ಕೇಳಿದ್ದೇನೆ ಎಂದಾಗ ನಿನ್ನ ವೇಷಭೂಷಣ ತೆಗೆದುಹಾಕುವಂತೆ ಆತನಿಗೆ ತಿಳಿ ಹೇಳಲಾಯಿತು. ಆತ ಸಾಂಟಾಕ್ಲಾಸ್ ವೇಷ ತೆಗೆದ ನಂತರ ಹೋಗಲು ಬಿಡಲಾಯಿತು.

# ಬಾಲಕಿಯನ್ನು ಅಪಹರಿಸಿ ಕೊಂದಿದ್ದ ಪ್ರಮುಖ ಆರೋಪಿ ಬಂಧನ

**ಥಾಣೆ:** ಮನೆ ಮುಂದೆ ಆಟವಾಡುತ್ತಿದ್ದ 12 ವರ್ಷದ ಬಾಲಕಿಯನ್ನು ಅಪಹರಿಸಿ ಹತ್ಯೆಗೈದ ಪ್ರಕರಣದ ಪ್ರಮುಖ ಆರೋಪಿಯನ್ನು ಮಹಾರಾಷ್ಟ್ರದ ಬುಲ್ದಾನ ಜಿಲ್ಲೆಯಿಂದ ಬಂಧಿಸಿದ ಇಲ್ಲಿಗೆ ಕರೆತರಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಬಂಧಿತ ಪ್ರಮುಖ ವಿಶಾಲ್ ಗಾವ್ಲಿ ಎಂದು ಗುರುತಿಸಲಾಗಿದೆ.



ಆತ ವಾಸವಾಗಿದ್ದ ಕಲ್ಯಾಣ್ ಬಳಿಯ ಗ್ರಾಮದಲ್ಲಿ ಬಾಲಕಿಯ ಶವ ಪತ್ತೆಯಾದ ನಂತರ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಆತನ ಪತ್ನಿ ಮತ್ತು ಇನ್ನೊಬ್ಬ ವ್ಯಕ್ತಿಯನ್ನು ಸಹ ಬಂಧಿಸಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಬುಲ್ಢಾನಾದ ಶೆಗಾಂವ್‌ನಿಂದ ಬಂಧನಕ್ಕೊಳಗಾದ ಗಾವ್ಲಿಯನ್ನು ಗುರುವಾರ ಬೆಳಿಗೆ 6 ಗಂಟೆಗೆ ಇಲ್ಲಿಗೆ ಕರೆತರಲಾಯಿತು ಎಂದು ಅಪರಾಧ ವಿಭಾಗದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ತನ್ನ ಗುರುತನ್ನು ಮರೆಮಾಚುವ ಉದ್ದೇಶದಿಂದ ಗಡ್ಡವನ್ನು ಬೋಳಿಸಿಕೊಂಡು ಸಲೂನ್‌ನಿಂದ ಹೊರಬರುತ್ತಿದ್ದಾಗ ಶೆಗಾಂವ್‌ನ ಪೊಲೀಸ್ ತಂಡವು ಗಾವ್‌ಲಿಯನ್ನು ಬಂಧಿಸಿದೆ.

ಗಾವ್‌ಲಿ ಅವರ ವಿರುದ್ಧ ಈಗಾಗಲೇ ಕೆಲವು ಕ್ರಿಮಿನಲ್ ಪ್ರಕರಣಗಳು ದಾಖಲಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ. ಅಪರಾಧಕ್ಕೆ ಸಂಬಂಧಿಸಿದಂತೆ ಅವರ ಮೂರನೇ ಪತ್ನಿ ಸಾಕ್ಷಿ ಗಾವ್‌ಲಿ ಮತ್ತು ಇನ್ನೊಬ್ಬ ವ್ಯಯಕ್ತಿಯನ್ನು ಸಹ ಬಂಧಿಸಲಾಗಿದೆ ಎಂದು ಅವರು ಹೇಳಿದರು.

ಬ್ಯಾಂಕ್‌ನಲ್ಲಿ ಕೆಲಸ ಮಾಡುತ್ತಿರುವ ಸಾಕ್ಷಿ ಗಾವ್‌ಲಿಯನ್ನು ಬುಧವಾರ ಸ್ಥಳೀಯ ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸಲಾಗಿದ್ದು, ಆಕೆಯನ್ನು ಎರಡು ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ನೀಡಲಾಗಿದೆ.

ಸೋಮವಾರ ಮಧ್ಯಾಹ್ನ ಕಲ್ಯಾಣ್‌ನ ಕೋಲ್ಸೆವಾಡಿಯಿಂದ ಮನೆಯ ಹೊರಗೆ ಆಟವಾಡುತ್ತಿದ್ದ ವೇಳೆ ಬಾಲಕಿಯನ್ನು ಅಪಹರಿಸಲಾಗಿತ್ತು. ಥಾಣೆ ಜಿಲ್ಲೆಯ ಭಿವಂಡಿ ಬಳಿ ಮಂಗಳವಾರ ಬೆಳಗ್ಗೆ ಶವ ಪತ್ತೆಯಾಗಿತ್ತು.

**ಕೊಲೆಯ ಹಿಂದಿನ ಉದ್ದೇಶ ಇನ್ನೂ ಸ್ಪಷ್ಟವಾಗಿಲ್ಲ, ಆರೋಪಿಯ ಸಂಬಂಧಿಕರು ಮತ್ತು ಸ್ನೇಹಿತರು ಸೇರಿದಂತೆ ಸುಮಾರು 10 ಜನರನ್ನು ವಿಚಾರಣೆಗೆ ಒಳಪಡಿಸಿದ್ದಾರೆ. ಮರಣೋತ್ತರ ಪರೀಕ್ಷೆಯ ವರದಿಗಾಗಿ ಕಾಯುತ್ತಿದ್ದೇವೆ ಮತ್ತು ಅತ್ಯಾಚಾರ ದೃಢಪಟ್ಟರೆ, ಪ್ರಕರಣಕ್ಕೆ ಇತರ ಕಾನೂನು ವಿಭಾಗಗಳನ್ನು ಸೇರಿಸಲಾಗುವುದು ಎಂದು ಪೊಲೀಸ್ ಅಧಿಕಾರಿಯೊಬ್ಬರು ಈ ಹಿಂದೆ ಹೇಳಿದ್ದಾರೆ. ಅಪರಾಧಕ್ಕೆ ಬಳಸಿದ್ದ ಆಟೋರಿಕ್ಷಾವನ್ನೂ ಪೊಲೀಸರು ವಶಪಡಿಸಿಕೊಂಡಿದ್ದಾರೆ.**


# ಕದನ ವಿರಾಮ ಒಪ್ಪಂದ ಉಲ್ಲಂಘನೆ ಇಸ್ರೇಲಿ ವೈಮಾನಿಕ ದಾಳಿ

**ಬೈರುತ್:** ಲೆಬನಾನ್ ಮತ್ತು ಇಸ್ರೇಲ್ ನಡುವಿನ ಕದನ ವಿರಾಮ ಒಪ್ಪಂದದ ಹೊರತಾಗಿಯೂ, ಪೂರ್ವ ಲೆಬನಾನ್‌ನ ಬಾಲ್‌ಬೆಕ್ ಪ್ರದೇಶದ ಮನೆಯನ್ನು ಗುರಿಯಾಗಿಸಿಕೊಂಡು ಇಸ್ರೇಲಿ ವೈಮಾನಿಕ ದಾಳಿ ನಡೆಸಿದೆ ಎಂದು ಲೆಬನಾನಿನ ಅಧಿಕೃತ ಮತ್ತು ಮಿಲಿಟರಿ ಮೂಲಗಳು ತಿಳಿಸಿವೆ.

ಮರ್ಜೆಯೂನ್ ಜಿಲ್ಲೆಯ ದಕ್ಷಿಣ ಹೊರವಲಯದಲ್ಲಿರುವ ಅವ್ವೈಡಾ ಬೆಟ್ಟದ ಮೇಲೆ ಇಸ್ರೇಲಿ ಶಕ್ತಿಗಳು ಇಸ್ರೇಲಿ ಧ್ವಜವನ್ನು ಹಾರಿಸಿವೆ ಎಂದು ಮೂಲಗಳು ತಿಳಿಸಿವೆ.

ಕದನ ವಿರಾಮ ನವೆಂಬರ್ 27 ರಂದು ಜಾರಿಗೆ ಬಂದಿದೆ. ಅಧಿಕೃತ ರಾಷ್ಟ್ರೀಯ ಸುದ್ದಿ ಸಂಸ್ಥೆ ಬುಧವಾರ ಮುಂಜಾನೆ ದಾಳಿಯು ಬಾಲ್ಬೆಕ್‌ನ ಪಶ್ಚಿಮದಲ್ಲಿರುವ ಲಿಟಾನಿ ನದಿಯ ಬಳಿಯ ತಾರಾಯಾ ಗ್ರಾಮದ ಬಯಲಿನಲ್ಲಿರುವ ಮನೆಯೊಂದಕ್ಕೆ ಅಪ್ಪಳಿಸಿದೆ.

ಇಸ್ರೇಲ್ ಮತ್ತು ಹಿಜ್ಬುಲ್ಲಾ ನಡುವಿನ



ಸುಮಾರು 14 ತಿಂಗಳ ಹೋರಾಟವನ್ನು ನಿಲ್ಲಿಸಲು ಉದ್ದೇಶಿಸಲಾದ ಕದನ ವಿರಾಮವು ನವೆಂಬರ್ 27 ರಿಂದ ಜಾರಿಗೆ ಬಂದಿತು. ಒಪ್ಪಂದವು 60 ದಿನಗಳಲ್ಲಿ ಲೆಬನಾನ್ ಭೂಪ್ರದೇಶದಿಂದ ಇಸ್ರೇಲಿ ವಾಪಸಾತಿಗೆ ಕರೆ ನೀಡಲಾಗಿದೆ.

ಲೆಬನಾನಿನ ಸೇನೆಯು ಗಡಿಯುದ್ದಕ್ಕೂ ಮತ್ತು ದಕ್ಷಿಣದಲ್ಲಿ ಭದ್ರತಾ ನಿಯಂತ್ರಣವನ್ನು ತೆಗೆದುಕೊಳ್ಳುತ್ತದೆ ಮತ್ತು ಉಗ್ರಗಾಮಿಗಳ ಮೇಲೆ ಶಸ್ತ್ರಾಸ್ತ್ರ ನಿರ್ಬಂಧವನ್ನು ಹೊಂದಿದೆ ಎಂದು ಸುದ್ದಿ ಸಂಸ್ಥೆ ವರದಿ ಮಾಡಿದೆ.


ಇದಕ್ಕೂ ಮೊದಲು, ಲೆಬನಾನ್‌ನ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಮತ್ತು ವಲಸಿಗರು ಯುನೈಟೆಡ್ ನೇಷನ್ಸ್ ಸೆಕ್ಯುರಿಟಿ ಕೌನ್ಸಿಲ್‌ಗೆ (ಯುಎನ್‌ಎಸ್‌ಸಿ) ನ್ಯೂಯಾರ್ಕ್‌ನಲ್ಲಿರುವ ವಿಶ್ವಸಂಸ್ಥೆಯ ಖಾಯಂ ಮಿಷನ್ ಮೂಲಕ ಲೆಬನಾನ್‌ನೊಂದಿಗಿನ ಕದನ ವಿರಾಮ ಒಪ್ಪಂದವನ್ನು ಇಸ್ರೇಲ್ ಪದೇ ಪದೇ ಉಲ್ಲಂಘಿಸಿದ ಕುರಿತು ದೂರು ನೀಡಲಾಗಿದೆ.

**ಯಾವುದೇ ಸಾವು ನೋವು ಸಂಭವಿಸಿಲ್ಲ ಇಸ್ರೇಲಿ ಯುದ್ಧವಿಮಾನಗಳು ಕದನ ವಿರಾಮ ಒಪ್ಪಂದವನ್ನು ಉಲ್ಲಂಘಿಸಿವೆ ಎಂದು ಅದು ಆರೋಪಿಸಿದೆ. ಇಸ್ರೇಲಿ ಫಿರಂಗಿಗಳು ಮಧ್ಯಾಹ್ನ ದಕ್ಷಿಣ ಗಡಿ ಪ್ರದೇಶದ ಮರೌನ್ ಅಲ್-ರಾಸ್ ಗ್ರಾಮದ ಮೇಲೆ ಹಲವಾರು ಶೆಲ್‌ಗಳನ್ನು ಹಾರಿಸಿದವು ಎಂದು ಲೆಬನಾನಿನ ಮಿಲಿಟರಿ ಮೂಲವು ತಿಳಿಸಿದೆ.**

# ಮಹಾ ಕುಂಭಮೇಳಕ್ಕೆ ವಿಘ್ನವೊಡ್ಡುವುದಾಗಿ ಬೆದರಿಕೆ

**ಲಕ್ನೋ:** ಮುಂಬರುವ ಮಹಾಕುಂಭದ ಸಂದರ್ಭದಲ್ಲಿ ವಿಧ್ವಂಸಕ ಕೃತ್ಯ ನಡೆಸುವುದಾಗಿ ಸಿಖ್ ಪ್ರತ್ಯೇಕತಾವಾದಿ ಗುರು ಪರ್ವಂತ್ ಸಿಂಗ್ ಪನ್ನುನ್ ಎಚ್ಚರಿಸಿದ್ದಾನೆ. ಆತ ಎಚ್ಚರಿಕೆ ನೀಡಿರುವ ವಿಡಿಯೋ ಇದೀಗ ಸಾಮಾಜಿಕ ಜಾಲತಾಣದಲ್ಲಿ ಭಾರಿ ವೈರಲ್ ಆಗಿದೆ.

ಪ್ರಯಾಗ್‌ರಾಜ್‌ನಲ್ಲಿ ನಡೆಯುವ ಮಹಾ ಕುಂಭ ಮೇಳ ಉತ್ಸವದ ಮೊದಲು ಯಾತ್ರಾರ್ಥಿಗಳು ಗಂಗಾ, ಯಮುನಾ, ಪೌರಾಣಿಕ ಸರಸ್ವತಿ ನದಿಗಳ ಸಂಗಮವಾದ ಸಂಗಮ್ ತೀರದಲ್ಲಿ ಸ್ನಾನ ಮಾಡುತ್ತಾರೆ. ಮಾಘ ಮೇಳದ ಪ್ರಮುಖ ಸ್ನಾನದ ದಿನಾಂಕಗಳು ಜ.14 (ಮಕರ ಸಂಕ್ರಾಂತಿ), ಜ. 29 (ಮೌನಿ ಅಮಾವಾಸ್ಯೆ), ಮತ್ತು ಫೆ. 3 (ಬಸಂತ್ ಪಂಚಮಿ) ಆಗಿರುತ್ತದೆ. ಆ ದಿನಗಳಲ್ಲಿ ವಿಧ್ವಂಸಕ ಕೃತ್ಯ ನಡೆಸುವುದಾಗಿ ಪನ್ನುನ್ ಎಚ್ಚರಿಕೆ ನೀಡಿದ್ದಾನೆ. ಪಿಲಿಭಿತ್‌ನಲ್ಲಿ ಉತ್ತರ ಪ್ರದೇಶ ಮತ್ತು ಪಂಜಾಬ್ ಪೊಲೀಸರೊಂದಿಗೆ ನಡೆದ ಎನ್‌ಕೌಂಟರ್‌ನಲ್ಲಿ ಮೂವರು ಖಲಿಸ್ತಾನಿ ಜಿಂದಾಬಾದ್ ಫೋರ್ಸ್ ಮೂವರು ಉಗ್ರರು ಸಾವನ್ನಪ್ಪಿದ ಕೆಲವು ದಿನಗಳ ನಂತರ ಆತನಿಂದ ಇಂತಹ ಬೆದರಿಕೆ ಬಂದಿರುವುದು ವಿಶೇಷ.



ಗುರುಪರ್ವಂತ್ ಸಿಂಗ್ ಪನ್ನುನ್ ಅವರು ನಿಷೇಧಿತ ಸಂಘಟನೆಯಾದ ಸಿಖ್ಸ್ ಫಾರ್ ಜಸ್ಟಿಸ್‌ನ ಮುಖ್ಯಸ್ಥರಾಗಿದ್ದಾರೆ, ಭಾರತ ಸರ್ಕಾರದಿಂದ ಭಯೋತ್ಪಾದಕ ಎಂದು ಹೆಸರಿಸಲಾಗಿದೆ. ಪನ್ನುನ್ ಭಾರತ, ಭಾರತೀಯ ಸಂಸ್ಥೆಗಳಿಗೆ ಈ ಹಿಂದೆ ಹಲವು ಬಾರಿ ಬೆದರಿಕೆಗಳನ್ನು ಹಾಕಿದ್ದಾರೆ.

ಪನ್ನುನ್ ಎಂಬ ವ್ಯಕ್ತಿಯು ನಮ ಮಹಾಕುಂಭಕ್ಕೆ ಪ್ರವೇಶಿಸಲು ಧೈರ್ಯ ಮಾಡಿದರೆ, ಅವನನ್ನು ಹೊಡೆದು ಓಡಿಸಲಾಗುವುದು. ಅಂತಹ ನೂರಾರು ಹುಚ್ಚರನ್ನು ನಾವು ನೋಡಿದ್ದೇವೆ ಎಂದು ಅಖಿಲ ಭಾರತೀಯ ಅಖಾಡ ಪರಿಷತ್ತಿನ ಅಧ್ಯಕ್ಷ ಮಹಂತ್ ರವೀಂದ್ರ ಪುರಿ ಹೇಳಿದ್ದಾರೆ ಎಂದು ಸುದ್ದಿ ಸಂಸ್ಥೆ ಪಿಟಿಐ ವರದಿ ಮಾಡಿದೆ.

# 2025ರಲ್ಲಿ ಪ್ರಧಾನಿ ಮೋದಿ ವಿದೇಶ ಪ್ರವಾಸದ ವೇಳಾಪಟ್ಟಿ ಸಂಪೂರ್ಣ ಸಿದ್ಧ

## ಪ್ರಧಾನಿ ಮೋದಿ ಚೀನಾಗೆ, ಡೊನಾಲ್ಡ್ ಟ್ರಂಪ್ ಭಾರತಕ್ಕೆ, ಮೋದಿ ಸರ್ಕಾರದ 2025ರ ರಾಜತಾಂತ್ರಿಕ ಕ್ಯಾಲೆಂಡರ್ ಸಿದ್ಧ

**ಹೊಸದಿಲ್ಲಿ;** ಭಾರತವು 2025ಕ್ಕಾಗಿ ತನ್ನ ವಿದೇಶಾಂಗ ನೀತಿಯನ್ನು ರೂಪಿಸುವ ಕಾರ್ಯವನ್ನು ಆರಂಭಿಸಿದೆ. ಹೊಸ ವರ್ಷದಲ್ಲಿ ಭಾರತದ ಪ್ರಧಾನಮಂತ್ರಿ ನರೇಂದ್ರ ಮೋದಿ ಮತ್ತು ವಿದೇಶಾಂಗ ಸಚಿವ ಡಾ.ಎಸ್. ಜೈಶಂಕರ್ ಅವರು ಕೈಗೊಳ್ಳಲಿರುವ ಸಂಭಾವ್ಯ ವಿದೇಶ ಪ್ರವಾಸಗಳ ಪಟ್ಟಿ ಸಿದ್ಧಪಡಿಸಲಾಗುತ್ತಿದೆ.

ಅದರಂತೆ ಜೈಶಂಕರ್ ಅವರು ಶೀಘ್ರದಲ್ಲೇ ಅಮೆರಿಕ ಪ್ರವಾಸ ಕೈಗೊಳ್ಳಲಿದ್ದು, ಅಧಿಕಾರದಿಂದ ನಿರ್ಗಮಿಸುತ್ತಿರುವ ಅಧ್ಯಕ್ಷ ಜೋ ಬೈಡನ್ ಆಡಳಿತದ ಅಧಿಕಾರಿಗಳು ಮತ್ತು ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಲಿರು ಡೊನಾಲ್ಡ್ ಟ್ರಂಪ್ ಆಡಳಿತದ ಅಧಿಕಾರಿಗಳನ್ನು ಭೇಟಿ ಮಾಡಿ ಮಾತುಕತೆ ನಡೆಸಲಿದ್ದಾರೆ ಎಂದು ಮೂಲಗಳು ಖಚಿತಪಡಿಸಿವೆ. ಜನವರಿ 20ರಂದು ಡೊನಾಲ್ಡ್ ಟ್ರಂಪ್ ಅಧಿಕಾರ ಸ್ವೀಕರಿಸಿದ ಬಳಿಕ, ಟ್ರಂಪ್ ಅವರ ಪರಿವರ್ತನಾ ತಂಡದ ಸದಸ್ಯರನ್ನು ಭೇಟಿಯಾಗಿ ಮಾತುಕತೆ ನಡೆಸಲಿದ್ದಾರೆ. ಇದೇ ವೇಳೆ ಟ್ರಂಪ್ ಆಡಳಿತದ ರಾಜ್ಯ ಮತ್ತು ರಕ್ಷಣಾ ಇಲಾಖೆಗಳ ಕೆಲವು



ಪುಟಿನ್ ಭಾರತಕ್ಕೆ ಭೇಟಿ ನೀಡುವ ಸಾಧ್ಯತೆ

ಉನ್ನತ ನಾಮ ನಿರ್ದೇಶಿತ ಸದಸ್ಯರನ್ನೂ ಜೈಶಂಕರ್ ಭೇಟಿಯಾಗಲಿದ್ದಾರೆ ಎಂದು ಮಾಧ್ಯಮಗಳು ವರದಿ ಮಾಡಿವೆ. 2025ರಲ್ಲಿ ಭಾರತವು ಕ್ವಾಡ್ ಶೃಂಗಸಭೆಯನ್ನು ಆಯೋಜಿಸಲಿದ್ದು, ಈ ಸಭೆಯಲ್ಲಿ ಭಾಗವಹಿಸಲು ಅಮೆರಿಕದ ನೂತನ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾರತ ಪ್ರವಾಸ ಕೈಗೊಳ್ಳಲಿದ್ದಾರೆ. ಅದರಂತೆ ಭಾರತವು ರಷ್ಯಾದೊಂದಿಗೆ ವಾರ್ಷಿಕ ಶೃಂಗ ಸಭೆಯನ್ನು ಆಯೋಜಿಸಲು ಸಿದ್ಧವಾಗಿದ್ದು, ಇದಕ್ಕಾಗಿ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಭಾರತಕ್ಕೆ ಭೇಟಿ ನೀಡುವ ಸಾಧ್ಯತೆ ದಟ್ಟವಾಗಿದೆ. ರಷ್ಯಾ-ಉಕ್ರೇನ್ ಸಂಘರ್ಷದ ಆರಂಭದ ನಂತರ, ಪುಟಿನ್ ಅವರ ಮೊದಲ ಭಾರತ ಭೇಟಿ ಇದಾಗಲಿದೆ.

**ದಿನಾಂಕ ನಿಗದಿಯಾಗುವ ಸಾಧ್ಯತೆ**

**ಜೈಶಂಕರ್ ಅವರ ಅಮೆರಿಕ ಪ್ರವಾಸದ ಸಂದರ್ಭದಲ್ಲಿ ಟ್ರಂಪ್ ಭಾರತ ಭೇಟಿಯ ದಿನಾಂಕ ನಿಗದಿಯಾಗುವ ಸಾಧ್ಯತೆ ಇದೆ ಎನ್ನಲಾಗಿದೆ. ಇನ್ನು ಪ್ರಧಾನಿ ಮೋದಿ ಕೂಡ 2025ರಲ್ಲಿ ಅಮೆರಿಕ ಪ್ರವಾಸ ಕೈಗೊಳ್ಳಲಿದ್ದು, ನೂತನ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಲಿದ್ದಾರೆ ಎಂದು 'ದಿ ಎಕನಾಮಿಕ್ ಟೈಮ್ಸ್' ವರದಿ ಮಾಡಿದೆ. ಪ್ರಧಾನಿ ಮೋದಿ ಮತ್ತು ಡೊನಾಲ್ಡ್ ಟ್ರಂಪ್ ಅವರ ಭೇಟಿ ಮಹತ್ವ ಪಡೆದುಕೊಂಡಿದೆ.**

2025ರ ಜುಲೈನಲ್ಲಿ ಬ್ರೆಜಿಲ್‌ನಲ್ಲಿ ನಡೆಯಲಿರುವ ಬ್ರಿಕ್ಸ್ ಶೃಂಗಸಭೆ ಮತ್ತು ಆಗಸ್ಟ್-ಸೆಪ್ಟೆಂಬರ್‌ನಲ್ಲಿ ಚೀನಾದಲ್ಲಿ ನಡೆಯಲಿರುವ ಎಸ್‌ಸಿಒ ಶೃಂಗಸಭೆಯಲ್ಲಿ ಭಾಗವಹಿಸಲು ಪ್ರಧಾನಿ ಮೋದಿ ಚೀನಾಗೆ ಭೇಟಿ ನೀಡುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

**ಬಳಿಕ ಚಿಲಿಯ ಅಧ್ಯಕ್ಷ ಗೇಬ್ರಿಯಲ್ ಬೋರಿಕ್ ಫಾಂಟ್ ಅವರು, ಮಾರ್ಚ್ ಅಥವಾ ಏಪ್ರಿಲ್‌ನಲ್ಲಿ ಭಾರತಕ್ಕೆ ಭೇಟಿ ನೀಡುವ ನಿರೀಕ್ಷೆ ಇದೆ. ಅದೇ ರೀತಿ 2025ರ ಫೆಬ್ರವರಿಯಲ್ಲಿ ಪ್ರಧಾನಿ ಮೋದಿ ಅವರು ಫ್ರಾನ್ಸ್‌ಗೆ ಭೇಟಿ ನೀಡುವ ಸಾಧ್ಯತೆ ಇದ್ದು, ವಾರ್ಷಿಕ ಶೃಂಗಸಭೆಗಾಗಿ ಅವರು ಜಪಾನ್‌ಗೂ ಪ್ರಯಾಣಿಸಬಹುದು ಎಂದು ವರದಿಯಾಗಿದೆ.**

ಈ ಶೃಂಗಸಭೆಗಳಲ್ಲಿ ಪ್ರಧಾನಿ ಮೋದಿ ಅವರು ರಷ್ಯಾ ಮತ್ತು ಚೀನಾ ಅಧ್ಯಕ್ಷರನ್ನು ಭೇಟಿ ಮಾಡುವ ಸಾಧ್ಯತೆ ಕೂಡ ಇದೆ. ಎಸ್‌ಇಒ ಶೃಂಗಸಭೆಗಾಗಿ ಪ್ರಧಾನಿ ಮೋದಿ ಚೀನಾಗೆ ತೆರಳುವ ಸಾಧ್ಯತೆ ಬಗ್ಗೆ ಇದೀಗ ಕುತೂಹಲ ಮೂಡಿದೆ. ಲಡಾಖ್‌ನ ವಾಸ್ತವಿಕ ನಿಯಂತ್ರಣ ರೇಖೆಯಲ್ಲಿ ಪರಿಸ್ಥಿತಿ ಸಾಮಾನ್ಯವಾಗುತ್ತಿದ್ದು, ಚೀನಾ ಮತ್ತು ಭಾರತೀಯ ಸೇನೆ ನಡುವಿನ ಉದ್ವಿಗ್ನತೆ ತಿಳಿಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಪ್ರಧಾನನಿ ಮೋದಿ ಮತ್ತು ಚೀನಾದ ಅಧ್ಯಕ್ಷ ಕ್ಸಿ ಜಿಂಗ್‌ಪಿಂಗ್ ನಡುವಿನ ಸಂಭಾವ್ಯ ಭೇಟಿ ಬಗ್ಗೆ ಭಾರೀ ನಿರೀಕ್ಷೆಗಳು ಗರಿಗೆದರಿವೆ.

ಇನ್ನು ಯುರೋಪಿಯನ್ ಯೂನಿಯನ್ ಜೊತೆಗಿನ ಶೃಂಗಸಭೆ ಕೂಡ ಭಾರತದಲ್ಲಿ ನಡೆಯಲಿದ್ದು, ಈ ಶೃಂಗಸಭೆಯಲ್ಲಿ ಭಾಗವಹಿಸಲು ಹಲವಾರು ಯುರೋಪಿಯನ್ ನಾಯಕರು ಭಾರತಕ್ಕೆ ಭೇಟಿ ನೀಡುವ ನಿರೀಕ್ಷೆಯಿದೆ. 2025ರ ಭಾರತದ ರಾಜ ತಾಂತ್ರಿಕ ಕ್ಯಾಲೆಂಡರ್ ಜನವರಿ ಮಧ್ಯದಲ್ಲಿ ಸಿಂಗಾಪುರದ ಅಧ್ಯಕ್ಷ ಥರ್ಮನ್ ಷಣ್ಮುಗರತ್ನಂ ಅವರ ಭೇಟಿಯೊಂದಿಗೆ ಪ್ರಾರಂಭವಾಗುವ ಸಾಧ್ಯತೆಯಿದೆ ಎಂದು ದಿ ಎಕನಾಮಿಕ್ಸ್ ಟೈಮ್ಸ್ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಇನ್ನುಳಿದಂತೆ ಇಂಡೋನೇಷ್ಯಾದ ಅಧ್ಯಕ್ಷ ಪ್ರಬೋವೊ ಸುಬಿಯಾಂಟೊ ಜೊಜೊಹಾಡಿಕುಸುಮೊ, 2025ರ ಗಣರಾಜ್ಯೋತ್ಸವಕ್ಕೆ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಿದ್ದಾರೆ.

2025ರ ಮಧ್ಯಭಾಗದಲ್ಲಿ ದಕ್ಷಿಣ ಆಫ್ರಿಕಾದಲ್ಲಿ ಜಿ20 ಶೃಂಗಸಭೆ ನಡೆಯಲಿದ್ದು, ಹಾಗೆಯೇ ASEAN ಶೃಂಗಸಭೆಯನ್ನು ಮಲೇಷ್ಯಾದಲ್ಲಿ ನಡೆಸಲು ನಿರ್ಧರಿಸಲಾಗಿದೆ. ಈ ಎರಡೂ ಶೃಂಗಸಭೆಗಳಲ್ಲಿ ಭಾಗವಹಿಸಲು ಪ್ರಧಾನಿ ಮೋದಿ ಪ್ರವಾಸ ಕೈಗೊಳ್ಳಲಿದ್ದಾರೆ ಎಂದು ತಿಳಿದು ಬಂದಿದೆ.

# ಮಿನಿ ನ್ಯೂಸ್

## ವಿಮಾನದ ಚಕ್ರದ ರಂಧ್ರದಲ್ಲಿ ಮೃತದೇಹ ಪತ್ತೆ

**ಕಹುಲುಯಿ:** ಯುನೈಟೆಡ್ ಏರ್‌ಲೈನ್ಸ್‌ನ ವಿಮಾನ ಚಕ್ರದ ರಂದ್ರದಲ್ಲಿ ಮೃತದೇಹ ಪತ್ತೆಯಾಗಿದೆ. ಕಾಗೋದಿಂದ ಕಹುಲುಯಿ ವಿಮಾನ ನಿಲ್ದಾಣಕ್ಕೆ ಆಗಮಿಸಿದ ಬೋಯಿಂಗ್ 787-10 ಫ್ಲೈಟ್ 202 ರಲ್ಲಿ ಮುಖ್ಯ ಲ್ಯಾಂಡಿಂಗ್ ಗೇರ್‌ಗಳ ಚಕ್ರದ ರಂದ್ರದಲ್ಲಿ ಶವ ಪತ್ತೆಯಾಗಿದೆ. ವಿಮಾನ ಚಕ್ರಗಳು ಸುರಕ್ಷತೆಗಾಗಿ ವಿಶಾಲ ರಂದ್ರವಿರುತ್ತದೆ ಅಲ್ಲಿ ಹೇಗೆ ಮೃತದೇಹ ಬಂತು ಎಂಬ ಬಗ್ಗೆ ಮಾಯಿ ಪೊಲೀಸರು ತನಿಖೆ ನಡೆಸುತ್ತಿದ್ದಾರೆ ಎಂದು ಏರ್‌ಲೈನ್ಸ್ ಅಧಿಕಾರಿಗಳು ತಿಳಿಸಿದ್ದಾರೆ.

ವಿಮಾನದ ಹೊರಗಿನಿಂದ ವ್ಯಕ್ತಿ ಮಾತ್ರ ಇದರೊಳಗೆ ಪ್ರವೇಶಿಸಬಹುದು ಮತ್ತು ಯಾವಾಗ ಪ್ರವೇಶಿಸಿದ ಎಂಬುದು ಅಸ್ಪಷ್ಟವಾಗಿದೆ ಎಂದು ವಿಮಾನಯಾನ ಸಂಸ್ಥೆ ಹೇಳಿದೆ. ಯುನೈಟೆಡ್ ಏರ್‌ಲೈನ್ಸ್ ಅಥವಾ ಮಾಯಿ ಪೊಲೀಸ್ ಇಲಾಖೆ ಹೆಚ್ಚಿನ ವಿವರಗಳನ್ನು ಹಂಚಿಕೊಂಡಿಲ್ಲ. ಆದರೆ ಇದು ವಿಚಿತ್ರವಾದ ಪ್ರಕರಣವಾಗಿದ್ದು ತನಿಖೆ ಕುತೂಹಲ ಕೆರಳಿಸಿದೆ.

## ಪತಿಯ ನಿವೃತ್ತಿ ಸಮಾರಂಭದಲ್ಲಿ ಪತ್ನಿ ಹಠಾತ್ ಸಾವು

**ಕೋಟಾ:** ಸಾವು ಯಾವಾಗ ಮತ್ತು ಹೇಗೆ ಬರುತ್ತದೆ ಎಂದು ಯಾರಿಗೂ ತಿಳಿದಿಲ್ಲ. ಎಲ್ಲಾ ಹಠಾತ್ ಸಾವುಗಳು ಕೋವಿಡ್ ನಂತರ ಹೆಚ್ಚು ಸಂಭವಿಸುತ್ತಿವೆ. ಇತ್ತೀಚೆಗಷ್ಟೇ ರಾಜಸ್ಥಾನದ ಕೋಟಾದಲ್ಲಿ ಇಂತಹದ್ದೇ ಘಟನೆ ನಡೆದಿದೆ. ಎಲ್ಲರ ಕಣ್ಣೆದುರೇ ಮಹಿಳೆ ಸಾವನ್ನಪ್ಪಿದ್ದಾಳೆ. ಅನಾರೋಗ್ಯದಿಂದ ಬಳಲುತ್ತಿರುವ ಪತ್ನಿಯನ್ನು ನೋಡಿಕೊಳ್ಳಲು ಪತಿಯೊಬ್ಬರು ಸರ್ಕಾರಿ ಕೆಲಸದಿಂದ ಸ್ವಯಂ ನಿವೃತ್ತಿ ಪಡೆದಿದ್ದಾರೆ .ಪತಿ ತನ್ನ ಉಳಿದ ಜೀವನವನ್ನು ಪತ್ನಿಯೊಂದಿಗೆ ಕಳೆಯಲು ನಿರ್ಧರಿಸಿದ್ದಾರೆ. ಆದರೆ, ಪತ್ನಿ ನಿವೃತ್ತಿ ನಿಮಿತ್ತ ನಡೆದ ಬೀಳ್ಕೊಡುಗೆ ಸಮಾರಂಭದ ವೇಳೆ ಅನಾರೋಗ್ಯಕ್ಕೆ ತುತ್ತಾಗಿ ಸಾವನ್ನಪ್ಪಿದ್ದಾರೆ. ಈ ಮನಕಲುಕುವ ಘಟನೆ ರಾಜಸ್ಥಾನದಲ್ಲಿ ನಡೆದಿದೆ. ರಾಜಸ್ಥಾನದ ಕೋಟಾ ಮೂಲದ ದೇವೇಂದ್ರ, ಸ್ಯಾಂಡಲ್ ಕೇಂದ್ರ ಉಗ್ರಾಣ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಪತ್ನಿ ದೀಪಿಕಾ ಗೃಹಿಣಿ. ಕೆಲ ದಿನಗಳಿಂದ ಹೃದಯ ಸಂಬಂಧಿ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಅವರಿಗೆ ಮಕ್ಕಳಿಲ್ಲದ ಕಾರಣ, ದೇವೇಂದ್ರನಿಗೆ ತನ್ನ ಹೆಂಡತಿ ಯೋಗಕ್ಷೇಮ ನೋಡಿಕೊಳ್ಳಲು ಬಯಸಿ ಸ್ವಯಂ ನಿವೃತ್ತಿ ಪಡೆದಿದ್ದಾರೆ.

ಅವರು ಮೂರು ವರ್ಷಗಳ ಹಿಂದೆ ತಮ್ಮ ಕೆಲಸಕ್ಕೆ ರಾಜೀನಾಮೆ ನೀಡಿದ್ದಾರೆ. ಇದರೊಂದಿಗೆ ನೌಕರರು ಅವರನ್ನು ಅದ್ಧೂರಿಯಾಗಿ ಬೀಳ್ಕೊಡಲು ಸಿದ್ಧತೆ ನಡೆಸಿದ್ದಾರೆ. ಕಚೇರಿಯಲ್ಲಿಯೇ ನಿವೃತ್ತಿ ಕಾರ್ಯಕ್ರಮ ಏರ್ಪಡಿಸಲಾಗಿದೆ. ಈ ಕಾರ್ಯಕ್ರಮಕ್ಕೆ ಪತ್ನಿ ದೀಪಿಕಾಳನ್ನೂ ಕರೆದುಕೊಂಡು ಹೋಗಿದ್ದಾರೆ. ದೇವೇಂದ್ರ ದಂಪತಿಯನ್ನು ನೌಕರರು ಕುರ್ಚಿಯಲ್ಲಿ ಕೂರಿಸಿ, ಹೂಮಾಲೆ ಹಾಕಿ ಗೌರವಿಸಿದ್ದಾರೆ. ಅಷ್ಟರಲ್ಲಿ ದೀಪಿಕಾ ತೀವ್ರ ಅಸ್ವಸ್ಥರಾಗಿ ಕುರ್ಚಿಯ ಮೇಲೆ ಬಿದ್ದಿದ್ದಾರೆ. ಅಲ್ಲಿದ್ದವರು ಗಾಬರಿಗೊಂಡು ಕೂಡಲೇ ಆಕೆಯನ್ನು ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ಅವರು ಅದಾಗಲೇ ಮೃತಪಟ್ಟಿರುವುದಾಗಿ ವೈದ್ಯರು ಘೋಷಿಸಿದ್ದಾರೆ. ಹಠಾತ್ ಬೆಳವಣಿಗೆಯಿಂದ ಉದ್ಯೋಗಿಗಳೆಲ್ಲ ಮಮ್ಮಲ ಮರುಗಿದ್ದಾರೆ.

## ಬಾಂಗ್ಲಾ ಸಚಿವಾಲಯದ ಕಟ್ಟಡದಲ್ಲಿ ಬೆಂಕಿ: ದಾಖಲೆಗಳು ಭಸ್ಮ

**ಢಾಕಾ:** ಬಾಂಗ್ಲಾದೇಶದ ಸಚಿವಾಲಯದ ಪ್ರಮುಖ ಕಟ್ಟಡದಲ್ಲಿ ಗುರುವಾರ ಬೆಂಕಿ ಅವಘಡ ಸಂಭವಿಸಿದ್ದು, ಸರ್ಕಾರದ ಕೆಲವು ದಾಖಲೆಗಳು ಸುಟ್ಟುಹೋಗಿವೆ. ದುಷ್ಕರ್ಮಿಗಳ ವಿಧ್ವಂಸಕ ಕೃತ್ಯ ಇದಾಗಿರಬಹುದೇ ಎಂಬ ಶಂಕೆ ಇದ್ದು, ಅದರ ಕುರಿತು ತನಿಖೆ ನಡೆಸಲು ಉನ್ನತ ಮಟ್ಟದ ಸಮಿತಿಯನ್ನು ರಚಿಸಲಾಗಿದೆ. ಬಾಂಗ್ಲಾ ಸಚಿವಾಲಯದ 'ಬಿಲ್ಡಿಂಗ್ 7'ರಲ್ಲಿ ಬೆಂಕಿ ವ್ಯಾಪಿಸಿತು. ಅದನ್ನು ನಂದಿಸಲು ಅಗ್ನಿಶಾಮಕ ದಳದವರಿಗೆ ಆರು ತಾಸು ಬೇಕಾಯಿತು. ಗುರುವಾರ ನಸುಕಿನಲ್ಲಿ ಅವಘಡ ಆಗಿದ್ದು, ಯಾರಿಗೂ ಹಾನಿಯಾಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ತೆಹೀಕ್-ಎ-ತಾಲಿಬಾನ್ ಜತೆ ನಂಟು ಹೊಂದಿದ್ದ 13 ಭಯೋತ್ಪಾದಕರ ಹತ್ಯೆ

**ಪೇಶಾವರ:** ತೆಹ್-ಎ-ತಾಲಿಬಾನ್ ಪಾಕಿಸ್ತಾನ (ಟಿಟಿಪಿ) ಜತೆಗೆ ನಂಟು ಹೊಂದಿದ್ದ ಕನಿಷ್ಠ 13 ಭಯೋತ್ಪಾದಕರನ್ನು ವಾಯವ್ಯ ಖೈಬರ್ ಪುಂಖ್ವಾ ಪ್ರಾಂತ್ಯದಲ್ಲಿ ಭದ್ರತಾ ಪಡೆಗಳು ಬುಧವಾರ ಹತ್ಯೆಗೈದಿವೆ ಎಂದು ಸೇನೆ ತಿಳಿಸಿದೆ. ಖಚಿತ ಮಾಹಿತಿ ಆಧಾರದ ಮೇಲೆ ಭದ್ರತಾ ಪಡೆಗಳು ದಕ್ಷಿಣ ವಜೀರಿಸ್ತಾನ ಜಿಲ್ಲೆಯ ಸರೋಘದಲ್ಲಿ ಕಾರ್ಯಾಚರಣೆ ನಡೆಸಿದವು. ಕಾರ್ಯಾಚರಣೆಯ ವೇಳೆ ಭಾರಿ ಗುಂಡಿನ ಚಕಮಕಿ ನಡೆದಿದ್ದು, 13 ಭಯೋತ್ಪಾದಕರನ್ನು ಹತ್ಯೆ ಮಾಡಲಾಗಿದೆ.

ಅವರಿಂದ ಅಪಾರ ಪ್ರಮಾಣದ ಶಸ್ತ್ರಾಸ್ತ್ರಗಳು ಮತ್ತು ಮದ್ದುಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಮಿಲಿಟರಿಯ ಮಾಧ್ಯಮ ವಿಭಾಗ ಪ್ರಕಟಣೆಯಲ್ಲಿ ತಿಳಿಸಿದೆ. ಕಳೆದ ಶನಿವಾರ ದಕ್ಷಿಣ ವಜೀರಿಸ್ತಾನದ ಮಕೀನ್‌ನಲ್ಲಿನ ಚೆಕ್‌ಪೋಸ್ಟ್ ಮೇಲೆ ಭಯೋತ್ಪಾದಕರು ನಡೆಸಿದ್ದ ದಾಳಿಗೆ 16 ಮಂದಿ ಯೋಧರು ಹುತಾತ್ಮರಾಗಿದ್ದರು.

## ಕಳ್ಳಸಾಗಣೆ ಮಾಡುತ್ತಿದ್ದ 297 ಅಪರೂಪದ ಸುಂದರಿ ಆಮೆಗಳ ವಶ

**ಮೈನ್‌ಪುರಿ:** ಉತ್ತರಾಖಂಡದ ಉಧಮ್ ಸಿಂಗ್ ನಗರಕ್ಕೆ ಕಳ್ಳಸಾಗಣೆ ಮಾಡುತ್ತಿದ್ದ ಸುಮಾರು 297 ಅಪರೂಪದ ಆಮೆಗಳನ್ನು ವಶಪಡಿಸಿಕೊಳ್ಳಲಾಗಿದೆ. ಪ್ರಕರಣ ಸಂಬಂಧ ಮೂವರು ವನ್ಯಜೀವಿ ಕಳ್ಳಸಾಗಣೆದಾರರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಚೀನಾಕ್ಕೆ ಅಕ್ರಮವಾಗಿ ರಫ್ತು ಮಾಡಲು ಆಮೆಗಳನ್ನು ಉತ್ತರಾಖಂಡದ ಉಧಮ್ ಸಿಂಗ್ ನಗರಕ್ಕೆ ಸಾಗಿಸಲಾಗುತ್ತಿತ್ತು. ಖಚಿತ ಮಾಹಿತಿ ಮೇರೆಗೆ ಪೊಲೀಸರು ಕಾರ್ಯಾಚರಣೆ ನಡೆಸಿದರು.



ಈ ವೇಳೆ ಹೇಮಂತ್ ಕುಮಾರ್, ಸಮರ್ ಸಿಂಗ್, ಟಿಂಕು ಎಂಬ ಮೂವರು ಆರೋಪಿಗಳನ್ನು ಬಂಧಿಸಲಾಯಿತು ಎಂದು ಪೊಲೀಸ್ ವರಿಷ್ಠಾಧಿಕಾರಿ ವಿನೋದ್ ಕುಮಾರ್ ಹೇಳಿದ್ದಾರೆ. ಸ್ಥಳೀಯವಾಗಿ 'ಸುಂದರಿ ಆಮೆಗಳು' ಎಂದು ಕರೆಯಲ್ಪಡುವ 297 ಅಪರೂಪದ ಆಮೆಗಳನ್ನು ಆರೋಪಿಗಳಿಂದ ವಶಪಡಿಸಿಕೊಳ್ಳಲಾಗಿದೆ ಎಂದು ಅವರು ತಿಳಿಸಿದ್ದಾರೆ.


ಇನ್ನಿಬ್ಬರು ಆರೋಪಿಗಳು ಪರಾರಿಯಾಗಿದ್ದು, ಅವರನ್ನು ಬಂಧಿಸಲು ಹುಡುಕಾಟ ನಡೆಸಲಾಗುತ್ತಿದೆ. ಆಮೆಗಳನ್ನು ಅರಣ್ಯ ಇಲಾಖೆ ಅಧಿಕಾರಿಗಳಿಗೆ ಹಸ್ತಾಂತರಿಸಲಾಗಿದೆ. ಆರೋಪಿಗಳ ವಿರುದ್ಧ ವನ್ಯಜೀವಿ ಸಂರಕ್ಷಣಾ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ವಿನೋದ್ ಕುಮಾರ್ ಹೇಳಿದ್ದಾರೆ.



# 2 ಕೋಟಿ ರೂಪಾಯಿ ಜಾಹೀರಾತು ರಿಜೆಕ್ಟ್ ಮಾಡಿದ್ದ ಸಾಯಿ ಪಲ್ಲವಿ

ದಕ್ಷಿಣ ಭಾರತದ ಪ್ರಸಿದ್ಧ ನಟಿ ಸಾಯಿ ಪಲ್ಲವಿ ಅವರು 2 ಕೋಟಿ ರೂಪಾಯಿ ಮೌಲ್ಯದ ಒಂದು ಫೇರ್‌ನೆಸ್ ಕ್ರೀಮ್ ಜಾಹೀರಾತನ್ನು ತಿರಸ್ಕರಿಸಿದ್ದಾರೆ. ಅವರ ಈ ನಿರ್ಧಾರ ಸಾಕಷ್ಟು ಚರ್ಚೆಗೆ ಕಾರಣವಾಗಿದೆ. ಇದಲ್ಲದೆ, ಅವರು ಬಾಲಿವುಡ್‌ನಲ್ಲಿ ತಮ್ಮ ಅಭಿನಯ ಪ್ರವೇಶಕ್ಕೆ ಸಿದ್ಧರಾಗಿದ್ದಾರೆ. ವೈದ್ಯಕೀಯ ಪದವೀಧರೆಯೂ ಆಗಿರುವ ಸಾಯಿ ಪಲ್ಲವಿ ಅವರ ಸರಳತೆ ಮತ್ತು ತತ್ವಗಳಿಗೆ ಈ ಘಟನೆ ಸಾಕ್ಷಿಯಾಗಿದೆ. ಅವರ ಮುಂದಿನ ಚಿತ್ರ 'ರಾಮಾಯಣ' ಚಿತ್ರದಲ್ಲಿ ನಟಿಸುತ್ತಿದ್ದಾರೆ. ದಕ್ಷಿಣ ಭಾರತದ ನಟಿ ಸಾಯಿ ಪಲ್ಲವಿ ಅವರು ದೊಡ್ಡ ಮಟ್ಟದಲ್ಲಿ ಹೆಸರು ಮಾಡಿದವರು. ಅವರಿಗೆ ಹಲವು ಆಫರ್ಗಳು ಬಂದಿದ್ದವು. ಈ ಪೈಕಿ ಅವರು ಅಳೆದು ತೂಗಿ ಕೆಲವು ಸಿನಿಮಾಗಳನ್ನು ಒಪ್ಪಿಕೊಂಡು ನಟಿಸುತ್ತಿದ್ದಾರೆ. ಈ ಸುಂದರ ನಟಿ ವೈದ್ಯೆ ಕೂಡ ಹೌದು. ಅವರು ಎಂಬಿಬಿಎಸ್ ಕೂಡ ಓದಿದ್ದಾರೆ. ಸೌತ್ ನಂತರ ಬಾಲಿವುಡ್‌ನಲ್ಲಿ ಸದ್ದು ಮಾಡಲು ಸಾಯಿ ಪಲ್ಲವಿ ಸಜ್ಜಾಗಿದ್ದಾರೆ. ಈ ಮಧ್ಯೆ ಸಾಯಿ ಪಲ್ಲವಿ ಅವರ ಒಂದು ಅಪರೂಪದ ವಿಚಾರ ರಿವೀಲ್ ಆಗಿದೆ. ಅವರು ಬರೋಬ್ಬರಿ 2 ಕೋಟಿ ರೂಪಾಯಿ ಜಾಹೀರಾತನ್ನು ರಿಜೆಕ್ಟ್ ಮಾಡಿದ್ದರು ಎಂಬುದು ವಿಶೇಷ.

ಸಾಯಿ ಪಲ್ಲವಿ 1992ರ ಮೇ 9 ರಂದು ತಮಿಳುನಾಡಿನ ಕೊಯಮತ್ತೂರಿನಲ್ಲಿ ಬಡಗ ಕುಟುಂಬದಲ್ಲಿ ಜನಿಸಿದರು. ಅವರ ತಂದೆಯ ಹೆಸರು ಸೆಂತಾಮರೈ ಕಾನನ್ ಮತ್ತು ತಾಯಿಯ ಹೆಸರು ರಾಧಾ, ನಟಿಗೆ ಪೂಜಾ ಕಾನನ್ ಹೆಸರಿನ ತಂಗಿ ಇದ್ದಾರೆ. ಅವರು ನಟಿಯಾಗಿಯೂ ಕೆಲಸ ಮಾಡಿದ್ದಾರೆ. ಅವರು ಉತ್ತಮ ನೃತ್ಯಗಾರ್ತಿಯೂ ಹೌದು. ತೆಲುಗು, ತಮಿಳು ಮತ್ತು ಮಲಯಾಳಂ ಚಿತ್ರಗಳಲ್ಲಿ ಕೆಲಸ ಮಾಡಿದ್ದಾರೆ. ಇದೀಗ ಸಾಯಿ ಪಲ್ಲವಿ ಬಾಲಿವುಡ್ ಪ್ರವೇಶಿಸಲು ಸಜ್ಜಾಗಿದ್ದಾರೆ. ಸಾಯಿ ಪಲ್ಲವಿ ಅವರು 'ಪ್ರೇಮಂ' ಚಿತ್ರದ ಮೂಲಕ ಬಣ್ಣದ ಲೋಕಕ್ಕೆ ಕಾಲಿಟ್ಟರು. ಈ ಚಿತ್ರ ರಿಲೀಸ್ ಆಗಿ ದಶಕ ಕಳೆಯುತ್ತಾ ಬಂದಿದೆ. ಅವರಿಗೆ ಈ ಮೊದಲು ಸ್ಕಿನ್ಕೇರ್ ಆಫರ್ ಬಂದಿತ್ತು. ಆದರೆ, ಇದನ್ನು ಅವರು ರಿಜೆಕ್ಟ್ ಮಾಡಿದ್ದರು. 'ಇದು ಭಾರತೀಯರ ಬಣ್ಣ. ನಾವು ವಿದೇಶರ ಬಳಿ ಹೋಗಿ ನೀವು ಏಕೆ ಬೆಳ್ಳಗೆ ಇದ್ದೀರಿ ಎಂದು ಕೇಳೋಕೆ ಆಗಲ್ಲ. ಇದರಿಂದ ಅವರಿಗೆ ಕ್ಯಾನ್ಸರ್ ಬರುತ್ತದೆ ಅನ್ನೋದು ಗೊತ್ತು. ನಮಗೆ ಆ ರೀತಿ ಆಗಬೇಕು ಎಂದು ಯೋಚಿಸೋಕೆ ಆಗಲ್ಲ. ಅದು ಅವರ ಬಣ್ಣ, ಇದು ಇವರ ಬಣ್ಣ. ಆಫ್ರಿಕಾದವರಿಗೆ ಅವರದ್ದೇ ಆದ ಬಣ್ಣ ಇದೆ' ಎಂದಿದ್ದರು ಸಾಯಿ ಪಲ್ಲವಿ.



# ವಿಶ್ವ ಚೆಸ್ ಚಾಂಪಿಯನ್ ಡಿ ಗುಕೇಶ್‌ಗೆ ಉಡುಗೊರೆ

ಚೆಸ್‌ನಲ್ಲಿ ವಿಶ್ವ ಚಾಂಪಿಯನ್ ಆಗುವ ಮೂಲಕ ಸಾಧನೆ ಮಾಡಿರುವ ಡಿ. ಗುಕೇಶ್ ಅವರಿಗೆ ಚಿತ್ರರಂಗದ ಸಾಧಕರು ಅಭಿನಂದನೆ ಸಲ್ಲಿಸುತ್ತಿದ್ದಾರೆ. ಗುಕೇಶ್ ಅವರಿಗೆ ರಜನಿಕಾಂತ್ ಮತ್ತು ಶಿವಕಾರ್ತಿಕೇಯನ್ ಭೇಟಿಯಾಗುವ ಅವಕಾಶ ಸಿಕ್ಕಿದೆ. ಈ ಸ್ಟಾರ್ ನಟರು ಗುಕೇಶ್‌ಗೆ ಅಭಿನಂದನೆ ತಿಳಿಸಿ, ಉಡುಗೊರೆ ನೀಡಿದ್ದಾರೆ. ಈ ಸಂದರ್ಭದ ಫೋಟೋ ಮತ್ತು ವಿಡಿಯೋ ವೈರಲ್ ಆಗಿದೆ. ಭಾರತಕ್ಕೆ ಹೆಮ್ಮೆ ತಂದಿರುವ ವಿಶ್ವ ಚೆಸ್ ಚಾಂಪಿಯನ್ ಡಿ. ಗುಕೇಶ್ ಅವರಿಗೆ ಈಗಾಗಲೇ ಎಲ್ಲಾರೂ ಅಭಿನಂದನೆ ಸಲ್ಲಿಸಿದ್ದಾರೆ. ಚೆನ್ನೈನಲ್ಲಿ ನೆಲೆಸಿರುವ ಅವರನ್ನು ಕಾಲಿವುಡ್ ಸೆಲೆಬ್ರಿಟಿಗಳು ಕೂಡ ಭೇಟಿ ಮಾಡುತ್ತಿದ್ದಾರೆ. 'ಸೂಪರ್ ಸ್ಟಾರ್' ರಜನಿಕಾಂತ್, ನಟ ಶಿವಕಾರ್ತಿಕೇಯನ್ ಮುಂತಾದವರು ಡಿ. ಗುಕೇಶ್ ಅವರನ್ನು ಭೇಟಿ ಮಾಡಿ ಬೆನ್ನು ತಟ್ಟಿದ್ದಾರೆ. ಇಂಥ ಸೆಲೆಬ್ರಿಟಿಗಳನ್ನು ಭೇಟಿ ಮಾಡುವ ಅವಕಾಶ ಸಿಕ್ಕಿದ್ದಕ್ಕಾಗಿ ಗುಕೇಶ್ ಅವರು ಧನ್ಯವಾದ ಅರ್ಪಿಸಿದ್ದಾರೆ. ಅಲ್ಲದೇ, ಸೋಶಿಯಲ್ ಮೀಡಿಯಾದಲ್ಲಿ ಫೋಟೋಗಳನ್ನು ಹಂಚಿಕೊಂಡಿದ್ದಾರೆ. ಗುಕೇಶ್ ಅವರಿಂದಾಗಿ ಭಾರತಕ್ಕೆ 11 ವರ್ಷಗಳ ಬಳಿಕ ಚೆಸ್ ಚಾಂಪಿಯನ್‌ಶಿಪ್ ದೊರೆತಿದೆ. ಹಾಗಾಗಿ ಅವರನ್ನು ಕಂಡರೆ ಎಲ್ಲಾರಿಗೂ ಹೆಮ್ಮೆ. ಗುಕೇಶ್ ಅವರು ತಮ್ಮ ಪೋಷಕರ ಜೊತೆ ರಜನಿಕಾಂತ್ ಅವರ ನಿವಾಸಕ್ಕೆ ಭೇಟಿ ನೀಡಿದ್ದಾರೆ. ಈ ವೇಳೆ ರಜನಿಕಾಂತ್ ಅವರು ಗುಕೇಶ್‌ಗೆ ಶಾಲು ಹೊದಿಸಿ ಸನ್ಮಾನ ಮಾಡಿದ್ದಾರೆ. ಅಲ್ಲದೇ, ಪುಸ್ತಕವೊಂದನ್ನು ಉಡುಗೊರೆಯಾಗಿ ನೀಡಿದ್ದಾರೆ.

'ಸೂಪರ್ ಸ್ಟಾರ್ ರಜನಿಕಾಂತ್ ಅವರ ಹಾರೈಕೆಗಳಿಗೆ ಧನ್ಯವಾದಗಳು. ನಮ್ಮನ್ನು ಮನೆಗೆ ಆಹ್ವಾನಿಸಿ, ನಮ್ಮೊಂದಿಗೆ ಅಮೂಲ್ಯವಾದ ಸಮಯ ಕಳೆದು, ಜ್ಞಾನ ಹಂಚಿಕೊಂಡಿದ್ದಕ್ಕೆ ಧನ್ಯವಾದ ಸರ್' ಎಂದು ಗುಕೇಶ್ ಅವರು ಸೋಶಿಯಲ್ ಮೀಡಿಯಾದಲ್ಲಿ ಬರೆದುಕೊಂಡಿದ್ದಾರೆ. ವಿಶೇಷ ಏನೆಂದರೆ, ಗುಕೇಶ್ ಅವರ ತಂದೆಯ ಹೆಸರು ಕೂಡ ರಜನಿಕಾಂತ್! ಅವರು ಇಎನ್‌ಟಿ ಸರ್ಜನ್ ಆಗಿದ್ದಾರೆ. ಗುಕೇಶ್ ತಾಯಿ ಪದ್ಮಾವತಿ ಮೈಕ್ರೋಬಯೋಲಜಿಸ್ಟ್ ಆಗಿದ್ದಾರೆ.

'ಅಮರನ್' ಸಿನಿಮಾದ ಯಶಸ್ಸಿನಲ್ಲಿ ಇರುವ ನಟ ಶಿವಕಾರ್ತಿಕೇಯನ್ ಅವರು ಡಿ. ಗುಕೇಶ್ ಮತ್ತು ಅವರ ಕುಟುಂಬದವರ ಜೊತೆ ಕಾಲ ಕಳೆದಿದ್ದಾರೆ. ಚೆಸ್ ವಿನ್ಯಾಸ ಇರುವ ಕೇಕ್ ಕತ್ತರಿಸಿ ಸಂಭ್ರಮಿಸಿದ್ದಾರೆ. ಗುಕೇಶ್‌ಗೆ ಅವರು ವಾಚ್ ಗಿಫ್ಟ್ ನೀಡಿದ್ದಾರೆ. ಈ ಫೋಟೋವನ್ನು ಕೂಡ ಗುಕೇಶ್ ಅವರು 'ಎಕ್ಸ್' (ಟ್ವಿಟರ್) ಖಾತೆಯಲ್ಲಿ ಹಂಚಿಕೊಂಡು ಖುಷಿಪಟ್ಟಿದ್ದಾರೆ. ಗುಕೇಶ್ ಅವರು ಅನೇಕ ಯುವಕರಿಗೆ ಮಾದರಿ ಆಗಿದ್ದಾರೆ. ಅಮಿತಾಭ್ ಬಚ್ಚನ್, ಮೋಹನ್‌ಲಾಲ್, ಮಹೇಶ್ ಬಾಬು, ಮುಂತಾದ ಸೆಲೆಬ್ರಿಟಿಗಳು ಕೂಡ ಗುಕೇಶ್ ಅವರ ಸಾಧನೆಯನ್ನು ಕೊಂಡಾಡಿದ್ದಾರೆ.

# 'ಬಾಸಿಸಂ' ಮುಗಿದ ಕತೆ: ಸುದೀಪ್ ಸೆಲೆಬ್ರೇಷನ್ ಕೇಕ್ ಫುಲ್ ವೈರಲ್



ಸುದೀಪ್ ನಟನೆಯ 'ಮ್ಯಾಕ್ಸ್' ಸಿನಿಮಾ ನಿನ್ನೆ ಬಿಡುಗಡೆ ಆಗಿ ಭರ್ಜರಿ ಕಲೆಕ್ಷನ್ ಮಾಡಿದೆ. ಸಿನಿಮಾದ ಯಶಸ್ಸಿನ ಸಂಭ್ರಮಾಚರಣೆ ವೇಳೆ ಸುದೀಪ್ ಕತ್ತರಿಸಿದ ಕೇಕ್‌ನ ಚಿತ್ರ ಇದೀಗ ವೈರಲ್ ಆಗುತ್ತಿದೆ. ಸುದೀಪ್ ನಟನೆಯ 'ಮ್ಯಾಕ್ಸ್' ಸಿನಿಮಾ ನಿನ್ನೆ ಬಿಡುಗಡೆ ಆಗಿದೆ. ಸಿನಿಮಾ ಮೊದಲ ದಿನವೇ 8.50 ಕೋಟಿ ಗಳಿಕೆ ಮಾಡಿದ್ದು ಸಿನಿಮಾಕ್ಕೆ ಬಹಳ ಒಳ್ಳೆಯ ಪ್ರತಿಕ್ರಿಯೆ ವ್ಯಕ್ತವಾಗಿದೆ. ಸಿನಿಮಾದ ಕಲೆಕ್ಷನ್ ಎರಡನೇ ದಿನ ಇನ್ನಷ್ಟು ಹೆಚ್ಚಾಗುವ ಸಾಧ್ಯತೆ ಇದೆ. 'ಮ್ಯಾಕ್ಸ್' ಸಿನಿಮಾಕ್ಕೆ ಮೊದಲ ದಿನ ಬಹಳ ಒಳ್ಳೆಯ ಪ್ರತಿಕ್ರಿಯೆ ವ್ಯಕ್ತವಾದ ಕಾರಣ ಸುದೀಪ್ ಅವರ ನಿವಾಸದಲ್ಲಿ 'ಮ್ಯಾಕ್ಸ್' ಚಿತ್ರತಂಡದ ಜೊತೆಗೆ ಸಂಭ್ರಮ ಆಚರಿಸಲಾಗಿದೆ.

ಈ ಸಂಭ್ರಮಾಚರಣೆ ವೇಲೆ ಸುದೀಪ್ ಕತ್ತರಿಸಿದ ಕೇಕ್ ಒಂದರ ಫೋಟೊ ಇದೀಗ ವೈರಲ್ ಆಗುತ್ತಿದೆ. ನಿನ್ನೆ ರಾತ್ರಿ ನಡೆದ ಸಂಭ್ರಮಾಚರಣೆಯಲ್ಲಿ ಕೇಕ್‌ಗಳನ್ನು ಕತ್ತರಿಸಿ ಸುದೀಪ್ ಮತ್ತು 'ಮ್ಯಾಕ್ಸ್' ಚಿತ್ರತಂಡ ಸಂಭ್ರಮಿಸಿದೆ. ಈ ವೇಳೆ ಸುದೀಪ್ ಅವರು 'ಬಾಸಿಸಮ್ ಕಾಲ ಮುಗೀತು, ಮ್ಯಾಕ್ಸಿಸಮ್ ಮ್ಯಾಕ್ಸ್ ಕಾಲ ಶುರುವಾಯ್ತು' ಎಂದು ಕೇಕ್ ಮೇಲೆ ಬರೆದಿದ್ದು, ಆ ಕೇಕ್‌ನ ಚಿತ್ರ ಇದೀಗ ವೈರಲ್ ಆಗಿದೆ. ನಟ ದರ್ಶನ್‌ಗೆ ಟಾಂಗ್ ನೀಡಲೆಂದೇ 'ಮ್ಯಾಕ್ಸ್' ಚಿತ್ರತಂಡದವರು ಈ ರೀತಿ ಸಾಲುಗಳನ್ನು ಕೇಕ್ ಮೇಲೆ ಬರೆಸಿದ್ದಾರೆ ಎನ್ನಲಾಗುತ್ತಿದೆ. ಸುದೀಪ್ ಅಭಿಮಾನಿಗಳು ಕೇಕ್‌ನ ಚಿತ್ರಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಳ್ಳುತ್ತಿದ್ದಾರೆ.

ಅಸಲಿಗೆ ಇದೇ ಸಮಯದಲ್ಲಿ ದರ್ಶನ್ ನಟನೆಯ 'ಡೆವಿಲ್' ಸಿನಿಮಾ ಬಿಡುಗಡೆ ಆಗಬೇಕಿತ್ತು. ಆದರೆ ರೇಣುಕಾ ಸ್ವಾಮಿ ಕೊಲೆ ಪ್ರಕರಣದ ಆರೋಪಿಯಾಗಿ ಜೈಲು ಸೇರಿದ ಕಾರಣ ಚಿತ್ರೀಕರಣ ನಡೆಯಲಿಲ್ಲ. 'ಡೆವಿಲ್' ಸಿನಿಮಾ ಬಿಡುಗಡೆ ಆಗುವ ಸಮಯಕ್ಕೆ ಸರಿಯಾಗಿ ಈಗ ಸುದೀಪ್‌ರ 'ಮ್ಯಾಕ್ಸ್' ಸಿನಿಮಾ ಬಿಡುಗಡೆ ಆಗಿದೆ. ಮಾತ್ರವಲ್ಲದೆ ಸಿನಿಮಾ ಮೊದಲ ದಿನವೇ ಭರ್ಜರಿ ಕಲೆಕ್ಷನ್ ಮಾಡಿರುವ ಜೊತೆಗೆ ದೊಡ್ಡ ಮಟ್ಟದ ಭರವಸೆಯನ್ನೂ ಸಹ ಮೂಡಿಸಿದೆ.



# ಶ್ರೀದೇವಿ ಸಿಕ್ಕ ಬಳಿಕ ಎಲ್ಲವೂ ಬದಲಾಯ್ತು

ಬೋನಿ ಕಪೂರ್ ಅವರು ಶ್ರೀದೇವಿ ಅವರನ್ನು ಮದುವೆಯಾಗುವ ಮೊದಲು ಅನೇಕ ಮಹಿಳೆಯರೊಂದಿಗೆ ಸಂಬಂಧ ಹೊಂದಿದ್ದರು ಎಂದು ಒಪ್ಪಿಕೊಂಡಿದ್ದಾರೆ. ಆದರೆ ಶ್ರೀದೇವಿ ಅವರನ್ನು ಭೇಟಿಯಾದ ನಂತರ ಅವರ ಜೀವನದಲ್ಲಿ ಒಂದು ದೊಡ್ಡ ಬದಲಾವಣೆ ಉಂಟಾಯಿತು. ಶ್ರೀದೇವಿ ಅವರೊಂದಿಗಿನ ಅವರ ಪ್ರೀತಿ ಅವರ ಜೀವನದ ಅತ್ಯಂತ ಮುಖ್ಯವಾದ ಅಂಶವಾಗಿತ್ತು. ಅವರ ಪ್ರೀತಿಯ ಕಥೆ ಹಾಗೂ ಶ್ರೀದೇವಿಯ ಸಾವಿನ ನಂತರದ ಬದುಕಿನ ಬಗ್ಗೆ ಈ ಲೇಖನ ತಿಳಿಸುತ್ತದೆ. ಖ್ಯಾತ ನಿರ್ಮಾಪಕ ಬೋನಿ ಕಪೂರ್ ಅವರು ಒಂದು ಮದುವೆ ಆದ ನಂರವೂ ಶ್ರೀದೇವಿ ಜೊತೆ ಆಕರ್ಷಿತರಾಗಿದ್ದರು. ಅವರಿಗೆ ಆಗಲೇ ಮೋನಾ ಶೌರಿ ಕಪೂರ್ ಜೊತೆ ವಿವಾಹ ಆಗಿತ್ತು. ಅವರಿಗೆ ಶ್ರೀದೇವಿ ಬಗ್ಗೆ ಸಾಕಷ್ಟು ಪ್ರೀತಿ ಮೂಡಿತ್ತು. ಈ ಪ್ರೀತಿಯನ್ನು ಅವರು ವ್ಯಕ್ತಪಡಿಸಿ ಅವರನ್ನು ಮದುವೆ ಆದರು.



ಸಿನಿ ವಾಹಿನಿ

# ತ್ರಿಷಾ ಮುದ್ದಿನ ನಾಯಿ ಜಾರೋ ನಿಧನ

ಸೌತ್ ನಟಿ ತ್ರಿಷಾ ಸೋಶಿಯಲ್ ಮೀಡಿಯಾದಲ್ಲಿ ಭಾವುಕ ಪೋಸ್ಟ್‌ವೊಂದನ್ನು ಹಂಚಿಕೊಂಡಿದ್ದಾರೆ. ನಟಿಯ ಮುದ್ದಿನ ನಾಯಿ ಜಾರೋ ಮೃತಪಟ್ಟಿದೆ. ಇದು ತ್ರಿಷಾಗೆ ಅರಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ನನ್ನ ಜೀವನವೇ ಅರ್ಥಹೀನವೆನಿಸುತ್ತಿದೆ ಎಂದು ಎಮೋಷನಲ್ ಪೋಸ್ಟ್‌ವೊಂದನ್ನು ನಟಿ ಶೇರ್ ಮಾಡಿದ್ದಾರೆ.

ನನ್ನ ಮಗ ಜಾರೋ ಕ್ರಿಸ್‌ಮಸ್ ದಿನದಂದು ಬೆಳಗ್ಗೆ ಸಾವನ್ನಪ್ಪಿದೆ. ಈ ಅಗಲಿಕೆ ನನ್ನ ಜೀವನ ಅರ್ಥಹೀನವನ್ನಾಗಿ ಮಾಡಿದೆ ಎಂಬುದು ನನ್ನನ್ನು ಚೆನ್ನಾಗಿ ತಿಳಿದವರಿಗೆ ಗೊತ್ತು. ಈ ಆಘಾತದಿಂದ ಚೇತರಿಸಿಕೊಳ್ಳಲಾಗದೆ ನಾನು ಮತ್ತು ನನ್ನ ಕುಟುಂಬಸ್ಥರು ಕುಸಿದು ಹೋಗಿದ್ದೇವೆ. ಮತ್ತೆ ಸಹಜ ಸ್ಥಿತಿಗೆ ಮರಳಲು ಸಮಯ ಬೇಕಾಗುತ್ತದೆ ಎಂದು ಕಣ್ಣೀರಿಟ್ಟಿದ್ದಾರೆ. ಜಾರೋವನ್ನು ಸಮಾಧಿ ಮಾಡಿದಾಗ ತೆಗೆದ ಫೋಟೋವನ್ನು ಕೂಡ ಪೋಸ್ಟ್ ಮಾಡಿದ್ದಾರೆ. ಇದನ್ನು ನೋಡಿದ ಅಭಿಮಾನಿಗಳು ನಟಿಗೆ ಸಾಂತ್ವನ ಹೇಳುತ್ತಿದ್ದಾರೆ. ಇನ್ನೂ ಮುದ್ದಿನ ನಾಯಿ ಜಾರೋವನ್ನು 2012ರಿಂದ ನಟಿ ಬೆಳೆಸಿದ್ದಾರೆ. ಜಾರೋ ತ್ರಿಷಾರ ಅಚ್ಚುಮೆಚ್ಚಿನ ನಾಯಿಯಾಗಿತ್ತು. ಮುದ್ದಿನ ನಾಯಿಯ ಅಗಲಿಕೆ ನೋವು ತ್ರಿಷಾಗೆ ಸಹಿಸಿಕೊಳ್ಳಲಾಗುತ್ತಿಲ್ಲ. ಅಂದಹಾಗೆ, ಮೆಗಾಸ್ಟಾರ್ ಚಿರಂಜೀವಿ ಜೊತೆಯೊಂದು ಸಿನಿಮಾ, ಮಲಯಾಳಂನಲ್ಲಿ ಒಂದು ಸಿನಿಮಾ, ಮಣಿರತ್ನಂ ನಿರ್ದೇಶನದಲ್ಲಿ ಸಿಂಬುಗೆ ನಾಯಕಿಯಾಗಿ ತ್ರಿಷಾ ನಟಿಸುತ್ತಿದ್ದಾರೆ. ಕೈತುಂಬಾ ಸಿನಿಮಾಗಳಿವೆ.

# ಇತಿಹಾಸ ಬರೆದ ಆಫ್ರಿಕಾ ವೇಗಿ

ದಕ್ಷಿಣ ಆಫ್ರಿಕಾ ಮತ್ತು ಪಾಕಿಸ್ತಾನ ನಡುವಿನ ಬಾಕ್ಸಿಂಗ್ ಡೇ ಟೆಸ್ಟ್ ಪಂದ್ಯದಲ್ಲಿ, ಚೊಚ್ಚಲ ಅಂತಾರಾಷ್ಟ್ರೀಯ ಪಂದ್ಯವನ್ನಾಡುತ್ತಿರುವ ಆಫ್ರಿಕಾದ ಕಾರ್ಬಿನ್ ಬಾಷ್ ಅವರು ತಮ್ಮ ಮೊದಲ ಎಸೆತದಲ್ಲೇ ವಿಕೆಟ್ ಪಡೆದು ಇತಿಹಾಸ ನಿರ್ಮಿಸಿದ್ದಾರೆ. ಇದರ ಜೊತೆಗೆ ಬಾಕ್ಸಿಂಗ್ ಡೇ ಟೆಸ್ಟ್‌ನಲ್ಲಿ ಪದಾರ್ಪಣೆ ಮಾಡಿ ಈ ಸಾಧನೆ ಮಾಡಿದ ಆಫ್ರಿಕಾದ ಮೊದಲ ವೇಗಿ ಎನಿಸಿಕೊಂಡಿದ್ದಾರೆ. ಒಂದೆಡೆ ಭಾರತ ಹಾಗೂ ಆಸ್ಟ್ರೇಲಿಯಾ ನಡುವೆ ಬಾಕ್ಸಿಂಗ್ ಡೇ ಟೆಸ್ಟ್ ಪಂದ್ಯ ನಡೆಯುತ್ತಿದ್ದರೆ, ಮತ್ತೊಂದೆಡೆ ಪಾಕಿಸ್ತಾನ ಹಾಗೂ ದಕ್ಷಿಣ ಆಫ್ರಿಕಾ ತಂಡಗಳು ಸಹ ಬಾಕ್ಸಿಂಗ್ ಡೇ ಟೆಸ್ಟ್ ಪಂದ್ಯದಲ್ಲಿ ಮುಖಾಮುಖಿಯಾಗಿವೆ. ಉಭಯ ತಂಡಗಳ ನಡುವೆ ಇಂದಿನಿಂದ ಅಂದರೆ ಡಿಸೆಂಬರ್ 26 ರಿಂದ ಪ್ರಾರಂಭವಾಗಿ



ರುವ ಎರಡು ಪಂದ್ಯಗಳ ಟೆಸ್ಟ್ ಸರಣಿಯ ಮೊದಲ ಪಂದ್ಯದಲ್ಲಿ ಟಾಸ್ ಗೆದ್ದ ದಕ್ಷಿಣ ಆಫ್ರಿಕಾ ಮೊದಲು ಬೌಲಿಂಗ್ ಆಯ್ದುಕೊಂಡಿದೆ. ಹೀಗಾಗಿ ಟಾಸ್ ಸೋತ ಪಾಕಿಸ್ತಾನ ಮೊದಲ ಇನ್ನಿಂಗ್ಸ್ ಆರಂಭಿಸಿದ್ದು ಇದುವರೆಗೆ ಉಭಯ ತಂಡಗಳಿಂದ ಸಮಬಲದ ಹೋರಾಟ ಕಂಡುಬಂದಿದೆ. ಇದೇ ವೇಳೆ ಆಫ್ರಿಕಾ ಪರ ಚೊಚ್ಚಲ ಟೆಸ್ಟ್ ಪಂದ್ಯವನ್ನಾಡುತ್ತಿರುವ ವೇಗದ ಬೌಲರ್ ಕಾರ್ಬಿನ್ ಬಾಷ್ ತಮ್ಮ ವೃತ್ತಿಜೀವನದ ಮೊದಲ ಎಸೆತದಲ್ಲೇ ವಿಕೆಟ್ ಪಡೆಯುವ ಮೂಲಕ ಇತಿಹಾಸ ಸೃಷ್ಟಿಸಿದ್ದಾರೆ.

**ಪಾಕಿಸ್ತಾನಕ್ಕೆ ಉತ್ತಮ ಆರಂಭ**

ದಕ್ಷಿಣ ಆಫ್ರಿಕಾ ಮತ್ತು ಪಾಕಿಸ್ತಾನ ನಡುವೆ ಸೆಂಚುರಿಯನ್‌ನ ಸೂಪರ್‌ಸ್ಪೋರ್ಟ್ ಪಾರ್ಕ್‌ನಲ್ಲಿ ನಡೆಯುತ್ತಿರುವ ಟೆಸ್ಟ್‌ನಲ್ಲಿ ಮೊದಲು ಬ್ಯಾಟಿಂಗ್ ಮಾಡುತ್ತಿರುವ ಪಾಕಿಸ್ತಾನ ತಂಡಕ್ಕೆ ಆರಂಭಿಕರಿಬ್ಬರು ಉತ್ತಮ ಆರಂಭ ಒದಗಿಸಿಕೊಟ್ಟರು. ಹೀಗಾಗಿ ವಿಕೆಟ್‌ಗಾಗಿ ಹಾತೊರೆಯುತ್ತಿದ್ದ ಆಫ್ರಿಕಾ ನಾಯಕ ಟೆಂಬಾ ಬವುಮಾ ತಂಡದ ಪ್ರಮುಖ ಬೌಲಿಂಗ್ ಅಸ್ತ್ರಗಳಾದ ಕಗಿಸೊ ರಬಾಡ ಮತ್ತು ಅನುಭವಿ ವೇಗಿ ಮಾರ್ಕೊ ಯಾನ್ಸನ್‌ರನ್ನು ಒಬ್ಬರ ಹಿಂದೆ ಒಬ್ಬರಂತೆ ಬೌಲಿಂಗ್‌ನಲ್ಲಿ ಬಳಸಿದರೂ ಅವರಿಗೆ ವಿಕೆಟ್ ಸಿಗಲಿಲ್ಲ. ಮೊದಲ ಎಸೆತದಲ್ಲಿಯೇ ವಿಕೆಟ್ ಹೀಗಾಗಿ ದಕ್ಷಿಣ ಆಫ್ರಿಕಾಕ್ಕೆ ಪಂದ್ಯದ ಮೊದಲ ಗಂಟೆಯಲ್ಲಿ ಯಾವುದೇ ವಿಕೆಟ್ ಪಡೆಯಲು ಸಾಧ್ಯವಾಗಲಿಲ್ಲ. ವೇಳೆ ಬೌಲಿಂಗ್‌ನಲ್ಲಿ ಬದಲಾವಣೆ ಮಾಡಿದ ಬವುಮಾ ವೇಗಿ ಡ್ಯಾನ್ ಪ್ಯಾಟರ್ಸನ್ ಅವರನ್ನು ಕಣಕ್ಕಿಳಿಸಿದರು. ಆದರೂ ತಂಡಕ್ಕೆ ವಿಕೆಟ್ ಸಿಗಲಿಲ್ಲ.

# 'ಕೊಹ್ಲಿ ಉದ್ದೇಶಪೂರ್ವಕವಾಗಿ'

## ಭುಜಬಲದ ಕಾಳಗದ ಬಗ್ಗೆ ಮೌನ ಮುರಿದ ಕೊನ್‌ಸ್ಟಾಸ್

ಭಾರತ ಹಾಗೂ ಆಸ್ಟ್ರೇಲಿಯಾ ನಡುವಿನ ನಾಲ್ಕನೇ ಟೆಸ್ಟ್‌ನ ಮೊದಲ ದಿನದಾಟ ಮುಕ್ತಾಯಗೊಂಡಿದೆ. ಪಂದ್ಯದಲ್ಲಿ ಟಾಸ್ ಗೆದ್ದು ಮೊದಲ ಇನ್ನಿಂಗ್ಸ್ ಆರಂಭಿಸಿರುವ ಆಸೀಸ್ ಪಡೆ ದಿನದಾಟದಂತ್ಯಕ್ಕೆ 6 ವಿಕೆಟ್ ಕಳೆದುಕೊಂಡು 311 ರನ್ ಕಲೆಹಾಕಿದೆ. ಅಂದರೆ ಮೊದಲ ದಿನದಾಟದ ಗೌರವ ಉಭಯ ತಂಡಗಳಿಗೂ ಸಮನಾಗಿ ಹಂಚಿಕೆಯಾಗಿದೆ. ಈ ನಡುವೆ ಮೊದಲ ದಿನದಾಟದ ವೇಳೆ ನಡೆದ ಅದೊಂದು ಘಟನೆ ಕ್ರಿಕೆಟ್ ಲೋಕದಲ್ಲಿ ಸಾಕಷ್ಟು ಚರ್ಚೆ ಹುಟ್ಟುಹಾಕಿದ್ದು, ಇದೀಗ ಅದರ ಭಾರವನ್ನು ಕ್ರಿಕೆಟ್ ಲೋಕದ ಸಾಮ್ರಾಟ ವಿರಾಟ್ ಕೊಹ್ಲಿ ಹೊರಬೇಕಾಗಿ ಬಂದಿದೆ. ಆದಾಗ್ಯೂ, ಪಂದ್ಯ ಮುಗಿದ ಬಳಿಕ ಆ ಘಟನೆಯ ಬಗ್ಗೆ ಮಾತನಾಡಿರುವ ಸ್ಯಾಮ್ ಕೊನ್‌ಸ್ಟಾಸ್, ಈ ಘಟನೆಯಲ್ಲಿ ತನ್ನ ನೆಚ್ಚಿನ ಆಟಗಾರ ವಿರಾಟ್ ಕೊಹ್ಲಿಯದ್ದು ಯಾವುದೇ ತಪ್ಪಿಲ್ಲ ಎಂದಿದ್ದು, ಕೊಹ್ಲಿ ಆಕಸ್ಮಿಕವಾಗಿ ನನಗೆ ಡಿಕ್ಕಿ ಹೊಡೆದರು ಎನ್ನುವ ಮೂಲಕ ವಿವಾದಿತ ಘಟನೆಗೆ ತೆರೆ ಎಳೆಯುವ ಕೆಲಸ ಮಾಡಿದ್ದಾರೆ. ವಾಸ್ತವವಾಗಿ ಆಸೀಸ್ ಇನ್ನಿಂಗ್ಸ್ ವೇಳೆ ತಂಡದ ಪರ ಚೊಚ್ಚಲ ಪಂದ್ಯವನ್ನಾಡುತ್ತಿರುವ ಸ್ಯಾಮ್ ಕೊನ್‌ಸ್ಟಾಸ್ ಹಾಗೂ ಟೀಂ ಇಂಡಿಯಾದ ಮಾಜಿ ನಾಯಕ ವಿರಾಟ್ ಕೊಹ್ಲಿ ಪರಸ್ಪರ ಡಿಕ್ಕಿ ಹೊಡೆದುಕೊಂಡಿದಲ್ಲದೆ ಮೈದಾನದಲ್ಲೇ ಮಾತಿನ ಚಕಮಕಿ ನಡೆಸಿದ್ದರು. ಕೂಡಲೇ ಈ ಇಬ್ಬರ ಮಧ್ಯ ಪ್ರವೇಶಿಸಿದ್ದ ಅಂಪೈರ್‌ಗಳು ಸನ್ನಿವೇಶವನ್ನು ತಿಳಿಗೊಳಿಸಿದ್ದರು. ನಡೆದ ಘಟನೆಯಲ್ಲಿ ವಿರಾಟ್ ಕೊಹ್ಲಿಯದ್ದೇ ತಪ್ಪು ಎಂಬುದು ಮೇಲ್ನೋಟಕ್ಕೆ ಕಾಣುತ್ತಿದ್ದ ಕಾರಣ ಇಡೀ ಘಟನೆಯನ್ನು ಸಂಪೂರ್ಣವಾಗಿ ಪರಿಶೀಲಿಸಿ ತನಿಖೆ ನಡೆಸಿರುವ ಮ್ಯಾಚ್ ರೆಫರಿ, ವಿರಾಟ್ ಕೊಹ್ಲಿಗೆ ದಂಡ ವಿಧಿಸಿದ್ದಾರೆ. ಆ ಪ್ರಕಾರ ಪಂದ್ಯ ಶುಲ್ಕದ ಶೇ.20 ರಷ್ಟು ದಂಡವಾಗಿ ವಿಧಿಸಲಾಗಿದ್ದು, ಒಂದು





ಡಿಮೆರಿಟ್ ಪಾಯಿಂಟ್ ಸಹ ನೀಡಲಾಗಿದೆ.

ಘಟನೆ ನಡೆದ ಬಳಿಕ ಈ ಸುದ್ದಿ ಕ್ರಿಕೆಟ್ ಲೋಕದಲ್ಲಿ ಸಾಕಷ್ಟು ಚರ್ಚೆ ಹುಟ್ಟುಹಾಕಿತ್ತು. ಮಾಜಿ ಕ್ರಿಕೆಟಿಗರು ಹಾಗೂ ಪರಿಣಿತರು ಕೊಹ್ಲಿ ವಿರುದ್ಧ ಮುಗಿಬಿದ್ದಿದ್ದರು. ಆದರೀಗ ಇಡೀ ಘಟನೆಯ ಬಗ್ಗೆ ಮಾತನಾಡಿರುವ ಸ್ಯಾಮ್ ಕೊನ್‌ಸ್ಟಾಸ್, 'ಕೊಹ್ಲಿ ಉದ್ದೇಶಪೂರ್ವಕವಾಗಿ ತನಗೆ ಡಿಕ್ಕಿ ಹೊಡೆದಿಲ್ಲ. ಬದಲಿಗೆ ಅದು ಆಕಸ್ಮಿಕವಾಗಿ ನಡೆದ ಘಟನೆಯಾಗಿದೆ. ಕ್ರಿಕೆಟ್‌ನಲ್ಲಿ ಈ ರೀತಿಯ ಘಟನೆಗಳು ಆಗಾಗ ಸಂಭವಿಸುತ್ತವೆ. ಆ ಸಂದರ್ಭದಲ್ಲಿ ನನಗೇನೂ ಅರ್ಥವಾಗಲಿಲ್ಲ. ನಾನು ನನ್ನ ಕೈಗವಸುಗಳನ್ನು ಹಾಕಿಕೊಳ್ಳುತ್ತಿದ್ದ ವೇಳೆ ಇದ್ದಕ್ಕಿದ್ದಂತೆ ಕೊಹ್ಲಿ ಅವರ ಭುಜವು ನನ್ನ ಕೈಗೆ ತಾಗಿತು. ಇದೆಲ್ಲವೂ ಕ್ರಿಕೆಟ್‌ನಲ್ಲಿ ನಡೆಯುತ್ತಲೇ ಇರುತ್ತದೆ ಎಂದಿದ್ದಾರೆ. ಈ ಮೂಲಕ ಸಾಕಷ್ಟು ಚರ್ಚೆಗೆ ಒಳಗಾಗಿದ್ದ ವಿಷಯವನ್ನು ತಿಳಿಗೊಳಿಸುವ ಕೆಲಸವನ್ನು ಈ ಯುವ ಕ್ರಿಕೆಟಿಗ ಮಾಡಿದ್ದಾನೆ.

# ಜೈಸ್ವಾಲ್ ಮಾಡಿದ ತಪ್ಪಿಗೆ ರೋಹಿತ್ ಗರಂ

ಮೆಲ್ಬೋರ್ನ್‌ನಲ್ಲಿ ನಡೆಯುತ್ತಿರುವ ಬಾಕ್ಸಿಂಗ್ ಡೇ ಟೆಸ್ಟ್‌ನಲ್ಲಿ ಭಾರತದ ನಾಯಕ ರೋಹಿತ್ ಶರ್ಮಾ, ಯುವ ಆಟಗಾರ ಯಶಸ್ವಿ ಜೈಸ್ವಾಲ್ ಫೀಲ್ಡಿಂಗ್ ವೇಳೆ ಮಾಡಿದ ತಪ್ಪಿಗೆ ಕೋಪಗೊಂಡಿದ್ದಾರೆ. ಸ್ಟಂಪ್ ಮೈಕ್‌ನಲ್ಲಿ ರೆಕಾರ್ಡ್ ಆಗಿರುವಂತೆ ರೋಹಿತ್, ಜೈಸ್ವಾಲ್‌ಗೆ ಬೀದಿ ಕ್ರಿಕೆಟ್ ಆಡುತ್ತಿದ್ದೀಯಾ ಎಂದು ಗದರಿದ್ದಾರೆ. ಭಾರತ ಮತ್ತು ಆಸ್ಟ್ರೇಲಿಯಾ ನಡುವಿನ ಬಾಕ್ಸಿಂಗ್ ಡೇ ಟೆಸ್ಟ್ ಮೆಲ್ಬೋರ್ನ್‌ನಲ್ಲಿ ನಡೆಯುತ್ತಿದೆ. ಈ ಟೆಸ್ಟ್ ಪಂದ್ಯದ ಮೊದಲ ದಿನದಾಟ ಮುಗಿದಿದ್ದು, ಆತಿಥೇಯರಿಂದ ದಿಟ್ಟ ಪ್ರದರ್ಶನ ಕಂಡುಬಂದಿದೆ. ಇದೇ ವೇಳೆ ವಿಕೆಟ್‌ಗಾಗಿ ಕಾಯ್ದು ಕಾಯ್ದು ಹೈರಾಣಾಗಿದ್ದ ಟೀಂ ಇಂಡಿಯಾ ನಾಯಕ ರೋಹಿತ್ ಶರ್ಮಾ, ತಂಡದ ಯುವ ಆಟಗಾರ ಯಶಸ್ವಿ ಜೈಸ್ವಾಲ್ ಮಾಡಿದ ತಪ್ಪಿಗೆ ಮೈದಾನದಲ್ಲೇ ಕೋಪಗೊಂಡಿದ್ದಾರೆ. ಲೈವ್ ಪಂದ್ಯದ ವೇಳೆ ಕೋಪಗೊಂಡಿರುವ ನಾಯಕ ರೋಹಿತ್, ಜೈಸ್ವಾಲ್ ವಿರುದ್ಧ ಗರಂ ಆಗಿ ಆಡಿರುವ ಮಾತುಗಳು ಸ್ಟಂಪ್ ಮೈಕ್‌ನಲ್ಲಿ ರೆಕಾರ್ಡ್ ಆಗಿದ್ದು, ಇದೀಗ ಸಖತ್ ವೈರಲ್ ಆಗುತ್ತಿದೆ. ಈ ವೀಡಿಯೊದಲ್ಲಿ ರೋಹಿತ್, ಜೈಸ್ವಾಲ್ ಅವರನ್ನು ಬೀದಿ ಕ್ರಿಕೆಟ್ ಆಡುತ್ತಿದ್ದೀಯಾ ಎಂದು ಗದರಿರುವುದನ್ನು ನಾವು ನೋಡಬಹುದಾಗಿದೆ.

**ನೀನು ಬೀದಿ ಕ್ರಿಕೆಟ್ ಆಡುತ್ತಿದ್ದೀಯಾ**

ವಾಸ್ತವವಾಗಿ, ಆಸ್ಟ್ರೇಲಿಯಾ ಪರ ಸ್ಟೀವ್ ಸ್ಮಿತ್ ಮತ್ತು ಮಾರ್ನಸ್ ಲಬುಶೇನ್ ಬ್ಯಾಟಿಂಗ್ ಮಾಡುತ್ತಿದ್ದಾಗ ರೋಹಿತ್, ಜೈಸ್ವಾಲ್‌ರನ್ನು ಸಿಲ್ಲಿ ಪಾಯಿಂಟ್ ಹಾಗೂ ಸಿಲ್ಲಿ ಮಿಡ್ ಆಫ್ ನಡುವೆ ಫಿಲ್ಡಿಂಗ್‌ಗೆ ನಿಯೋಜಿಸಿದ್ದರು. ಆದರೆ ಈ ವೇಳೆ ಕೊಂಚ ಎಚ್ಚರ ತಪ್ಪಿದ್ದ ಜೈಸ್ವಾಲ್, ಚೆಂಡು ಅವರ ಬಳಿ ಬರುವ ಮೊದಲೇ ಮೇಲಕ್ಕೆ ಜಿಗಿದರು. ಇದನ್ನು ನೋಡಿದ ರೋಹಿತ್ ಶರ್ಮಾ ಜೈಸ್ವಾಲ್‌ಗೆ, 'ಹೇ ಜಸ್ಸು, ನೀನು ಬೀದಿ ಕ್ರಿಕೆಟ್ ಆಡುತ್ತಿದ್ದೀಯಾ ಬ್ಯಾಟ್ಸ್‌ಮನ್ ಆಡುವವರೆಗೆ ಮೇಲೆ ಎದ್ದೇಳಬೇಡ ಎಂದಿದ್ದಾರೆ.





# ತನ್ನ ಪ್ರದರ್ಶನದ ಬಗ್ಗೆ ಬೇಸರ ಹೊರಹಾಕಿದ ಕೊಹ್ಲಿ

ಬಾರ್ಡರ್- ಗವಾಸ್ಕರ್ ಟೆಸ್ಟ್ ಸರಣಿಯಲ್ಲಿ ವಿರಾಟ್ ಕೊಹ್ಲಿಯ ಬ್ಯಾಟ್ ಅದ್ಯಾಕೋ ಮೌನಕ್ಕೆ ಶರಣಾಗಿದೆ. ಮೊದಲ ಟೆಸ್ಟ್‌ನಲ್ಲಿ ಭರ್ಜರಿ ಶತಕ ಸಿಡಿಸಿದ್ದ ವಿರಾಟ್ ಆ ಬಳಿಕ ನಿರೀಕ್ಷಿತ ಪ್ರದರ್ಶನ ನೀಡಿಲ್ಲ. ಶತಕವಿರಲಿ, ಕೊಹ್ಲಿ ಬ್ಯಾಟ್‌ನಿಂದ ಅರ್ಧಶತಕದ ಇನ್ನಿಂಗ್ಸ್ ಹೊರಬರುವುದು ಕಷ್ಟವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ನಾಲ್ಕನೇ ಟೆಸ್ಟ್‌ಗೆ ಭರ್ಜರಿ ಸಿದ್ಧತೆ ನಡೆಸಿರುವ ಕೊಹ್ಲಿ, ಬಾಕ್ಸಿಂಗ್ ಡೇ ಟೆಸ್ಟ್ ಆರಂಭಕ್ಕೂ ಮುನ್ನ ರವಿಶಾಸ್ತ್ರಿ ಅವರೊಂದಿಗೆ ಮಾತುಕತೆ ನಡೆಸಿದ್ದು, ತನ್ನ ಪ್ರದರ್ಶನದ ಬಗ್ಗೆ, ತಂಡ ತನ್ನ ಮೇಲಿಟ್ಟಿರುವ ನಿರೀಕ್ಷೆಗಳ ಬಗ್ಗೆ ಹಾಗೂ ಬಾಕ್ಸಿಂಗ್ ಡೇ ಟೆಸ್ಟ್ ಬಗ್ಗೆ ಮನಬಿಚ್ಚಿ ಮಾತನಾಡಿದ್ದಾರೆ.

**ಹೌದು ನಾನು ಒಪ್ಪುತ್ತೇನೆ**

**ನಾನು ಶಿಸ್ತುಬದ್ಧವಾಗಿ ಆಡಲಿಲ್ಲ**

ಈ ವೇಳೆ ಕಳೆದ ಕೆಲವು ಇನ್ನಿಂಗ್ಸ್‌ನಲ್ಲಿ ನಿರೀಕ್ಷಿತ ಪ್ರದರ್ಶನ ಕಂಡುಬರದಿರುವ ಬಗ್ಗೆ ರವಿಶಾಸ್ತ್ರಿ ಕೊಹ್ಲಿ ಬಳಿ ಪ್ರಶ್ನೆ ಮಾಡಿದ್ದಾರೆ. ಇದಕ್ಕೆ ಉತ್ತರಿಸಿದ ಕೊಹ್ಲಿ, 'ಹೌದು, ಕೊನೆಯ ಎರಡು ಮೂರು ಇನ್ನಿಂಗ್ಸ್‌ಗಳು ನಾನು ಬಯಸಿದ ರೀತಿಯಲ್ಲಿ ನಡೆಯಲಿಲ್ಲ ಎಂಬುದನ್ನು ನಾನು ಒಪ್ಪುತ್ತೇನೆ. ನಾನು ಶಿಸ್ತುಬದ್ಧವಾಗಿ ಆಡಲಿಲ್ಲ, ಇದು ಟೆಸ್ಟ್ ಕ್ರಿಕೆಟ್ ತರುವ ಸವಾಲು. ನಿಸ್ಸಂಶಯವಾಗಿ ಈ ಪಿಚ್‌ಗಳು ಕಳೆದ ಬಾರಿಗಿಂತ ಈ ಬಾರಿ ಸಾಕಷ್ಟು ಸವಾಲಿನವಾಗಿವೆ. ಹಾಗಾಗಿ ಇಲ್ಲಿ ಬ್ಯಾಟಿಂಗ್‌ಗೆ ವಿಭಿನ್ನ ವಿಧಾನದ ಅಗತ್ಯವಿದೆ. ಆದಾಗ್ಯೂ, ಇಲ್ಲಿನ ವಿಭಿನ್ನ ಸನ್ನಿವೇಶಗಳನ್ನು ಎದುರಿಸಲು ಮತ್ತು ತಂಡದ ನಿರೀಕ್ಷೆಗೆ ತಕ್ಕಂತೆ ಆಡಲು ಮತ್ತು ನನ್ನ ತಂಡಕ್ಕೆ ದೊಡ್ಡ ಕೊಡುಗೆಯನ್ನು ನೀಡಲು ಬಯಸುತ್ತೇನೆ ಎಂದಿದ್ದಾರೆ.

**ನಿರೀಕ್ಷೆಗಳು ಯಾವಾಗಲೂ ಇರುತ್ತವೆ**

ಪ್ರತಿ ಪಂದ್ಯದಲ್ಲೂ ಉತ್ತಮ ಪ್ರದರ್ಶನ ನೀಡುವ ನಿರೀಕ್ಷೆಯನ್ನು ಹೇಗೆ ನಿಭಾಯಿಸುತ್ತಾರೆ ಎಂಬ ಪ್ರಶ್ನೆಗೆ ಉತ್ತರಿಸಿದ ಕೊಹ್ಲಿ, 'ನಿರೀಕ್ಷೆಗಳು ಯಾವಾಗಲೂ ಇರುತ್ತವೆ. ನನ್ನ ಪ್ರಕಾರ ಇಷ್ಟು ದಿನ ದೇಶಕ್ಕಾಗಿ ಆಡಿದ ನಂತರ ಇಷ್ಟು ರನ್ ಗಳಿಸಿದ ನಂತರ, ನಿರೀಕ್ಷೆಗಳು ಯಾವಾಗಲೂ ಇರುತ್ತವೆ. ನಿಮ್ಮ ಯೋಜನೆಗಳನ್ನು ನೀವು ಅರ್ಥಮಾಡಿಕೊಂಡಿದ್ದೀರಿ ಮತ್ತು ನೀವು ಇರುವ ಜಾಗವನ್ನು ನೀವು ಅರ್ಥಮಾಡಿಕೊಂಡಿದ್ದೀರಿ ಎಂದು ಖಚಿತಪಡಿಸಿಕೊಳ್ಳುವುದು ಮುಖ್ಯ ಎಂದರು.





Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru 560044, Karnataka. Owned By, Published By, Editor :T. HON[illegible]
No. 1230, Jayamahal, Ground Floor, 13th Cross, 2nd Phase, Girinagar, Bengaluru 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966